# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟಿ

ದಾವಣಗೆರೆ ಸೋಮವಾರ, ಜನವರಿ 09, 2023

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49 ಸಂಚಿಕೆ : 237 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




## ಅನ್ವೇಷಣೆಗಳಲ್ಲಿ ತೊಡಗಿಸಿಕೊಳ್ಳಿ

**ಜಿಲ್ಲಾ ಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ಆರ್.ಬಿ. ವಸಂತಕುಮಾರಿ ಕರೆ**

ದಾವಣಗೆರೆ, ಜ.8- ವೈಜ್ಞಾನಿಕ ಅನ್ವೇಷಣೆಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದುದ್ದಕ್ಕೂ ನಿರಂತರವಾಗಿಸಿಕೊಂಡು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವಿಜ್ಞಾನ ವಿಷಯ ಪರಿವೀಕ್ಷಕರಾದ ಆರ್.ಬಿ. ವಸಂತಕುಮಾರಿ ಹೇಳಿದರು.


ಅವರು, ಇಂದು ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಜಿಲ್ಲಾ ಸಮಿತಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 30ನೇ ದಾವಣಗೆರೆ ಜಿಲ್ಲಾ ಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ -2023 ಉದ್ಘಾಟಿಸಿ ಮಾತನಾಡಿದರು.

ವೈಜ್ಞಾನಿಕ ಅನ್ವೇಷಣೆಗಳ ವಿಚಾರಗಳು ಕೇವಲ ಸ್ಪರ್ಧೆಗೆ ಹಾಗೂ ವಿದ್ಯಾರ್ಥಿ ಜೀವನಕ್ಕೆ ಸೀಮಿತವಾಗದೆ ಜೀವನದುದ್ದಕ್ಕೂ ತೊಡಗಿಸಿಕೊಳ್ಳಬೇಕು ಎಂದರಲ್ಲದೆ, ಇಲ್ಲಿ ಮಂಡನೆ ಆಗುವಂತಹ ವೈಜ್ಞಾನಿಕ ಚಿಂತನೆಗಳು ಎಲ್ಲವೂ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಲಿ ಎಂದು ಆಶಿಸಿದರು.

ಡಾ. ಎ.ಟಿ. ಪ್ರೇರಣಾ ಮಾತನಾಡಿ, ವಿಜ್ಞಾನ ಅಂದರೆ ಕೇವಲ ಪುಸ್ತಕದಿಂದ ಓದು, ಜ್ಞಾನ ಸಂಪಾದನೆ ಮಾಡುವುದಲ್ಲ. ಓದಿದ್ದನ್ನು ಅರಿತು (4ನೇ ಪುಟಕ್ಕೆ)

# ಗಡಿನಾಡಿನ ಅಭಿವೃದ್ಧಿಗೆ 100 ಕೋಟಿ

## ಶಾಸ್ತ್ರೀಯ ಭಾಷಾ ಸಂಶೋಧನೆಗೆ ಸರ್ಕಾರದ ಪ್ರೋತ್ಸಾಹ: ಮುಖ್ಯಮಂತ್ರಿ ಬೊಮ್ಮಾಯಿ



**3 ಕೋಟಿ ವೆಚ್ಚದಲ್ಲಿ ಹಾವೇರಿಯಲ್ಲಿ ಕಸಾಪ ಭವನ.**

**ಹೊರ ರಾಜ್ಯದಿಂದ ಬಂದು ನೆಲೆಸಲು ಇಚ್ಛಿಸಿದವರಿಗೆ ಕನ್ನಡ ಕಲಿಕೆ ಕಡ್ಡಾಯ ನೀತಿ ಜಾರಿಗೆ ಚಿಂತನೆ**

**ಕನ್ನಡ ಪರ ಹೋರಾಟಗಾರರ ಮೇಲಿನ ಪ್ರಕರಣಗಳಿಗೆ ಸಂಬಂಧಿಸಿದ ಕೇಸ್ ಹಿಂಪಡೆಯಲು ಸರ್ಕಾರ ಬದ್ಧ**

ಹಾವೇರಿ, ಜ.8- ಗಡಿನಾಡಿನ ಶಿಕ್ಷಣ, ಆರೋಗ್ಯ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಸರ್ಕಾರ 100 ಕೋಟಿ ರೂ. ಒದಗಿಸಲಿದೆ. ಕನ್ನಡದ ಶಾಸ್ತ್ರೀಯ ಭಾಷೆ ಸ್ಥಾನಮಾನದ ಸಂಶೋಧನಾ ಕಾರ್ಯಗಳಿಗೆ ಉನ್ನತ ಮಟ್ಟದಲ್ಲಿ ಸಾಹಿತಿಗಳ ಸಮಿತಿ ರಚಿಸಲಾಗುವುದು. ಸಮಿತಿ ಸೂಚಿಸುವ ಸಂಶೋಧನಾ ಕಾರ್ಯಗಳಿಗೆ ಬೇಕಾದ ಹಣವನ್ನು ಸರ್ಕಾರ ಒದಗಿಸಲಿದೆ. ಸಮ್ಮೇಳನದ ನೆನಪಿಗೆ ಹಾವೇರಿಯಲ್ಲಿ 3 ಕೋಟಿ ರೂ.ವೆಚ್ಚದಲ್ಲಿ ಕಸಾಪ ಭವನ ನಿರ್ಮಿಸಿ, ಕರ್ನಾಟಕ ಜಾನಪದ ವಿವಿ ಸಹಯೋಗದಲ್ಲಿ ಗುಣಮಟ್ಟದ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

86 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಗಡಿನಾಡಿನ ಶಿಕ್ಷಣ, ಆರೋಗ್ಯ ಮತ್ತು ಮೂಲ ಸೌಕರ್ಯಗಳ ಅಭಿವೃದ್ಧಿಗೆ ಈಗಾಗಲೇ 25 ಕೋಟಿ ರೂ. ಅನುದಾನ ಒದಗಿಸಿದ್ದು, ಈ ವರ್ಷ ಇನ್ನೂ 100 ಕೋಟಿ ರೂ. ಅನುದಾನ ಒದಗಿಸಲಾಗುವುದು. ಕನ್ನಡಕ್ಕಾಗಿ ಹೋರಾಡಿದ ಹೋರಾಟಗಾರರ ಮೇಲಿರುವ ಕಾಗ್ನಿಜಬಲ್ ಹೊರತುಪಡಿಸಿ, ಉಳಿದ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನಿನಲ್ಲಿ ಇರುವಂತಹ ಅವಕಾಶಗಳನ್ನು ಪರಿಶೀಲಿಸಿ, ಕೇಸ್‌ಗಳನ್ನು ಹಿಂದೆ ಪಡೆಯಲು ಸರ್ಕಾರ ಬದ್ಧವಾಗಿದೆ .

2008 ರಿಂದ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಲಭಿಸಿದೆ. ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ 13.30 ಕೋಟಿ ರೂ. ನೆರವು ದೊರೆತಿದೆ. ಮೈಸೂರು ವಿವಿಯ ದೊಡ್ಡ ಕಟ್ಟಡವೊಂದನ್ನು ಈಗಾಗಲೇ ಅಧ್ಯಯನ ಕೇಂದ್ರಕ್ಕೆ ನೀಡಲಾಗಿದೆ. ಶಾಸ್ತ್ರೀಯ ಭಾಷೆ ಕುರಿತ ಸಂಶೋಧನೆ, ಗ್ರಂಥಾಲಯ, ಚರ್ಚೆಗಳಿಗೆ ಮಾರ್ಗದರ್ಶನ ಮಾಡಲು ಸಮ್ಮೇಳನಾಧ್ಯಕ್ಷರ ಮಾರ್ಗದರ್ಶನದಲ್ಲಿ ನಾಡಿನ ಹಿರಿಯ ಸಾಹಿತಿಗಳ ಸಮಿತಿ ರಚಿಸಲಾಗುವುದು. ಸಮಿತಿ ಸೂಚಿಸುವ ಕಾರ್ಯಗಳಿಗೆ ಎಷ್ಟು ಅನುದಾನ ಬೇಕಾದರೂ ಸರ್ಕಾರ ಒದಗಿಸಲಿದೆ. ಹಾವೇರಿ ಜಿಲ್ಲಾ ಕಸಾಪ ಭವನ ನಿರ್ಮಾಣಕ್ಕೆ 3 ಕೋಟಿ ರೂ.ಒದಗಿಸಲಾಗುವುದು. ಕರ್ನಾಟಕ ಜಾನಪದ ವಿವಿ ಸಹಯೋಗದಲ್ಲಿ ಅಲ್ಲೊಂದು ಗುಣಮಟ್ಟದ ಸಂಶೋಧನಾ ಕೇಂದ್ರವನ್ನು ಕಸಾಪ ರೂಪಿಸಬೇಕು ಎಂದರು.

ರಾಜ್ಯದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದವರಿಗೆ ಪಿಂಚಣಿ ನೀಡುವ ರೀತಿ, ಗಡಿಯಾಚೆ ಹೋರಾಡಿದ ಕನ್ನಡಿಗರಿಗೂ ಪಿಂಚಣಿ ನೀಡುವ ಕಾರ್ಯವನ್ನು ಸರ್ಕಾರ ಪ್ರಾರಂಭಿಸಲಿದೆ ಎಂದು ಹೇಳಿದರು.

ಕಾನೂನು ತೊಡಕು ನಿವಾರಿಸಿಕೊಂಡು ಮಹದಾಯಿ ಯೋಜನೆ, ಕಳಸಾ ಬಂಡೂರಿ ಯೋಜನೆಯಾಗಿ ಅನುಷ್ಠಾನವಾಗಲಿದೆ. ಆಲಮಟ್ಟಿ ಜಲಾಶಯದ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಲು ಶೀಘ್ರ ನ್ಯಾಯಮಂಡಳಿಯ ಅನುಮೋದನೆ ಸಿಗುವ ಭರವಸೆ ಇದೆ. ಭದ್ರಾ ಮೇಲ್ದಂಡೆ ಯೋಜನೆ ಮೂಲಕ ಮಧ್ಯ ಕರ್ನಾಟಕದ ಲಕ್ಷಾಂತರ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ಕರ್ನಾಟಕಕ್ಕೆ ಹೊರ ರಾಜ್ಯದ ಜನ ದೊಡ್ಡ ಪ್ರಮಾಣದಲ್ಲಿ ಬರುತ್ತಿದ್ದಾರೆ. ಆದರೆ, ಕನ್ನಡ ಕಲಿಯುತ್ತಿಲ್ಲ, ಈ ನಾಡಿನಲ್ಲಿ ನೆಲೆಸಲು ಇಚ್ಛಿಸುವವರು ಕಡ್ಡಾಯವಾಗಿ ಕನ್ನಡ (2ನೇ ಪುಟಕ್ಕೆ)

# ಕೋಟೆನಾಡಿನಲ್ಲಿ ಪರಿಶಿಷ್ಟರ ಪರ ಕಾಂಗ್ರೆಸ್ ಬದ್ಧತೆ



**ಎಸ್‌ಸಿ - ಎಸ್‌ಟಿ ಸಮುದಾಯಗಳ ಕಲ್ಯಾಣಕ್ಕೆ ದಶ ಘೋಷಣೆ**

ಚಿತ್ರದುರ್ಗ, ಜ. 8 – ಪರಿಶಿಷ್ಟರ ಮೀಸಲಾತಿ ಹೆಚ್ಚಳನ್ನು ಸಂವಿಧಾನದ 9ನೇ ಷೆಡ್ಯೂಲ್‌ಗೆ ಸೇರಿಸುವಂತೆ ಒತ್ತಾಯಿಸಿರುವ ಕಾಂಗ್ರೆಸ್, ತನ್ನ ಸರ್ಕಾರ ಅಧಿಕಾರಕ್ಕೆ ಬಂದಲ್ಲಿ ಮೊದಲ ಅಧಿವೇಶನದಲ್ಲೇ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಮಂಡಿಸುವುದಾಗಿ ಘೋಷಿಸಿದೆ.

ಚಿತ್ರದುರ್ಗದಲ್ಲಿ ಆಯೋಜಿಸಲಾಗಿದ್ದ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಐಕ್ಯತಾ ಸಮಾವೇಶದಲ್ಲಿ ಈ ಬಗ್ಗೆ ಬದ್ಧತೆ ವ್ಯಕ್ತಪಡಿಸಿರುವ ಕಾಂಗ್ರೆಸ್, ಸಂವಿಧಾನಕ್ಕೆ ತಿದ್ದುಪಡಿ ತರಲು ಬಿಜೆಪಿ ಮುಂದಾದರೆ ದೊಡ್ಡ ಆಂದೋಲನವೇ ಆಗಲಿದೆ ಎಂದು ಎಚ್ಚರಿಕೆ ನೀಡಿದೆ.

ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡಿದ ಹಲವಾರು ಕಾಂಗ್ರೆಸ್ ನಾಯಕರು, ಬಿಜೆಪಿಯನ್ನು ದಲಿತ ವಿರೋಧಿ ಎಂದು ತರಾಟೆಗೆ ತೆಗೆದುಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಪರಿಶಿಷ್ಟ ಸಮುದಾಯದವರು ಛಿದ್ರವಾದರೆ ನಿಮ್ಮನ್ನು ಯಾರೂ ಕೇಳುವವರು ಇರುವುದಿಲ್ಲ. ನಿಮ್ಮಲ್ಲಿ ಒಗ್ಗಟ್ಟು ಇಲ್ಲದಿದ್ದರೆ ಬ್ರಿಟೀಷರಂತೆ ತುಂಡು ತುಂಡಾಗಿ ವಿಭಜಿಸಿ ಒಡೆದು ಆಳುತ್ತಾರೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಮಾತನಾಡಿ, ಎಲ್ಲ ಶೋಷಿತ ವರ್ಗಗಳು, ಅವಕಾಶ ವಂಚಿತ ವರ್ಗಗಳು ಹಾಗೂ ಸಾಮಾಜಿಕ ನ್ಯಾಯದಿಂದ ವಂಚಿತರಾಗಿರುವ ಜನ ಒಗ್ಗೂಡಿ ಇಂದು ಹೋರಾಟ ಮಾಡಬೇಕಾದ ಅಗತ್ಯವಿದೆ. ಕಾಂಗ್ರೆಸ್ ಯಾವತ್ತಿಗೂ ಸಾಮಾಜಿಕ ನ್ಯಾಯದಲ್ಲಿ ನಂಬಿಕೆ, ಬದ್ಧತೆ ಇರುವ ಪಕ್ಷ ಎಂದು ಹೇಳಿದರು.

2020ರ ಫೆಬ್ರವರಿಯಲ್ಲಿಯೇ ನಾಗಮೋಹನ ದಾಸ್ ಆಯೋಗ ವರದಿ ನೀಡಿದ್ದರೂ ಬಿಜೆಪಿ ಸರ್ಕಾರ 3 ವರ್ಷ ನಿದ್ದೆಯಲ್ಲಿತ್ತು. ಈಗ ಚುನಾವಣೆ ಸಮೀಪಿಸಿದಾಗ ಮೀಸಲಾತಿ ಹೆಚ್ಚಿಸಿದ್ದೇವೆ ಎಂದು ಹೇಳುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ಜನವರಿ 31ರ ಒಳಗಾಗಿ ಸಂವಿಧಾನ ತಿದ್ದುಪಡಿ ತಂದು ಮೀಸಲಾತಿ ಹೆಚ್ಚಳವನ್ನು 9ನೇ ಶೆಡ್ಯೂಲ್‌ಗೆ ಸೇರಿಸಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷ ಪರಿಶಿಷ್ಟರ ಪರವಾಗಿ ಬೀದಿಗಿಳಿದು ಹೋರಾಟ ನಡೆಸಲಿದೆ ಎಂದವರು ಎಚ್ಚರಿಸಿದರು.

ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, (2ನೇ ಪುಟಕ್ಕೆ)

## ಸಿರಿಗೆರೆ: ಸದ್ಧರ್ಮ ನ್ಯಾಯ ಪೀಠಕ್ಕೆ ಇಂದು ಬಿಡುವು



ಸಿರಿಗೆರೆ, ಜ.8- ಬೆಂಗಳೂರಿನ ವಿಧಾನಸೌಧ ದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ನೇತೃತ್ವದಲ್ಲಿ ಪಠ್ಯದಲ್ಲಿ ನೈತಿಕ ಶಿಕ್ಷಣ ಅನುಷ್ಠಾನದ ಸಾಧಕ ಬಾಧಕ ಕುರಿತು ಸಭೆ ಆಯೋಜಿಸಲಾಗಿದೆ.

ಈ ಸಭೆಯಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ (4ನೇ ಪುಟಕ್ಕೆ)

## ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲಿನ ಚೀನಾ ನಿರ್ಬಂಧ ತೆರವು

ನವದೆಹಲಿ, ಜ. 8- 2020ರ ಮಾರ್ಚ್‌ನಲ್ಲಿ ಅಂತರ ರಾಷ್ಟ್ರೀಯ ಪ್ರಯಾಣದ ಮೇಲೆ ಹೇರಲಾಗಿದ್ದ ನಿರ್ಬಂಧ ಗಳನ್ನು ಚೀನ ತೆರವುಗೊಳಿಸಿದೆ. ದೇಶಕ್ಕೆ ಬರುವವರು ಇನ್ನು ಮುಂದೆ ಕ್ವಾರಂಟೈನ್‌ಗೆ ಒಳಗಾಗಬೇಕಿಲ್ಲ. ಆದರೆ, ದೇಶಕ್ಕೆ ಬರುವ 48 ಗಂಟೆಗಳ ಮುಂಚೆ ಕೊರೊನಾ ಪರೀಕ್ಷೆ ಮಾಡಿಸಿಕೊಂಡು ನೆಗೆಟಿವ್ ವರದಿ ಹೊಂದಿರಬೇಕು.

## ಜಗಳೂರು: ಸಾಮಾಜಿಕ ಕಾರ್ಯಕರ್ತನ ಹತ್ಯೆ

**ಇಬ್ಬರ ಬಂಧನ: ತನಿಖೆ ಚುರುಕು: ಎಸ್ಪಿ**



ಜಗಳೂರು, ಜ. 8- ತಾಲ್ಲೂಕಿನ ಗೌರಿಪುರ ಗ್ರಾಮದ ಸಾಮಾಜಿಕ ಕಾರ್ಯಕರ್ತ ರಾಮಕೃಷ್ಣ (30) ಎಂಬ ಯುವಕನ್ನು ಹೊಸಕೆರೆ ಮಾಯಮ್ಮ ಡಾಬಾದಲ್ಲಿ ಶನಿವಾರ ರಾತ್ರಿ ಹತ್ಯೆ ಮಾಡಲಾಗಿದೆ.

ಮೃತನ ತಂದೆ ಪಿ.ಪ್ರಕಾಶ್ ಅವರು ನನಗೆ ಇಬ್ಬರು ಗಂಡು ಮಕ್ಕಳು, ಒಬ್ಬಳು (4ನೇ ಪುಟಕ್ಕೆ)

# ವೀಸಾ ಹೆಚ್ಚಾದರೂ ವೆಚ್ಚದ ಚಿಂತೆ

## ಬೆಲೆ ಏರಿಕೆಯಿಂದಾಗಿ ಬ್ರಿಟನ್‌ಗೆ ತೆರಳುವ ವಿದ್ಯಾರ್ಥಿಗಳಿಗೆ ಸಂಕಷ್ಟ

ನವದೆಹಲಿ, ಜ. 8 – ಭಾರತೀಯ ವಿದ್ಯಾರ್ಥಿಗಳು ತನ್ನಲ್ಲಿ ಅಧ್ಯಯನ ಮಾಡಲು ಬ್ರಿಟನ್ ಈ ವರ್ಷ ಹೆಚ್ಚಿನ ಪ್ರಮಾಣದ ವೀಸಾ ನೀಡುತ್ತಿದೆ. ಆದರೆ, ಹಣದುಬ್ಬರದ ಕಾರಣದಿಂದಾಗಿ ಬ್ರಿಟನ್‌ನಲ್ಲಿ ನೆಲೆಸುವುದು ಹಾಗೂ ಬದುಕುವುದು ವಿದೇಶಿ ವಿದ್ಯಾರ್ಥಿಗಳಿಗೆ ಕಠಿಣವಾಗುತ್ತಿದೆ.

ದುಬಾರಿ ಕಾಲದಲ್ಲಿ ತಮ್ಮದಲ್ಲದ ದೇಶದಲ್ಲಿ ನೆಲೆ ಹುಡುಕಿಕೊಳ್ಳುವುದು ಹಾಗೂ ಬದುಕಲು ವ್ಯವಸ್ಥೆ ಮಾಡಿಕೊಳ್ಳುವುದು ಕಠಿಣವಾಗುತ್ತಿದೆ ಎಂದು ವಿದ್ಯಾ ರ್ಥಿಗಳು ಹಾಗೂ ಉದ್ಯಮದ ಪರಿಣಿತರು ತಿಳಿಸಿದ್ದಾರೆ.

ಬ್ರಿಟನ್‌ನಲ್ಲಿ ನಿರಂತರವಾಗಿ ಆಹಾರ ಬೆಲೆಗಳು ಏರುತ್ತಿವೆ. ಹಣದುಬ್ಬರದಿಂದಾಗಿ ಬ್ರಿಟನ್‌ನ ಹಲವು ವಲಯದ ಕಾರ್ಮಿಕರು ಹಾಗೂ ಉದ್ಯೋಗಿಗಳು ಸರಣಿ ಪ್ರತಿಭಟನೆ ನಡೆಸಿದ್ದಾರೆ.

2022ರಲ್ಲಿ ಬ್ರಿಟನ್‌ನಲ್ಲಿ ಹಣದುಬ್ಬರ ದಾಖಲೆ ಮಟ್ಟದಲ್ಲಿತ್ತು. ಕಳೆದ ನವೆಂಬರ್‌ನಲ್ಲಿ ಹಣದುಬ್ಬರ ಶೇ.9.3 ರವರೆಗೆ ತಲುಪಿತ್ತು. 2022ರ ಸೆಪ್ಟೆಂಬರ್‌ಗೆ ಅಂತ್ಯಗೊಂಡ ವರ್ಷದಲ್ಲಿ ಭಾರತದ 1.27 ಲಕ್ಷ (2ನೇ ಪುಟಕ್ಕೆ)

# ಸಾಧನೆಯ ಗುರಿಯೊಂದಿಗೆ ಈಗಿನಿಂದಲೇ ಶ್ರಮ ವಹಿಸಿ



**ವಿಜ್ಞಾನ ಅಕಾಡೆಮಿಯ ಪ್ರತಿಭಾ ಪುರಸ್ಕಾರ ಹಾಗೂ ಬೀಳ್ಕೊಡುಗೆ ಸಮಾರಂಭದಲ್ಲಿ 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್**

ದಾವಣಗೆರೆ, ಜ. 8- ಉದ್ಯೋಗ ಹಾಗೂ ಉಜ್ವಲ ಭವಿಷ್ಯಕ್ಕೆ ಶಿಕ್ಷಣವೇ ಮೂಲ. ಸಾಧನೆಯ ಗುರಿ ಇಟ್ಟುಕೊಂಡು, ಈಗಿನಿಂದಲೇ ಶ್ರಮವಹಿಸಿದರೆ ಯಶಸ್ಸು ಸಾಧ್ಯ ಎಂದು 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್ ಹೇಳಿದರು.

ವಿಜ್ಞಾನ ಅಕಾಡೆಮಿ ವತಿಯಿಂದ ನಗರದ ಬಿಐಇಟಿ ಕಾಲೇಜು ಆವರಣದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಹಾಗೂ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಹಿಂದೆ ಇಂತಹದ್ದೇ ಉದ್ಯೋಗಕ್ಕಾಗಿ ಶಿಕ್ಷಣ ಎನ್ನುವ ಮನಸ್ಥಿತಿ ಇರಲಿಲ್ಲ. ಪದವಿ ಪಡೆಯುವುದೇ ವಿದ್ಯಾರ್ಥಿಗಳ ಗುರಿಯಾಗಿತ್ತು. ಆದರೆ, ಪ್ರಸ್ತುತ ಸ್ಪರ್ಧಾತ್ಮಕ ದಿನಗಳಲ್ಲಿ ಏನು ಓದಿದರೆ ಯಾವ ಕ್ಷೇತ್ರದಲ್ಲಿ ಸಾಧನೆ ಮಾಡಬಹುದು ಎಂದು ಕರಾರುವಾಕ್ಕಾದ ಮಾರ್ಗದರ್ಶನದ ಜೊತೆ, ಶಿಕ್ಷಣವನ್ನೂ ನೀಡಿ, ತಾವು ಅಂದುಕೊಂಡ ಗುರಿ ತಲುಪಲು ಸಾಕಷ್ಟು ಸೌಲಭ್ಯಗಳಿವೆ ಸದ್ಬಳಕೆ ಮಾಡಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.


ಸೂಕ್ತ ಸಂದರ್ಭದಲ್ಲಿ ವಿದ್ಯಾರ್ಥಿಯಲ್ಲಿನ ಜ್ಞಾನ ಹೊರ ತೆಗೆದು ವೇದಿಕೆ ಕಲ್ಪಿಸಿದರೆ ಆ ವಿದ್ಯಾರ್ಥಿ ಮೆರಿಟ್ ಪಡೆಯಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ತಮಗೆ ಸಿಗುವ ತರಬೇತಿ ವ್ಯರ್ಥವಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ನೇತ್ರ ತಜ್ಞ ಡಾ.ಹೆಚ್.ಎಂ. ರವೀಂದ್ರನಾಥ್ ಮಾತನಾಡಿ, ವಿದ್ಯಾರ್ಥಿಯ ಯಶಸ್ಸಿಗೆ ಶ್ರಮ, ಮಾರ್ಗದರ್ಶನ ಹಾಗೂ ಅವಕಾಶಗಳ ಸದ್ಬಳಕೆ ಅತಿ ಮುಖ್ಯ. ಅವಕಾಶಗಳು ಎಲ್ಲರಿಗೂ ಸಿಗುವುದಿಲ್ಲ. ಸಿಕ್ಕಾಗ ಬಳಸಿಕೊಳ್ಳುವುದು ಮುಖ್ಯ. ಪ್ರತಿ ದಿನವೂ ಒಂದು ರೂಪಾಯಿ ಕೂಡಿಟ್ಟರೆ ಹಲವು ವರ್ಷಗಳ ನಂತರ ಅದು (2ನೇ ಪುಟಕ್ಕೆ)


॥ ಶ್ರೀ ಗಿರಿ ಮಲ್ಲೇಶ್ವರ ಪ್ರಸನ್ನ ॥

**18ನೇ ವರ್ಷದ ಚಿರಸ್ಮರಣೆ**





ಶ್ರೀ ಸ.ಸ. ಕಲ್ಮೇಶ್ವರ ಮಹಾರಾಜರ ಶಿಷ್ಯರಾದ

**ಸಂತ ಹೆಚ್.ಡಿ. ಹನುಮಂತಪ್ಪನವರು**

(ಮಾಜಿ ಅಧ್ಯಕ್ಷರು, ನಗರ ಕಾಂಗ್ರೆಸ್ ಸಮಿತಿ, ದಾವಣಗೆರೆ.)

ನೀವು ನಮ್ಮನ್ನಗಲಿ ದಿನಾಂಕ 09.01.2023ಕ್ಕೆ 18 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಧರ್ಮಪತ್ನಿ : ಶ್ರೀಮತಿ ಬಸಮ್ಮ ಹನುಮಂತಪ್ಪ
ಮಾಜಿ ಸದಸ್ಯರು, ದಾವಣಗೆರೆ ಮಹಾನಗರ ಪಾಲಿಕೆ
ಮತ್ತು ನಗರಸಭೆ ಮಾಜಿ ಸದಸ್ಯರು
ಹಾಗೂ ಮಕ್ಕಳು ಮತ್ತು
ಮೊಮ್ಮಕ್ಕಳು, ಬಂಧು-ಮಿತ್ರರು.

# ಮಧ್ಯಪ್ರದೇಶದಲ್ಲಿ 34 ಹುಲಿಗಳ ಸಾವು



ಕರ್ನಾಟಕ ಹುಲಿ ರಾಜ್ಯವಾಗುವ ಸಾಧ್ಯತೆ

ಭೋಪಾಲ್, ಜ. 8- 2022ರಲ್ಲಿ ಮಧ್ಯ ಪ್ರದೇಶದಲ್ಲಿ 34 ಹುಲಿಗಳು ಸಾವನ್ನಪ್ಪಿವೆ. ಇದರಿಂದಾಗಿ 'ಹುಲಿಗಳ ರಾಜ್ಯ' ಎಂಬ ಪಟ್ಟ ಕಳೆದುಕೊಳ್ಳುವ ಸಾಧ್ಯತೆ ಇದೆ. 2018ರ ಸಮೀಕ್ಷೆಯ ಪ್ರಕಾರ ಮಧ್ಯ ಪ್ರದೇಶದಲ್ಲಿ 526 ಹುಲಿಗಳಿದ್ದವು. ಕರ್ನಾಟಕದಲ್ಲಿ 524 ಹುಲಿಗಳಿದ್ದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2022ರಲ್ಲಿ ಸಮೀಕ್ಷೆ ನಡೆಸಿದಾಗ ಮಧ್ಯ ಪ್ರದೇಶದಲ್ಲಿ 34 ಹಾಗೂ ಕರ್ನಾಟಕದಲ್ಲಿ 15 ಹುಲಿಗಳು ಸತ್ತಿರುವುದು ಕಂಡು ಬಂದಿದೆ. ಮಧ್ಯ ಪ್ರದೇಶದಲ್ಲಿ ಹೆಚ್ಚಿನ ಹುಲಿಗಳು ಸತ್ತಿರುವುದು ಏಕೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಹುಲಿಗಳ ಗಣತಿ ನಡೆಸಲಾಗುತ್ತದೆ. 2022ರಲ್ಲಿ ಗಣತಿ ನಡೆಸಲಾಗಿದ್ದು, 2023ರಲ್ಲಿ ಮಾಹಿತಿ ಬಿಡುಗಡೆಯಾಗಲಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2022ರಲ್ಲಿ ಮಧ್ಯ ಪ್ರದೇಶದಲ್ಲಿ 34 ಹುಲಿಗಳು ಸತ್ತಿವೆ. ಕರ್ನಾಟಕದಲ್ಲಿ 15 ಹುಲಿಗಳು ಸತ್ತಿವೆ ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ವೆಬ್ ತಾಣದಲ್ಲಿ ತಿಳಿಸಲಾಗಿದೆ. ಆದರೆ, ಸಾವುಗಳಿಗೆ ಕಾರಣ ಏನು ಎಂಬುದನ್ನು ಪ್ರಕಟಿಸಿಲ್ಲ.

ಹುಲಿಗಳ ಸಂರಕ್ಷಣೆಗಾಗಿ 1972ರಲ್ಲಿ ಪ್ರಾಧಿಕಾರ ರಚಿಸಲಾಗಿತ್ತು. ಇದು ಕೇಂದ್ರ ಅರಣ್ಯ ಹಾಗೂ ಪರಿಸರ ಬದಲಾವಣೆ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ.

2022ರಲ್ಲಿ ಒಟ್ಟಾರೆ ದೇಶದಲ್ಲಿ 117 ಹುಲಿಗಳು ಸಾವನ್ನಪ್ಪಿವೆ. ಹುಲಿಗಳ ಸರಾಸರಿ ವಯಸ್ಸು 12 ರಿಂದ 18 ವರ್ಷವಾಗಿದೆ. ಹೀಗಾಗಿ ಮಧ್ಯ ಪ್ರದೇಶದಲ್ಲಿ 40 ಹುಲಿಗಳು ಸತ್ತರೂ ಅದು ತೀರಾ ಹೆಚ್ಚೇನೂ ಅಲ್ಲ. ಆದರೆ, ಕರ್ನಾಟಕಕ್ಕಿಂತ ಹೆಚ್ಚಿನ ಸಾವು ಸಂಭವಿಸಿರುವುದು ಗಮನಾರ್ಹವಾಗಿದೆ.

2021ರಲ್ಲಿ ಮಧ್ಯ ಪ್ರದೇಶದಲ್ಲಿ 41 ಹುಲಿಗಳು ಸತ್ತಿದ್ದವು.

ಕೆಲವೊಮ್ಮೆ ಹುಲಿಗಳು ನೈಸರ್ಗಿಕವಾಗಿ ದಟ್ಟ ಅರಣ್ಯದಲ್ಲಿ ಹಾಗೂ ಗುಹೆಗಳಲ್ಲಿ ಸಾಯುತ್ತವೆ. ಆಗ ಅವುಗಳ ಸಾವು ಪತ್ತೆಯಾಗದೇ ಇರಬಹುದು ಎಂದು ವನ್ಯಜೀವಿಗಳ ಪ್ರಧಾನ ಸಂರಕ್ಷಣಾಧಿಕಾರಿ ಜೆ.ಎಸ್. ಚೌಹಾಣ್ ತಿಳಿಸಿದ್ದಾರೆ.

ಮಧ್ಯ ಪ್ರದೇಶದಲ್ಲಿ ಆರು ಹುಲಿ ಅಭಯಾರಣ್ಯಗಳಿವೆ. ಇಲ್ಲಿ ವರ್ಷಕ್ಕೆ 240 ಹುಲಿ ಮರಿಗಳು ಜನ್ಮತಳೆಯುತ್ತವೆ.

# ಬೂತ್ ವಿಜಯ ಅಭಿಯಾನಕ್ಕೆ ಕರುಣಾಕರ ರೆಡ್ಡಿ ಚಾಲನೆ



ಹರಪನಹಳ್ಳಿ, ಜ.8- ತಾಲ್ಲೂಕಿನಲ್ಲಿ ಪೂರ್ಣ ಪ್ರಮಾಣ ಸಂಘಟನಾತ್ಮಕವಾಗಿ ಬಿಜೆಪಿಯನ್ನು ಬಲಪಡಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ 'ಬೂತ್ ವಿಜಯ ಅಭಿಯಾನ' ಕಾರ್ಯಕ್ರಮಕ್ಕೆ ಶಾಸಕ ಜಿ. ಕರುಣಾಕರ ರೆಡ್ಡಿ ಚಾಲನೆ ನೀಡಿದರು.

ತಾಲ್ಲೂಕಿನಲ್ಲಿ ಶಾಸಕರು ಹಮ್ಮಿಕೊಂಡಿದ್ದ ವಿಜಯ ಅಭಿಯಾನದಲ್ಲಿ ನೀಲಗುಂದ, ಯಡಿಹಳ್ಳಿ, ಇಂಗಳಗುಂದಿ, ಅಣಿಮೇಗಳ ತಾಂಡಾ, ಶಿಂಗ್ರಿಹಳ್ಳಿ, ಸತ್ತೂರು, ಜಂಬುಲಿಂಗನಹಳ್ಳಿ, ಹಿರೇಮೇಗಳಗೆರೆ, ಅರೆಬಸಾಪುರ, ಪೋತಲಕಟ್ಟೆ, ಗುಂಡಗತ್ತಿ, ತಲವಾಗಲು, ಕಣಿವೆಹಳ್ಳಿ, ಈಶಾಪುರ, ಚೆನ್ನೇಹಳ್ಳಿ ತಾಂಡಾ, ಹಾರಕನಾಳು ದೊಡ್ಡ ತಾಂಡಾ, ತೊಗರಿಕಟ್ಟೆ ಸೇರಿದಂತೆ ಅನೇಕ ಗ್ರಾಮಗಳಿಗೆ ತೆರಳಿ ಮನೆಗಳ ಮೇಲೆ ಬಿಜೆಪಿ ಧ್ವಜಗಳನ್ನು ಹಾಕಿದರು.

ಬಿಜೆಪಿಯನ್ನು ಸಂಘಟನಾತ್ಮಕವಾಗಿ ಬಲಪಡಿಸುವ ಉದ್ದೇಶದಿಂದ ಹಮ್ಮಿಕೊಂಡಿರುವ 'ಬೂತ್ ವಿಜಯ ಅಭಿಯಾನ'ಕ್ಕೆ ಅವರು ತಾಲ್ಲೂಕಿನ ತೊಗರಿಕಟ್ಟೆ ಗ್ರಾಮದಲ್ಲಿ ಚಾಲನೆ ನೀಡಿದರು. ಕೆಲವು ಕಾರ್ಯಕರ್ತರ ಮನೆಗಳಿಗೆ ತೆರಳಿದ ಶಾಸಕರು ಪಕ್ಷದ ಬಾವುಟ ಕೊಟ್ಟು ಸರ್ಕಾರದ ಸಾಧನೆಗಳ ಬಗ್ಗೆ ವಿವರಿಸಿದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಸ್ಪಷ್ಟ ಬಹುಮತ ಪಡೆಯಬೇಕೆಂಬ ಸಂಕಲ್ಪ ಮಾಡಲಾಗಿದೆ. ಹೀಗಾಗಿ, ಪಕ್ಷದ ಸಂಘಟನೆಗೆ ವಿಶೇಷ ಒತ್ತು ಕೊಡಲಾಗುತ್ತಿದೆ ಎಂದು ಅವರು ತಿಳಿಸಿದರು.

**ಹರಪನಹಳ್ಳಿ**

ವಿಜಯನಗರ ಜಿಲ್ಲಾ ರೈತ ಸಂಘದ ಜಿಲ್ಲಾಧ್ಯಕ್ಷ ಬಾಗಳಿ ಕೊಟ್ರೇಶಪ್ಪ. ತೊಗರಿಕಟ್ಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಆನಂದ, ಬಸವರಾಜ್, ಗೌರಿಹಳ್ಳಿ ಕೊಟ್ರೇಶ್, ತೊಗರಿಕಟ್ಟೆ ಹನುಮಂತಪ್ಪ, ಹಾರಕನಾಳ ವೀರೇಶ್ ಶೆಟ್ಟಿ. ಆರ್. ಲೋಕೇಶ್, ಕೆ. ಪ್ರಕಾಶ್ ವಕೀಲ, ಮುತ್ತಿಗಿ ರೇವಣಸಿದ್ದಪ್ಪ, ಪೂಜಾರ್ ಮಹೇಶ್, ಶಾಸಕರ ಆಪ್ತ ಸಹಾಯಕ ಹೇಮಂತ್ ಕುಮಾರ್, ಎಂ. ಮಲ್ಲೇಶ್. ಮಜ್ಜಿಗೆರೆ ಭೀಮಪ್ಪ, ಸಿದ್ದೇಶ್ ರೆಡ್ಡಿ, ಶೀರನಹಳ್ಳಿ ಪ್ರಕಾಶ್, ಶಿಂಗ್ರಿಹಳ್ಳಿ ಮಾಂತೇಶ, ಜೋಗಿ ಬಸವರಾಜ್ ಸೇರಿದಂತೆ ಇತರರು ಇದ್ದರು.

# ಗಡಿನಾಡಿನ ಅಭಿವೃದ್ಧಿಗೆ 100 ಕೋಟಿ

**(1ನೇ ಪುಟದಿಂದ)** ಕಲಿಯಲೇಬೇಕೆಂಬ ನೀತಿ ಜಾರಿಗೊಳಿಸಲು ಚಿಂತನೆ ನಡೆದಿದೆ. ವಲಸೆ ಬಂದು ಇಲ್ಲಿ ನೆಲೆಸುವವರಿಗೆ ಕನ್ನಡ ಕಲಿಸಲು ವಿಶೇಷ ಕೋರ್ಸ್ ರೂಪಿಸಿ, ಜಾರಿಗೊಳಿಸುವ ಕಾರ್ಯಕ್ಕೆ ಆದಷ್ಟು ಬೇಗ ಕಾಯಕಲ್ಪ ನೀಡುತ್ತೇವೆ. ಕನ್ನಡಕ್ಕಾಗಿ ಗಡಿಯಾಚೆ ಹೋರಾಡಿದ ಕನ್ನಡಿಗರಿಗೆ ಪಿಂಚಣಿ ನೀಡಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದರು.

ಕೇಂದ್ರ ಸಂಸದೀಯ ವ್ಯವಹಾರಗಳು, ಗಣಿ ಮತ್ತು ಕಲ್ಲಿದ್ದಲು ಸಚಿವ ಪ್ರಹ್ಲಾದ ಜೋಶಿ ಮಾತನಾಡಿ, ನೆಲ, ಜಲ, ಸಂಸ್ಕೃತಿಯ ಅಭಿಮಾನದೊಂದಿಗೆ ನಾವು ಮುನ್ನಡೆಯಬೇಕು. ಸ್ಥಳೀಯ ಭಾಷೆಗಳ ಮಾಧ್ಯಮಗಳಲ್ಲಿ ಇಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ದೊರೆಯಬೇಕು ಎಂಬ ಚರ್ಚೆಗಳು ನಡೆದಾಗ, ಕೆಲವರು ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ)ಗೆ ವ್ಯತ್ಯಯವಾಗಲಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದಾಗ, ಕೇಂದ್ರ ಗೃಹ ಸಚಿವರು ಆಂಗ್ಲಭಾಷೆಯ ಬಳಕೆಯೇ ಇಲ್ಲದ ಕೊರಿಯಾ, ರಷ್ಯಾ ಮುಂತಾದ ದೇಶಗಳು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ವಿವರಿಸಿದ್ದನ್ನು ಉದಾಹರಿಸಿ, ಹೊಸ ಶಿಕ್ಷಣ ನೀತಿಯಲ್ಲಿ ಸ್ಥಳೀಯ ಭಾಷೆಗೆ ಆದ್ಯತೆ ನೀಡಿರುವುದಾಗಿ ತಿಳಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ. ಕೆ.ಹರಿಪ್ರಸಾದ್ ಮಾತನಾಡಿ, ಕನ್ನಡ-ಕನ್ನಡಿಗ - ಕರ್ನಾಟಕದ ಸಮಗ್ರತೆಯ ಕೇಂದ್ರ ಸ್ಥಾನವೇ ಮನುಷ್ಯತ್ವ, ಮಾನವೀಯತೆಯಾಗಿದೆ. ರಾಜಕೀಯದಲ್ಲಿ ಜಾತಿ, ಧರ್ಮ, ಭ್ರಷ್ಟಾಚಾರ ಬೆರೆತು ಹೋಗಿದೆ. ಸಾಹಿತಿಗಳು ರಾಜಕಾರಣಿಗಳಿಗೆ ಬುದ್ಧಿ ಹೇಳಿ, ತಿದ್ದುವ ಕಾರ್ಯ ಮಾಡಬೇಕು ಎಂದರು.

ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ನಾಡಿನ ಸಾಹಿತಿಗಳು ನಮ್ಮ ನೆಲ ಜಲದ ಶ್ರೀಮಂತಿಕೆ, ಹಿರಿಮೆ, ಗರಿಮೆಗಳನ್ನು ಜಗತ್ತಿಗೆ ಸಾರಿದ್ದಾರೆ. ಸಾಹಿತ್ಯವು ಮನುಷ್ಯರನ್ನು ಬೆಸೆದು ಎಲ್ಲರನ್ನೂ ಒಗ್ಗೂಡಿಸಬೇಕು. ಭಾರತದ ಸಂಸ್ಕೃತಿ, ಪರಂಪರೆಗೆ ಧಕ್ಕೆ ತರಲು ಯತ್ನಿಸುವವರಿಗೆ ಸಾಹಿತ್ಯ ಕ್ಷೇತ್ರ ಎಚ್ಚರಿಕೆ ನೀಡಬೇಕು ಎಂದರು.

ಕಸಾಪ ಅಧ್ಯಕ್ಷ ನಾಡೋಜ ಮಹೇಶ ಜೋಶಿ ಮಾತನಾಡಿ, ಸಂತ ಶಿಶುನಾಳ ಶರೀಫರ ನಾಡಿನಲ್ಲಿ ಸಹಬಾಳ್ವೆಯ ನೆಲದಲ್ಲಿ ಯಾವುದೇ ಧರ್ಮದವರಿಗೆ ಅನ್ಯಾಯ ಮಾಡಲು ಸಾಧ್ಯವಿಲ್ಲ. ಈ ಸಮ್ಮೇಳನದಲ್ಲಿ 11 ಜನ ಧಾರ್ಮಿಕ ಅಲ್ಪಸಂಖ್ಯಾತರಿಗೆ ಅವಕಾಶ ನೀಡಲಾಗಿದೆ. ಇಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿದೆ, ಕನ್ನಡವೇ ಇಲ್ಲಿ ಪ್ರಧಾನ ಯಾವುದೇ ಧರ್ಮ,ಜಾತಿಯ ಸಮ್ಮೇಳನವಲ್ಲ ಎಂದು ಸ್ಪಷ್ಟೀಕರಣ ನೀಡಿದರು.

ವಿಶ್ರಾಂತ ಕುಲಪತಿ ಡಾ.ಬಿ.ಎ.ವಿವೇಕ ರೈ ಸಮಾರೋಪ ಭಾಷಣ ಮಾಡಿದರು. ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಅರೆಬೈಲು ಶಿವರಾಮ ಹೆಬ್ಬಾರ್ ಆಶಯ ನುಡಿಗಳನ್ನಾಡಿದರು.

ಸಮ್ಮೇಳನಾಧ್ಯಕ್ಷ ಡಾ.ದೊಡ್ಡರಂಗೇಗೌಡ, ಕೃಷಿ ಸಚಿವ ಬಿ.ಸಿ.ಪಾಟೀಲ, ಪ್ರಾಥಮಿಕ, ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಸಂಸದ ಶಿವಕುಮಾರ ಉದಾಸಿ, ಮಾಜಿ ಸಂಸದರಾದ ಪ್ರೊ.ಐ.ಜಿ.ಸನದಿ, ಮಂಜುನಾಥ ಕುನ್ನೂರ, ಶಾಸಕರಾದ ನೆಹರು ಓಲೇಕಾರ್, ಅರುಣಕುಮಾರ ಪೂಜಾರ್, ವಿರೂಪಾಕ್ಷಪ್ಪ ಬಳ್ಳಾರಿ, ವಿಧಾನ ಪರಿಷತ್ ಸದಸ್ಯ ಆರ್.ಶಂಕರ್, ನಗರಸಭೆ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ಮಾಜಿ ಶಾಸಕ ಶಿವರಾಜ ಸಜ್ಜನರ, ಡಿ. ಎಂ.ಸಾಲಿ, ಬಸವರಾಜ ಶಿವಣ್ಣವರ, ರುದ್ರಪ್ಪ ಲಮಾಣಿ, ಬಿ.ಹೆಚ್.ಬನ್ನಿಕೋಡ, ಯು.ಬಿ.ಬಣಕಾರ, ಸೋಮಣ್ಣ ಬೇವಿನಮರದ ಮತ್ತಿತರೆ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

# ಪರಿಶಿಷ್ಟರ ಪರ ಕಾಂಗ್ರೆಸ್ ಬದ್ಧತೆ

**(1ನೇ ಪುಟದಿಂದ)** ಕಾಂಗ್ರೆಸ್ ಶಕ್ತಿ ಈ ದೇಶದ ಶಕ್ತಿ. ಕಾಂಗ್ರೆಸ್ ಇತಿಹಾಸ ಈ ದೇಶದ ಇತಿಹಾಸ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲ ಸಮಾಜದವರು ಅಧಿಕಾರಕ್ಕೆ ಬಂದಂತೆ. ಐಕ್ಯತಾ ಸಮಾವೇಶ, ಇಡೀ ದೇಶಕ್ಕೆ ಈ ಸಂದೇಶ ರವಾನಿಸುತ್ತಿದೆ ಎಂದರು.

ಪರಿಷತ್ ವಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿ, ಇಂದು ಬಹಳ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದ್ದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಹಾಗೂ ಅವರ ಸೂತ್ರಧಾರರಾದ ಆರ್‌ಎಸ್‌ಎಸ್‌ನವರಿಗೆ 'ಸಂವಿಧಾನಕ್ಕೆ ಕೈ ಹಾಕಿದರೆ ಭಸ್ಮವಾಗುತ್ತೀರ' ಎಂಬ ಸ್ಪಷ್ಟ ಸಂದೇಶ ರವಾನಿಸಿದೆ ಎಂದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮಾತನಾಡಿ, ದೆಹಲಿ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವವರು ದಲಿತ ವಿರೋಧಿಗಳು. ಆರ್‌ಎಸ್‌ಎಸ್ ಹಾಗೂ ಸಂಘ ಪರಿವಾರ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನದ ಮೇಲೆ ನಿರಂತರವಾಗಿ ದಾಳಿ ಮಾಡುತ್ತಿದೆ. ನೀವು ಈ ಎಲ್ಲಾ ದೇಶ ವಿರೋಧಿ ಕೃತ್ಯಗಳ ವಿರುದ್ಧ ಸಂಘಟಿತ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು.

ಮಾಜಿ ಉಪ ಮುಖ್ಯಮಂತ್ರಿ ಡಾ. ಪರಮೇಶ್ವರ ಮಾತನಾಡಿ, ನಮ್ಮ ಸರ್ಕಾರ ಬಂದ ಮೊದಲ ಅಧಿವೇಶನದಲ್ಲೇ ಸದಾಶಿವ ಆಯೋಗದ ವರದಿಯನ್ನು ವಿಧಾನಮಂಡಲದಲ್ಲಿ ಮಂಡಿಸಲಾಗುವುದು ಎಂದರು.

ಸಮಾವೇಶದಲ್ಲಿ ಪರಿಶಿಷ್ಟ ಸಮುದಾಯಕ್ಕಾಗಿ ಕಾಂಗ್ರೆಸ್ ಪಕ್ಷದ ವತಿಯಿಂದ ದಶ ಘೋಷಣೆ ಮಾಡಲಾಯಿತು. ನಾಗಮೋಹನ್ ದಾಸ್ ವರದಿ 9ನೇ ಷೆಡ್ಯೂಲ್‌ಗೆ ಸೇರ್ಪಡೆ, ಸದಾಶಿವ ಆಯೋಗದ ವರದಿ ಮಂಡನೆ, ಎಸ್‌ಸಿಪಿ-ಟಿಎಸ್‌ಪಿ ಕಾಯ್ದೆಗೆ ತಿದ್ದುಪಡಿ, ಪಿ.ಟಿ.ಸಿ.ಎಲ್. ಕಾಯ್ದೆಗೆ ತಿದ್ದು ಪಡಿ, ವಸತಿ ರಹಿತ ಕುಟುಂಬಗಳಿಗೆ ಮನೆಗಳ ನಿರ್ಮಾಣ ಸೇರಿದಂತೆ ಹಲವಾರು ವಿಷಯಗಳನ್ನು ದಶ ಘೋಷಣೆಯಲ್ಲಿ ಪ್ರಸ್ತಾಪಿಸಲಾಗಿದೆ.

# ನಾಮದೇವ ಸಿಂಪಿ ಸಮಾಜವನ್ನು ಗುರುತಿಸಿ, ಪ್ರೋತ್ಸಾಹಿಸಿ



ಮಲೇಬೆನ್ನೂರು : ಸಮಾಜದ ಟ್ರಸ್ಟ್ ಉದ್ಘಾಟನೆಯಲ್ಲಿ ನಾಗರಾಜ್ ಮೌಳೆ ಮನವಿ

ಮಲೇಬೆನ್ನೂರು, ಜ.8- ರಾಜ್ಯದಲ್ಲಿರುವ ನಾಮದೇವ ಸಿಂಪಿ ಸಮಾಜವನ್ನು ಸರ್ಕಾರ ಗುರುತಿಸಿ, ಸರ್ಕಾರದ ಸೌಲಭ್ಯಗಳನ್ನು ನೀಡಬೇಕೆಂದು ನಾಮದೇವ ಸಿಂಪಿ ಸಮಾಜದ ಹೊನ್ನಾಳಿ ತಾ. ಅಧ್ಯಕ್ಷ ಎಸ್.ಎಂ.ನಾಗರಾಜ್ ಮೌಳೆ ಒತ್ತಾಯಿಸಿದರು.

ಅವರು, ಭಾನುವಾರ ಪಟ್ಟಣದ ಕಾಳಿಕಾಂಬ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಮಲೇಬೆನ್ನೂರು ನಾಮದೇವ ಸಿಂಪಿ ಸಮಾಜ ಟ್ರಸ್ಟ್ ಅನ್ನು ದೀಪ ಬೆಳಗಿಸಿ, ಉದ್ಘಾಟಿಸಿ ಮಾತನಾಡಿದರು.


ರಾಜ್ಯದಲ್ಲಿ ಅತ್ಯಂತ ಸಣ್ಣ ಸಮುದಾಯವಾಗಿರುವ ನಮ್ಮ ಸಮಾಜ ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದು, ಸರ್ಕಾರ ನಮ್ಮನ್ನು ಮೇಲೆತ್ತುವ ಕೆಲಸ ಮಾಡಬೇಕೆಂದು ನಾಗರಾಜ್ ಮನವಿ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಮಲೇಬೆನ್ನೂರು ನಾಮದೇವ ಸಿಂಪಿ ಸಮಾಜದ ನೂತನ ಅಧ್ಯಕ್ಷ ಕುಡಪಲಿ ಮಂಜುನಾಥ್ ಮಾತನಾಡಿ, ಮಲೇಬೆನ್ನೂರಿನಲ್ಲಿ ನಾಮದೇವ ಸಿಂಪಿ ಸಮಾಜದ ದೇವಸ್ಥಾನ ಹಾಗೂ ಸಮುದಾಯ ಭವನ ನಿರ್ಮಿಸಲು ಪುರಸಭೆಯಿಂದ ಉಚಿತ ನಿವೇಶನ ನೀಡಬೇಕೆಂದು ಕೋರಿದರು.

ಸಮಾಜದ ಹೊನ್ನಾಳಿ ತಾ.ಕಾರ್ಯದರ್ಶಿ ಜಗನ್ನಾಥ್, ಮಲೇಬೆನ್ನೂರು ಸಮಾಜದ ಉಪಾಧ್ಯಕ್ಷ ಧರ್ಮಣ್ಣ, ಟಿ.ಹಾಲೇಶಪ್ಪ, ನಿಟ್ಟೂರು ನಿಂಗಪ್ಪ, ನಿರ್ದೇಶಕರಾದ ಆನಂದಪ್ಪ, ಗಣೇಶಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಶ್ರೀಮತಿ ಸೌಜನ್ಯ ಶ್ರೀನಿವಾಸ್ ಪ್ರಾರ್ಥಿಸಿದರು. ಸಮಾಜದ ಕಾರ್ಯದರ್ಶಿ ಶ್ರೀನಿವಾಸ್ ಸ್ವಾಗತಿಸಿದರು. ಶಿಕ್ಷಕ ಕರಿಬಸಪ್ಪ ನಿರೂಪಿಸಿ, ವಂದಿಸಿದರು.

## ರಾಜನಹಳ್ಳಿ ಮಠದಲ್ಲಿ ಇಂದು ರಾಜ್ಯಮಟ್ಟದ ಪೂರ್ವಭಾವಿ ಸಭೆ



ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಫೆಬ್ರವರಿ 8 ಮತ್ತು 9 ರಂದು ನಡೆಯಲಿರುವ ಐತಿಹಾಸಿಕ ಐದನೇ ವರ್ಷದ ವಾಲ್ಮೀಕಿ ಜಾತ್ರಾ ಮಹೋತ್ಸವ ಹಾಗೂ ನೂತನ ರಥ ಲೋಕಾರ್ಪಣೆ ಕಾರ್ಯಕ್ರಮದ ಪ್ರಯುಕ್ತ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಹಾಗೂ ಜಾತ್ರಾ ಸಮಿತಿ ಅಧ್ಯಕ್ಷ ಎಸ್.ವಿ.ರಾಮಚಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮದ ರೂಪು - ರೇಷೆ ಹಾಗೂ ಪೂರ್ವ ಸಿದ್ಧತೆ ಕುರಿತು ರಾಜ್ಯಮಟ್ಟದ ಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀಮಠದ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಸಭೆಗೆ ಸಚಿವರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಶ್ರೀಮಠದ ಧರ್ಮದರ್ಶಿಗಳು, ಜಿಲ್ಲಾಧ್ಯಕ್ಷರು ಭಾಗವಹಿಸಿ, ಜಾತ್ರಾ ಮಹೋತ್ಸವದ ಯಶಸ್ಸಿಗೆ ಸೂಕ್ತ ಸಲಹೆ ಸೂಚನೆ ನೀಡುವಂತೆ ಜಾತ್ರಾ ಸಮಿತಿ ಸಂಚಾಲಕ ಕೆ.ಪಿ.ಪಾಲಯ್ಯ ತಿಳಿಸಿದ್ದಾರೆ.

## ಬಾಸ್ಕೆಟ್‌ಬಾಲ್ ಕ್ಲಬ್ ನೋಂದಣಿ ನವೀಕರಣಕ್ಕೆ ಜ. 12 ಕೊನೆ ದಿನ

ದಾವಣಗೆರೆ, ಜ. 8- ಕರ್ನಾಟಕ ಬಾಸ್ಕೆಟ್‌ಬಾಲ್ ಅಸೋಸಿಯೇಷನ್ ಇದರ ಅಂಗಸಂಸ್ಥೆಯ ಸೂಚನೆಯಂತೆ 2023 ನೇ ಸಾಲಿಗೆ ನೋಂದಣಿ ಹಾಗೂ ನವೀಕರಣ ಆರಂಭವಾಗಿದ್ದು, ಜಿಲ್ಲೆಯಲ್ಲಿರುವ ಎಲ್ಲಾ ಬಾಸ್ಕೆಟ್ ಬಾಲ್ ಕ್ಲಬ್‌ಗಳು ಜ. 12 ರೊಳಗಾಗಿ ನೋಂದಣಿ ಹಾಗೂ ನವೀಕರಣ ಮಾಡಿಸುವಂತೆ ಅಸೋಸಿಯೇಷನ್ ಕಾರ್ಯದರ್ಶಿ ಆರ್. ವೀರೇಶ್ ಕೋರಿದ್ದಾರೆ.

ವಿವರಕ್ಕೆ ದಾವಣಗೆರೆ ಜಿಲ್ಲಾ ಬಾಸ್ಕೆಟ್ ಬಾಲ್ ಅಸೋಸಿಯೇಷನ್ ಕಾರ್ಯದರ್ಶಿ ಆರ್. ವೀರೇಶ್ (9741114707) ಅವರನ್ನು ಸಂಪರ್ಕಿಸಬಹುದು.

## ದೇವರಾಜು ಅರಸು ನಿಗಮದಿಂದ ಸಾಲ

ದಾವಣಗೆರೆ, ಜ.8- 2022-23ನೇ ಸಾಲಿನ ಡಿ. ದೇವರಾಜ ಅರಸು ಸ್ವಯಂ-ಉದ್ಯೋಗ ಯೋಜನೆಯಡಿ ವೈಯಕ್ತಿಕ ಸಾಲ ಸೌಲಭ್ಯವನ್ನು ಹಾಗೂ ಗಂಗಾ ಕಲ್ಯಾಣ ನೀರಾವರಿ ಯೋಜನೆಯಡಿ ಕೊಳವೆ ಬಾವಿ ಸೌಲಭ್ಯವನ್ನು ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸೌಲಭ್ಯವನ್ನು ಪಡೆಯಲಿಚ್ಛಿಸುವವರು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಜ.5 ರಿಂದ 17ರ ವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ www.dbcdc.karnataka.gov.in ಹಾಗೂ ಸಹಾಯವಾಣಿ ಸಂಖ್ಯೆ: 080-22374832 / 8050770004&6 /7090400100 / 7090400900. ಆಯಾ ಜಿಲ್ಲಾ ಕಛೇರಿಯ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದ್ದು, ಅದರಂತೆ ಸಂಪರ್ಕಿಸಬಹುದೆಂದು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಇಂದು-ನಾಳೆ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆ

ದಾವಣಗೆರೆ, ಜ. 8- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ನಾಳೆ ದಿನಾಂಕ 9 ಮತ್ತು 10 ರಂದು ಎರಡು ದಿನಗಳ ಕಾಲ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ದಾವಣಗೆರೆ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಜರುಗಲಿವೆ ಎಂದು ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಭೈರತಿ ಬಸವರಾಜ್ ಕ್ರೀಡಾಕೂಟ ಉದ್ಘಾಟಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಎಂ.ಪಿ. ರೇಣುಕಾಚಾರ್ಯ, ಮಾಡಾಳು ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಎನ್.ಲಿಂಗಣ್ಣ, ಡಾ.ವೈ.ಎ. ನಾರಾಯಣಸ್ವಾಮಿ, ಡಾ. ಶಾಮನೂರು ಶಿವಶಂಕರಪ್ಪ, ಎಸ್. ರಾಮಪ್ಪ, ಎನ್. ರವಿಕುಮಾರ್, ಆಯನೂರು ಮಂಜುನಾಥ್, ಆರ್. ಶಂಕರ್, ಡಿ.ಎಸ್. ಅರುಣ್, ಕೆ. ಅಬ್ದುಲ್ ಜಬ್ಬಾರ್, ಮೋಹನ್ ಕುಮಾರ್ ಕೊಂಡಜ್ಜಿ, ಕೆ.ಪಿ. ನಂಜುಂಡಿ ವಿಶ್ವಕರ್ಮ, ಡಾ. ತೇಜಸ್ವಿನಿಗೌಡ, ಎಸ್. ಎಲ್.ಭೋಜೇಗೌಡ, ಚಿದಾನಂದ ಎಂ. ಗೌಡ, ಕೆ.ಎಸ್. ನವೀನ್, ಬಸವರಾಜನಾಯ್ಕ, ಎ.ವೈ. ಪ್ರಕಾಶ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್. ಆರ್. ಉಮಾಶಂಕರ್, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಎಸ್ಪಿ ಸಿ.ಬಿ. ರಿಷ್ಯಂತ್, ಜಿ.ಪಂ. ಸಿಇಓ ಡಾ. ಎ. ಚನ್ನಪ್ಪ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ದಿನಾಂಕ 10 ರಂದು ಸಂಜೆ 5 ಕ್ಕೆ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಸಮಾರಂಭ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಪಾಲಾಕ್ಷಿ ತಿಳಿಸಿದರು. ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ಸರ್ಕಾರಿ ನೌಕರರು ಜ. 9 ರಂದು ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಸಂಘ ಟಕರ ಬಳಿ ವರದಿ ಮಾಡಿಕೊಳ್ಳುವಂತೆ ಮನವಿ ಮಾಡಿದರು.

ಈಗಾಗಲೇ 2000 ನೌಕರರು ನೋಂದಣಿ ಮಾಡಿಸಿದ್ದು, ಆನ್‌ಲೈನ್ ನೋಂದಣಿ ಪ್ರಕ್ರಿಯೆ ಮುಗಿದಿರುವ ಕಾರಣ, ಸ್ಥಳದಲ್ಲೇ ಆಗಲಿ, ಇದೀಗ ಯಾವುದೇ ನೋಂದಣಿಯನ್ನು ಪರಿಗಣಿಸಲಾಗುವುದಿಲ್ಲ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಬಿ.ಆರ್. ತಿಪ್ಪೇಸ್ವಾಮಿ, ಡಾ. ಡಿ. ಉಮೇಶ್, ಕೆ.ಆರ್. ಮಲ್ಲಿಕಾರ್ಜುನಯ್ಯ, ಕೆ. ಎಂ.ಹೆಚ್. ಸ್ವಾಮಿ, ಸಿ. ಗುರುಮೂರ್ತಿ ಉಪಸ್ಥಿತರಿದ್ದರು.

# ಹರಿಹರದಲ್ಲಿ ತುಂಗಭದ್ರಾ ಕಪ್ ರಾಜ್ಯ ಮಟ್ಟದ ಕಬಡ್ಡಿ



ಹರಿಹರ, ಜ.8- ನಗರದ ಡಿ.ಆರ್.ಎಂ. ಶಾಲಾ ಮೈದಾನದಲ್ಲಿ ನಡೆಯುತ್ತಿರುವ ತುಂಗಭದ್ರಾ ಕಪ್ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಕಬಡ್ಡಿ ಕ್ರೀಡಾ ಪಟುಗಳು ತಮ್ಮ ತಂಡದ ಗೆಲುವಿಗಾಗಿ ಸೆಣಸಾಡಿದರು.

ಈ ವೇಳೆ ಮಾಜಿ ಶಾಸಕ ಬಿ.ಪಿ.ಹರೀಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ತಾಲ್ಲೂಕು ಕ್ರೀಡಾ ಅಧಿಕಾರಿ ಶ್ರೀಶೈಲ, ಹಿರಿಯ ಕಬಡ್ಡಿ ಕ್ರೀಡಾಪಟು ಹೆಚ್. ನಿಜಗುಣ, ನಾಗರಾಜ್, ಗುತ್ತಿಗೆದಾರ ಕೆ.ಬಿ.ಕಾಳೇರ್ ಮಂಜುನಾಥ್, ಧನರಾಜ್ ಮತ್ತಿತರರು ಹಾಜರಿದ್ದರು.

## ಹಸು, ಎಮ್ಮೆ ಘಟಕ ಸೌಲಭ್ಯಕ್ಕೆ ಅರ್ಜಿ

ದಾವಣಗೆರೆ, ಜ.8- ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆಯಡಿ ಹಸು/ಎಮ್ಮೆ ಘಟಕ ಅನುಷ್ಠಾನಗೊಳಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸಾಮಾನ್ಯ, ಪ.ಜಾ/ಪ.ಪಂ, ಮತ್ತು ಅಲ್ಪಸಂಖ್ಯಾತ, ಕೂಲಿ ಕಾರ್ಮಿಕರು ಮತ್ತು ಪಶು ಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತರನ್ನು ಆಯ್ಕೆ ಮಾಡಲಾಗುವುದು. ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 13 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಮೀಪದ ಪಶು ವೈದ್ಯಕೀಯ ಸಂಸ್ಥೆಯ ವೈದ್ಯಾಧಿಕಾರಿಗಳನ್ನು ಸಂಪರ್ಕಿಸಬೇಕೆಂದು ಹರಿಹರದ ಪಶು ವೈದ್ಯಾಧಿಕಾರಿ ತಿಳಿಸಿದ್ದಾರೆ.

# ಕೊಟ್ಟೂರಿನಲ್ಲಿ ಸತ್ಯನಾರಾಯಣ ಪೂಜೆ



ಕೊಟ್ಟೂರು, ಜ. 8 - ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಶಾಸಕ ಭೀಮನಾಯ್ಕ ಪಾಲ್ಗೊಂಡು ಮಾತನಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ದಾರುಕೇಶ, ಆಚೆಮನಿ ಮಲ್ಲಿಕಾರ್ಜುನ, ರೇವಣಸಿದ್ದಪ್ಪ, ಅಡಿಕೆ ಮಂಜುನಾಥ, ಎಸ್.ಎಸ್. ಅಶೋಕ್ ಶಿವಕುಮಾರಗೌಡ, ಸತೀಶ್, ಪ್ರಭು ಇದ್ದರು.


॥ ಶ್ರೀ ಪಂಚಾಚಾರ್ಯ ಜಗದ್ಗುರು ಪ್ರಸೀದಂತು॥ ॥ ಶ್ರೀ ಗುರು ಕೊಟ್ಟೂರು ಬಸವೇಶ್ವರ ಪ್ರಸನ್ನ॥

**ಲಿಂಗ ಜಂಗಮಾರಾಧನೆ ಆಹ್ವಾನ**



ದಾವಣಗೆರೆ ಸಿಟಿ ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತ ವಾಸಿಗಳಾದ **ಶ್ರೀ ಎಸ್.ಎಸ್. ಹರ್ಷ, ಶ್ರೀಮತಿ ಎಸ್.ಎಸ್. ವರ್ಷ, ಶ್ರೀ ಎಸ್.ಎಸ್. ಆದರ್ಶ** ಇವರು ಮಾಡುವ ವಿಜ್ಞಾಪನೆಗಳು. **ದಿನಾಂಕ:5.1.2023ರ ಗುರುವಾರ ಬೆಳಿಗ್ಗೆ 6.45 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ**

**ಸಾರಂಗ ಮಠದ ಶ್ರೀಮತಿ ಎಂ.ಸೌಭಾಗ್ಯಮ್ಮ**
(ನಿವೃತ್ತ ಬೆರಳಚ್ಚುಗಾರ್ತಿ, ಕೆ.ಪಿ.ಟಿ.ಸಿ.ಎಲ್. ದಾವಣಗೆರೆ)

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಲಿಂಗ ಜಂಗಮಾರಾಧನೆಯನ್ನು'** ದಿನಾಂಕ:9.1.2023 ರ ಸೋಮವಾರ ಬೆಳಿಗ್ಗೆ 10.30 ಕ್ಕೆ ಸ್ಥಳ : ಮೃತರ ಸ್ವಗೃಹ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ ಇಲ್ಲಿ ಗುರು ಹಿರಿಯರು ನಿಶ್ಚಯಿಸಿಸುವುದರಿಂದ ನೆರವೇರಿಸುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

**ದುಃಖತಪ್ತ ಕುಟುಂಬ ವರ್ಗ : ಮೃತರು ಮಕ್ಕಳು, ಸೊಸೆಯಂದಿರು. ಸಾರಂಗ ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.**


# ವೀಸಾ ಹೆಚ್ಚಾದರೂ ವೆಚ್ಚದ ಚಿಂತೆ

**(1ನೇ ಪುಟದಿಂದ)** ವಿದ್ಯಾರ್ಥಿಗಳು ಬ್ರಿಟನ್‌ನಲ್ಲಿ ಅಧ್ಯಯನ ಮಾಡಲು ಅನುಮತಿ ನೀಡಲಾಗಿದೆ. ಇದರಿಂದಾಗಿ ವಿಶ್ವದಲ್ಲೇ ಅತಿ ಹೆಚ್ಚಿನ ವಿದೇಶಿ ವಿದ್ಯಾರ್ಥಿ ಅನುಮತಿ ಪಡೆದ ದೇಶ ಭಾರತವಾಗಿದೆ.

ಈಗಿರುವ ಹಣದುಬ್ಬರ ದರದಲ್ಲಿ ವೆಚ್ಚ ಕಡಿಮೆ ಮಾಡುವುದು ಕಠಿಣ ಸವಾಲಾಗಿದೆ. ಅಗತ್ಯ ವಸ್ತುಗಳನ್ನಷ್ಟೇ ಖರೀದಿಸುತ್ತಿದ್ದೇನೆ ಎಂದು ಬರ್ಮಿಂಗ್ ಹ್ಯಾಮ್‌ನ ಆಸ್ಟನ್ ವಿಶ್ವವಿದ್ಯಾಲಯದ ಇಂಟರ್ ನ್ಯಾಷನಲ್ ಬ್ಯುಸಿನೆಸ್ ವಿದ್ಯಾರ್ಥಿ ನಮನ್ ಮಕ್ಕರ್ ತಿಳಿಸಿದ್ದಾರೆ.

ರಿಯಾ ಜೈನ್ ಅವರು ಏಳು ವರ್ಷಗಳ ಹಿಂದೆ ಬ್ರಿಟನ್‌ನಲ್ಲಿ ಪದವಿ ಪಡೆದಿದ್ದರು. ಈಗ ಉನ್ನತ ಅಧ್ಯಯನಕ್ಕಾಗಿ ಬ್ರಿಟನ್‌ಗೆ ಮರಳಿದ್ದಾರೆ. ಕಳೆದ ಬಾರಿಗೆ ಹೋಲಿಸಿದರೆ ಆಹಾರ ವೆಚ್ಚ ಮೂರು ಪಟ್ಟು ಹೆಚ್ಚಾಗಿದೆ ಎಂದವರು ತಿಳಿಸಿದ್ದಾರೆ.

ದುಬಾರಿ ಜೀವನದ ಕಾರಣದಿಂದಾಗಿ ವಿದೇಶ ಅಧ್ಯಯನ ಬಯಸುವ ವಿದ್ಯಾರ್ಥಿಗಳು ಎರಡೆರಡು ಬಾರಿ ಯೋಚಿಸುವ ಪರಿಸ್ಥಿತಿ ಬಂದಿದೆ. ಬ್ರಿಟನ್‌ನಲ್ಲಿ ಪದವಿ ಪಡೆಯಬೇಕು ಎಂಬುದು ನನ್ನ ಬಾಲ್ಯದ ಕನಸಾಗಿತ್ತು. ಆದರೆ, ವೆಚ್ಚ ಹೆಚ್ಚಾಗಿರುವ ಕಾರಣ ಅಲ್ಲಿಗೆ ಹೋಗುವ ನಿರ್ಧಾರ ಕೈ ಬಿಟ್ಟಿದ್ದೇನೆ. ಈಗ ಕೆನಡಾದಲ್ಲಿ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಕಲಿಯುವ ಸಿದ್ಧತೆಯಲ್ಲಿದ್ದೇನೆ ಎಂದು 12ನೇ ತರಗತಿ ವಿದ್ಯಾರ್ಥಿ ಸ್ಕಂದ ರಾಜೀವ್ ತಿಳಿಸಿದ್ದಾರೆ.

ಇಷ್ಟಾದರೂ, ವಿದೇಶ ಅಧ್ಯಯನದ ಒಲವು ಹೆಚ್ಚಾಗಿ ಬದಲಾಗದು ಎಂದು ಶಿಕ್ಷಣ ಸಲಹಾ ಸಂಸ್ಥೆಯಾದ ಎ.ವಿ.ಪಿ.ಯ ಅನುಭವ್ ಸೇಠ್ ಹೇಳಿದ್ದಾರೆ.

ಅಮೆರಿಕ, ಬ್ರಿಟನ್, ಕೆನಡ ಹಾಗೂ ಆಸ್ಟ್ರೇಲಿಯಾಗಳು ಈಗಲೂ ಜನರ ಪ್ರಮುಖ ಆಯ್ಕೆಯಾಗಿವೆ. ಇತ್ತೀಚೆಗಷ್ಟೇ ಯುಎಇ, ಇಟಲಿ, ಜರ್ಮನಿ, ಟರ್ಕಿ ಹಾಗೂ ಮಲೇಷಿಯಾಗಳ ಕಡೆ ಆಸಕ್ತಿ ಬರುತ್ತಿದೆ ಎಂದವರು ತಿಳಿಸಿದ್ದಾರೆ.

ಇದೇ ನಿಲುವು ತಳೆದಿರುವ ಜ್ಞಾನಧನ್ ಸಂಸ್ಥೆಯ ಸಿಇಓ ಅಂಕಿತ್ ಮೆಹ್ರ, ಬ್ರಿಟನ್ ಸದ್ಯಕ್ಕೇನೂ ಬೇಡದ ದೇಶವಾಗುವುದಿಲ್ಲ. ಪದವಿ ಹಾಗೂ ಉನ್ನತ ಶಿಕ್ಷಣಕ್ಕೆ ಬ್ರಿಟನ್‌ನಲ್ಲಿ ಹೆಚ್ಚು ಅವಕಾಶಗಳಿವೆ. ಆದರೆ, ಅಲ್ಲಿಗೆ ತೆರಳುವ ವಿದ್ಯಾರ್ಥಿಗಳ ಜೀವನ ವೆಚ್ಚ ದುಬಾರಿಯಾಗಿದೆ ಎಂದಿದ್ದಾರೆ.

# ಗುರಿಯೊಂದಿಗೆ ಈಗಿನಿಂದಲೇ ಶ್ರಮ ವಹಿಸಿ

**(1ನೇ ಪುಟದಿಂದ)** ಲಕ್ಷ ರೂಪಾಯಿಯಾಗಲು ಸಾಧ್ಯ. ಅದರಂತೆಯೇ ನಿತ್ಯವೂ ಶ್ರಮ ವಹಿಸಿದರೆ ಫಲ ದೊಡ್ಡದಾಗಿರುತ್ತದೆ ಎಂದು ಹೇಳಿದರು.

ತಂತ್ರಜ್ಞಾನದ ಫಲವಾಗಿ ಸಾಕಷ್ಟು ಮಾಹಿತಿಗಳು ವಿದ್ಯಾರ್ಥಿಗಳಿಗೆ ಲಭ್ಯವಿವೆ. ಆದರೆ ಅದರಲ್ಲಿ ಓದಬೇಕಾದದ್ದು ಯಾವುದು? ಓದಬಾರದ್ದು ಯಾವುದು ಎಂಬುದರ ಬಗ್ಗೆ ಮಾರ್ಗದರ್ಶನ ಮುಖ್ಯ. ಹಾರ್ಡ್ ವರ್ಕ್ ಜೊತೆ ಸ್ಮಾರ್ಟ್ ವರ್ಕ್ ಸಹ ಇರಬೇಕು. ಅದನ್ನು ವಿಜ್ಞಾನ ಅಕಾಡೆಮಿಯ ಉಪನ್ಯಾಸಕರು ನೀಡುತ್ತಿದ್ದಾರೆ ಎಂದರು.

ಶೇ.2.5ರಷ್ಟು ಅತಿ ಬುದ್ಧಿವಂತರು, ಶೇ.2.5ರಷ್ಟು ಅತಿ ದಡ್ಡರಿದ್ದಾರೆ. ಉಳಿದ ಶೇ.95ರಷ್ಟು ಜನರ ಬುದ್ಧಿಮತ್ತೆ ಒಂದೇ ರೀತಿಯದ್ದಾಗಿರುತ್ತದೆ. ಕೀಳರಿಮೆ ಬಿಟ್ಟು ಅದನ್ನು ಹೇಗೆ ಬಳಕೆ ಮಾಡಿಕೊಳ್ಳಬೇಕೆಂಬ ಮಾರ್ಗದರ್ಶನದ ಮೇಲೆ ಯಶಸ್ಸು ಅವಲಂಬಿತವಾಗಿರುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿಜ್ಞಾನ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಸಂಜಯ್ ಗೌಡರ್, ಚಿತ್ರನಟ ಯಶ್ ಹಾಗೂ ಹತ್ತನೇ ತರಗತಿ ಓದಿದ್ದ ತಮಿಳು ನಾಡಿನ ಮಹಿಳೆ ನಂತರ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಹಿರಿಯ ಪೊಲೀಸ್ ಅಧಿಕಾರಿಯಾದ ಉದಾಹರಣೆಗಳನ್ನು ವಿವರಿಸಿ, ಪ್ರತಿ ವ್ಯಕ್ತಿಯ ಯಶಸ್ಸಿನ ಹಾದಿ ಕಠಿಣವಾಗಿರುತ್ತದೆ. ಗುರಿ ಸಾಧಿಸುವ ಛಲ ಇರಬೇಕು ಎಂದರು.

ಇತರೆ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶ ಆವಿಷ್ಕಾರದ ಕೊರತೆ ಎದುರಿಸುತ್ತಿದೆ. ಸ್ವಾತಂತ್ರ್ಯ ನಂತರದಿಂದ ಇಲ್ಲಿಯವರೆಗೆ ನಮ್ಮ ದೇಶದ ಒಬ್ಬರೂ ನೋಬೆಲ್ ಪ್ರಶಸ್ತಿ ಪಡೆದಿಲ್ಲ. ಆ ಕೊರತೆಯನ್ನು ವಿದ್ಯಾರ್ಥಿಗಳು ನೀಗಿಸಲಿ ಎಂದು ಆಶಿಸಿದರು.

ಅಕಾಡೆಮಿಯ ಕಾರ್ಯದರ್ಶಿ ಸಂತೋಷ್ ಕುಮಾರ್ ಎಂ. ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಣ ಪಡೆದು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಾದ ಎಂ.ಟಿ. ಕಾರ್ತಿಕ್, ಎಸ್.ಮಮತಾ, ಯು.ರವಿಕುಮಾರ್, ಸ್ಪಂದನ ಜೆ. ಕಬ್ಬೂರು ತಮ್ಮ ಅನುಭವ ಹಂಚಿಕೊಂಡರು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಗೌರವಿಸಲಾಯಿತು.

ಸಹಾಯಕ ಪ್ರಾಧ್ಯಾಪಕ ಸತೀಶ್, ಉಪನ್ಯಾಸಕ ಭುವನ್ ಉಪಸ್ಥಿತರಿದ್ದರು. ಕಲ್ಪನಾ ಹಾಗೂ ನಂದಿ ಸಹನಾ ನಿರೂಪಿಸಿದರು. ಕೆ. ಸೃಷ್ಟಿ ಪ್ರಾರ್ಥಿಸಿದರು. ಬಿ.ಅಭಿನಯ ಸ್ವಾಗತಿಸಿದರು.

# ಅನಿವಾಸಿ ಕನ್ನಡಿಗರಿಗಾಗಿ ಸಚಿವಾಲಯಕ್ಕೆ ಮನವಿ



ಹಾವೇರಿ, ಜ.8- ಪ್ರಪಂಚದ 190 ದೇಶದಲ್ಲಿ ಲಕ್ಷಾಂತರ ಕನ್ನಡಿಗರು ನೆಲೆಸಿದ್ದಾರೆ. ಕನ್ನಡ ನಾಡಿನಿಂದ ದೂರವಾಗಿ, ವಿದೇಶದಲ್ಲಿ ನೆಲೆಕಂಡು ಬದುಕು ರೂಪಿಸಿಕೊಳ್ಳುತ್ತಿರುವ ಅನಿವಾಸಿ ಕನ್ನಡಿಗರು ಸಂಘಟನೆಗಳನ್ನು ಕಟ್ಟಿಕೊಂಡು ಮಕ್ಕಳಿಗೆ ಕನ್ನಡ ಭಾಷೆ ಕಲಿಸುತ್ತಿದ್ದಾರೆ. ಇವರ ಕನ್ನಡ ಪ್ರೀತಿ ನಾಡಿನ ಜನರಿಗೆ ತಿಳಿಯಲು 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ವೇದಿಕೆಯಾಯಿತು.

ಪಾಪು, ಚಂಪಾ ವೇದಿಕೆಯ 'ವಿದೇಶದಲ್ಲಿ ಕನ್ನಡ ಡಿಂಡಿಮ' ಗೋಷ್ಠಿಯಲ್ಲಿ ವಿವಿಧ ದೇಶಗಳಿಂದ ಆಗಮಿಸಿದ ಅನಿವಾಸಿ ಕನ್ನಡರಿಗರು ತಮ್ಮ ಕನ್ನಡ ಪ್ರೀತಿಯನ್ನು ಅನಾವರಣಗೊಳಿಸಿದರು. ಜೊತೆಗೆ ಕೊಲ್ಲಿ ರಾಷ್ಟ್ರಗಳ ಕನ್ನಡಿಗರ ದುಸ್ಥಿತಿ ಬಗ್ಗೆ ಗೋಷ್ಠಿ ಜನರ ಕಣ್ಣು ತೆರೆಸಿತು.

**ಅನಿವಾಸಿ ಕನ್ನಡಿಗರಿಗಾಗಿ ಸಚಿವಾಲಯ, ಮಂತ್ರಿ ನೇಮಕಕ್ಕೆ ಮನವಿ:** ಕೇರಳ ಮಾದರಿಯಲ್ಲಿ ರಾಜ್ಯದಲ್ಲೂ ಅನಿವಾಸಿ ಕನ್ನಡಿಗರಿಗಾಗಿ ಪ್ರತ್ಯೇಕ ಸಚಿವಾಲಯ ತೆರೆದು ಮಂತ್ರಿಗಳನ್ನು ನೇಮಕ ಮಾಡುವಂತೆ ದುಬೈ ಕನ್ನಡ ಸಂಘಟನೆಯ ಅಧ್ಯಕ್ಷ ಸರ್ವೋತ್ತಮ ಶೆಟ್ಟಿ ಗೋಷ್ಠಿಯಲ್ಲಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು.

ದುಬೈ, ಸೌದಿ ಅರೇಬಿಯಾ ಹೊರತು ಪಡಿಸಿ ಮಧ್ಯ ಪ್ರಾಚ್ಯದ ಎಲ್ಲಾ ರಾಷ್ಟ್ರಗಳಲ್ಲಿಯೂ ಕನ್ನಡ ಸಂಘಟನೆಗಳು ಇವೆ. ಅಬುದಾಬಿ, ಶಾರ್ಜಾ, ಬಹರೇನ್, ಕುವೈತ್, ಕತಾರ್, ಒಮನ್ ಸಂಘಟನೆಗಳು ಸಕ್ರಿಯವಾಗಿ ಕನ್ನಡದ ಕೆಲಸಗಳನ್ನು ನಿರ್ವಹಿಸುತ್ತಿವೆ. ಬೆಹರೇನಲ್ಲಿ ಮೊಟ್ಟ ಮೊದಲ ಬಾರಿಗೆ 12 ಕೋಟಿ ವೆಚ್ಚದಲ್ಲಿ ಸ್ವಂತ ಜಾಗದಲ್ಲಿ ಕನ್ನಡ ಭವನ ನಿರ್ಮಿಸಲಾಗಿದೆ.

ಮುಖ್ಯಮಂತ್ರಿಗಳು ಈ ಭವನ ಉದ್ಘಾಟಿಸಿಬೇಕು ಎನ್ನುವುದು ಅನಿವಾಸಿ ಕನ್ನಡಿಗರ ಆಸೆಯಾಗಿದೆ. ಅಮೇರಿಕಾ, ಯುರೋಪ್, ಆಫ್ರಿಕಾ, ಆಸ್ಟ್ರೇಲಿಯಾ ಖಂಡಗಳಲ್ಲಿಯೂ ಕೂಡ ಕನ್ನಡ ಸಂಘಟನೆಗಳು ಕಾರ್ಯ ನಿರತವಾಗಿವೆ. ಮೆಲ್ಬೋರ್ನ್ ಕನ್ನಡ ಸಂಘದ ಉದ್ಯಮಿಗಳು ಸರ್ಕಾರದ ನೆರವು ಇಲ್ಲದೆ ಸ್ವಂತ ಹಣದಲ್ಲಿ ಜಾಗ ಖರೀದಿಸಿ ಸಂಘ ಕಟ್ಟಿದ್ದಾರೆ. ಕುವೈತ್ ಕನ್ನಡ ಸಂಘ

**ಹಾವೇರಿ: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದುಬೈ ಕನ್ನಡ ಸಂಘಟನೆಯ ಅಧ್ಯಕ್ಷ ಸರ್ವೋತ್ತಮ ಶೆಟ್ಟಿ**

ಬೆಂಗಳೂರಿನ 8 ಸರ್ಕಾರಿ ಶಾಲೆಗಳನ್ನು ದತ್ತು ಪಡೆದಿದೆ. ಇಟಲಿ, ಥೈಲ್ಯಾಂಡ್, ನ್ಯೂಜಿಲ್ಯಾಂಡ್, ಹಾಂಕಾಂಗ್ ಹಾಗೂ ನ್ಯೂಯಾರ್ಕ್ ಕನ್ನಡ ಸಂಘಟನೆಗಳು ಕೆಲಸ ನಿರ್ವಹಿಸುತ್ತಿವೆ ಎಂದು ತಿಳಿಸಿದರು.

**ಅನಿವಾಸಿ ಭಾರತೀಯರಿಗಾಗಿ ಪ್ರತ್ಯೇಕ ನೀತಿ:** ಕನ್ನಡ ಸಾಹಿತ್ಯ ಪರಿಷತ್ತಿನ ಅಂತರರಾಷ್ಟ್ರೀಯ ಘಟಕಗಳ ಸಮಿತಿ ಸದಸ್ಯೆ ಡಾ.ಆರತಿ ಕೃಷ್ಣ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿ, 50 ಲಕ್ಷ ಅನಿವಾಸಿ ಕನ್ನಡಿಗರು ವಿವಿಧ ದೇಶಗಳಲ್ಲಿ ನೆಲೆಸಿದ್ದಾರೆ. ಇವರಿಗಾಗಿಯೇ ಸರ್ಕಾರ ಪ್ರತ್ಯೇಕ ನೀತಿಯನ್ನು ಜಾರಿಗೆ ತರಬೇಕು. ಈ ಕುರಿತು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ಗೋಷ್ಠಿಯಲ್ಲಿ ಮಾತನಾಡಿದ ಜರ್ಮನಿಯ ರವೀಂದ್ರ ಕುಲಕರ್ಣಿ ಹಾಗೂ ಲಂಡನ್‌ನ ಅಶ್ವಿನ್ ಶೇಷಾದ್ರಿ ಯುರೋಪ್ ದೇಶದ ಎಲ್ಲಾ ರಾಷ್ಟ್ರಗಳಲ್ಲೂ ಕನ್ನಡ ಸಂಘಟನೆಗಳು ಇವೆ. ಶನಿವಾರ ಹಾಗೂ ಭಾನುವಾರ ಮಕ್ಕಳಿಗೆ ವಿಶೇಷವಾಗಿ ಕನ್ನಡ ಭಾಷೆಯ ಶಿಕ್ಷಣ ನೀಡಲಾಗುತ್ತಿದೆ. 15 ದೇಶಗಳಲ್ಲಿ ನೆಲೆಸಿದ 4000 ಕನ್ನಡಿಗರ ಮಕ್ಕಳು ಇಂದು ಕನ್ನಡ ಕಲಿಯುತ್ತಿದ್ದಾರೆ. ಇದರೊಂದಿಗೆ ಸ್ಪ್ಯಾನಿಷ್ ಹಾಗೂ ಫ್ರೆಂಚ್ ಭಾಷೆಯ ಆಸಕ್ತ ವಿದ್ಯಾರ್ಥಿಗಳು ಕನ್ನಡ ಕಲಿಯುತ್ತಿದ್ದಾರೆ. ಕೇಂಬ್ರಿಡ್ಜ್ ವಿ.ವಿ.ಯಲ್ಲಿ ಕನ್ನಡ ಸಂಘಟನೆ ತೆರೆಯಲಾಗಿದೆ. ಅಕ್ಕ ಮಾದರಿಯಲ್ಲಿ ನ್ಯೂಯಾರ್ಕ್‌ನ ನವಿಕಾ ಯೋರೋಪಿನಲ್ಲಿ ಕನಸು ಸಂಘಟನೆಗಳು ಕಾರ್ಯ ನಿರ್ವಹಿಸುತ್ತಿವೆ ಎಂದರು.

ಅಮೆರಿಕಾದಿಂದ ರಾಜ್ಯ ಮರಳಿರುವ ಕುಂದಾಪುರದಲ್ಲಿ ನೆಲಸಿರುವ ಫಿಜಿಯೋ ಥೆರಪಿಸ್ಟ್ ಜ್ಯೋತಿ ಮಹಾದೇವಿ ಸೇರಿದಂತೆ ಅಮೇರಿಕಾದಲ್ಲಿಯೇ 150ಕ್ಕೂ ಹೆಚ್ಚು ಕನ್ನಡ ಲೇಖಕರು ಇದ್ದಾರೆ. ಇವರಲ್ಲಿ 60ಕ್ಕೂ ಹೆಚ್ಚು ಲೇಖರ ಕೃತಿಗಳು ಪ್ರಕಟವಾಗಿವೆ ಎಂದರು.

ಸಂಶೋಧಕ ಎಸ್.ಎಲ್.ಶಿವಮೂರ್ತಿ ಮಾತನಾಡಿ ಸ್ವಾತಂತ್ರ್ಯ ಪೂರ್ವದಲ್ಲಿ ಸರ್.ವಾಲ್ಟರ್ ವಿಲಿಯಟ್, ವಿಲಿಯಂ ಅಲೆನ್ ರಸೆಲ್, ಜಾನ್ ಫೇಟ್‌ಫುಲ್ ಫೀಟ್, ರೆವರೆಂಡ್ ಕಿಟೆಲ್, ಹರ್ಮನ್ ಮೋಗ್ಲಿಂಗ್, ವಿಲಿಯಂ ಕ್ಯಾರಿ ಸೇರಿದಂತೆ ನೂರಾರು ವಿದೇಶಿಯರು ಕನ್ನಡ ಭಾಷೆ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಎನ್.ಬಿ.ಕಾಳೆ ಸ್ವಾಗತಿಸಿ, ನಿರೂಪಿಸಿದರು. ಮ.ಕೃ.ಮೇಘಾಡಿ ವಂದಿಸಿದರು. ಡಿ. ರಾಜೇಶ್ ಪದ್ಮನಾಭ ನಿರ್ವಹಿಸಿದರು.

# ಮೊಬೈಲ್ - ಟಿವಿ ಮಹಿಳೆಯರ, ಮಕ್ಕಳ ಸುಂದರ ಬದುಕು ಕಸಿದುಕೊಂಡಿವೆ



ಜಗಳೂರು, ಜ.8- ಆಧುನಿಕ ತಂತ್ರಜ್ಞಾನದ ಮೊಬೈಲ್, ಟಿವಿ, ಮಹಿಳೆಯರ, ಮಕ್ಕಳ ಸುಂದರ ಬದುಕನ್ನು ಕಸಿದುಕೊಂಡಿವೆ ಎಂದು ಧರ್ಮಸ್ಥಳ ಯೋಜನೆ ಟ್ರಸ್ಟ್‌ನ ಚಿತ್ರದುರ್ಗ ಪ್ರಾದೇಶಿಕ ನಿರ್ದೇಶಕಿ ಬಿ.ಗೀತಾ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಗುರುಭವನದಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಟ್ರಸ್ಟ್ ವತಿಯಿಂದ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಮಹಿಳಾ ವಿಚಾರ ಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪೂರ್ವಜರ ಕಾಲದ ಗೃಹಿಣಿಯರು ಅಡುಗೆ ಮನೆ ಕೆಲಸ, ಕೃಷಿ ಚಟುವಟಿಕೆಗಳಲ್ಲಿ ಸದಾ ನಿರತರಾಗಿರುತ್ತಿದ್ದರು. ಆದರೆ ಪ್ರಸಕ್ತವಾಗಿ ಮಹಿಳೆಯರು ಯಂತ್ರೋಪಕರಣಗಳ ಮೇಲೆ ಅವಲಂಬಿತರಾಗಿ ಸೋಮಾರಿಗಳಾಗುತ್ತಿರುವುದಲ್ಲದೆ, ಆರೋಗ್ಯವಂತರ ಸಂಖ್ಯೆ ಕ್ರಮೇಣ ಕ್ಷೀಣಿಸುತ್ತಿದೆ ಎಂದರು.

ಮಕ್ಕಳನ್ನು ಮೊಬೈಲ್‌ನಿಂದ ದೂರ ವಿಟ್ಟು ಪುಸ್ತಕ ಅಭ್ಯಾಸ ರೂಢಿಸಬೇಕು ಹಾಗೂ ತಾಯಂದಿರ ಕಷ್ಟಗಳನ್ನು ಮಕ್ಕಳಿಗೆ ಮನವರಿಕೆ ಮಾಡಬೇಕು. ಆತ್ಮಹತ್ಯೆಯತ್ತ ಮುಖ ಮಾಡುವುದನ್ನು ತಡೆಗಟ್ಟಬೇಕು ಎಂದು ಕಿವಿಮಾತು ಹೇಳಿದರು.

ಸರಳ ಜೀವನ ಸಾಗಿಸಿದಾಗ ಮಹಿಳಾ ಸಬಲೀಕರಣ ಸಾಧ್ಯ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘದಿಂದ ಸಾಲ ಸೌಲಭ್ಯ ಪಡೆದು ಸಕಾಲದಲ್ಲಿ ಮರುಪಾವತಿ ಮಾಡಿ ಆರ್ಥಿಕ ಸ್ವಾವಲಂಬಿಗಳಾಗಿ ಎಂದು ಸಲಹೆ ನೀಡಿದರು.

ಉಪನ್ಯಾಸಕಿ ಸ್ವಪ್ನ ಸಂಸ್ಕೃತಿ ಮತ್ತು

**ಜಗಳೂರು: ಮಹಿಳಾ ವಿಚಾರ ಗೋಷ್ಠಿಯಲ್ಲಿ ಬಿ.ಗೀತಾ ಬೇಸರ**

ಸಂಸ್ಕಾರ ವಿಷಯ ಕುರಿತು ಉಪನ್ಯಾಸ ನೀಡಿ, ಸಮಾಜದಲ್ಲಿ ಉತ್ತಮ ನಡತೆಯಿಂದ, ಪರಿಶ್ರಮದಿಂದ ಪರಿಪಕ್ವತೆ ಪಡೆದು ಮಾನವನಾದರೆ ಅದು ಸಂಸ್ಕೃತಿ. ಜೀವನದಲ್ಲಿ ಅನುಕರಣೆ ತೊರೆದು ಧರ್ಮದ ಮೂಲ ತತ್ವಗಳನ್ನು ಅಳವಡಿಸಿಕೊಂಡರೆ, ಅದೇ ಸಂಸ್ಕೃತಿ ಎಂದು ಪ್ರತಿಪಾದಿಸಿದರು.

ಕಾನೂನು ಸಲಹೆಗಾರ್ತಿ ಎಂ.ಎನ್. ಮಧುರಾ ಮಾತನಾಡಿ, ಜಿಲ್ಲೆಯಲ್ಲಿ ಜಗಳೂರಿನಲ್ಲಿ ಪೋಕ್ಸೋ ಪ್ರಕರಣಗಳು ಹೆಚ್ಚಾಗುತ್ತಿವೆ. ಮಹಿಳೆಯರು ಮಕ್ಕಳ ಬಗ್ಗೆ ಕಾಳಜಿ ವಹಿಸಬೇಕು. ಜ್ಞಾನ ವಿಕಾಸ ಕಾರ್ಯಕ್ರಮದ ವಿಷಯಗಳು ಮಕ್ಕಳಿಗೂ ಅನ್ವಯವಾಗಬೇಕು. ಮಹಿಳೆಯರು ವಿಚ್ಛೇದನದ ಬಗ್ಗೆ ಚಿಂತಿಸದೆ ಕೌಟುಂಬಿಕವಾಗಿ ಹೊಂದಾಣಿಕೆ ಜೀವನ ನಡೆಸಬೇಕು ಎಂದರು.

ವೇದಿಕೆಯಲ್ಲಿ ಅಲಂಕೃತ ಕುಂಭಗಳು, ಸಿರಿಧಾನ್ಯ ಪ್ರದರ್ಶನ, ರಂಗೋಲಿ, ಸಾಂಸ್ಕೃತಿಕ ಕಾರ್ಯಕ್ರಮ ಸ್ಪರ್ಧೆ ಉತ್ತಮ ಕೇಂದ್ರ ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

ಸಮಾರಂಭದಲ್ಲಿ ಪ.ಪಂ ಅಧ್ಯಕ್ಷೆ ವಿಶಾಲಾಕ್ಷಿ, ಜಿಲ್ಲಾ ನಿರ್ದೇಶಕ ಎಸ್. ಜನಾರ್ದನ್, ಪ್ರಾದೇಶಿಕ ಸಮನ್ವಯ ಅಧಿಕಾರಿ ಅನುಷಾ, ಜಿಲ್ಲಾ ಜಾಗೃತಿ ವೇದಿಕೆ ಉಪಾಧ್ಯಕ್ಷ ಪಿ.ಎಸ್.ಅರವಿಂದನ್, ಯೋಜನಾಧಿಕಾರಿ ಗಣೇಶ್ ನಾಯ್ಕ, ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಫಾದರ್ ವಿಲಿಯಂ ಮಿರಾಂದ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು.

# ಬಡವರ ಆಹಾರ ಈಗ ಶ್ರೀಮಂತರ 'ಸಿರಿಧಾನ್ಯ'

## ಆಲೂರು-ಮಲ್ಲಾಪುರ ಕ್ಷೇತ್ರೋತ್ಸವದಲ್ಲಿ ಉಪ ಕೃಷಿ ನಿರ್ದೇಶಕ ಆರ್.ತಿಪ್ಪೇಸ್ವಾಮಿ

ದಾವಣಗೆರೆ, ಜ.8- ಕೃಷಿ ಇಲಾಖೆ ವತಿಯಿಂದ ರಾಷ್ಟ್ರೀಯ ಆಹಾರ ಹಾಗೂ ಪೌಷ್ಠಿಕ ಭದ್ರತೆ ಮತ್ತು ಆತ್ಮ ಯೋಜನೆಯಡಿ ಆಲೂರು-ಮಲ್ಲಾಪುರ ಗ್ರಾಮದ ಪ್ರಗತಿಪರ ರೈತ ಧ್ರುವಕುಮಾರ್ ಜಮೀನಿನಲ್ಲಿ ಸಿರಿಧಾನ್ಯ (ಊದಲು) ಬೆಳೆಯ ಕ್ಷೇತ್ರೋತ್ಸವ ಹಮ್ಮಿಕೊಳ್ಳ ಲಾಗಿತ್ತು.



ಅಧ್ಯಕ್ಷತೆಯನ್ನು ಆಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ನಾಗಮ್ಮಮಂಜುನಾಥ್ ವಹಿಸಿದ್ದರು.

ಉಪ ಕೃಷಿ ನಿರ್ದೇಶಕ ಆರ್. ತಿಪ್ಪೇಸ್ವಾಮಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ರೈತರನ್ನುದ್ದೇಶಿಸಿ ಮಾತನಾಡಿ, 2023ನೇ ವರ್ಷವನ್ನು ಸಿರಿಧಾನ್ಯಗಳ ವರ್ಷ ಎಂದು ಜಾಗತಿಕವಾಗಿ ಘೋಷಣೆ ಮಾಡಲಾಗಿದೆ. ಈ ತಿಂಗಳ ಕೊನೆಯಲ್ಲಿ ಬೆಂಗಳೂರಿನಲ್ಲಿ ದೊಡ್ಡ ಮಟ್ಟದ ಸಿರಿಧಾನ್ಯ ಮೇಳ ನಡೆಸಲಾಗುತ್ತಿದೆ. ಅದರ ಅಂಗವಾಗಿ ಪ್ರತೀ ಜಿಲ್ಲೆಗಳಲ್ಲೂ ಸಿರಿಧಾನ್ಯ ಬೆಳೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ತಿಳಿಸಿದರು.

ಈ ಹಿಂದೆ ಒಂದು ಕಾಲದಲ್ಲಿ ಬಡವರು ಮಾತ್ರ ನವಣೆ, ಸಾಮೆ, ಊದಲು, ಹಾರಕ, ಬರಗು ಧಾನ್ಯಗಳನ್ನು ಆಹಾರವಾಗಿ ಬಳಸುತ್ತಿದ್ದರು. ದುಡ್ಡಿದ್ದವರು ನೆಲ್ಲಕ್ಕಿ ಅನ್ನ ಊಟ ಮಾಡುತ್ತಿದ್ದರು. ಈಗ ಇವೆಲ್ಲವೂ ಸಿರಿಧಾನ್ಯಗಳಾಗಿರುತ್ತವೆ. ಕಾರಣ ಈಗ ಈ ಸಿರಿಧಾನ್ಯಗಳನ್ನು ಶ್ರೀಮಂತರು, ಐಟಿ-ಬಿಟಿ ಕಂಪನಿ ಉದ್ಯೋಗಿಗಳು ಇವುಗಳ ಬಳಕೆಯನ್ನು ಹೆಚ್ಚು ಮಾಡಿದ್ದಾರೆ. ಅತೀ ಕಡಿಮೆ ಗೊಬ್ಬರ ಬಳಕೆ, ಕೀಟ ರೋಗಗಳ ಭಾಧೆ ಇರುವುದಿಲ್ಲ. ರೈತರು ತಮಗಿರುವ ಜಮೀನಿನಲ್ಲಿ ಸಿರಿಧಾನ್ಯಗಳನ್ನೂ ಬೆಳೆಯಬೇಕೆಂದು ಮನವಿ ಮಾಡಿದರು.

ಸಹಾಯಕ ಕೃಷಿ ನಿರ್ದೇಶಕ ಶ್ರೀಧರಮೂರ್ತಿ ಡಿ.ಎಂ. ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಜಿಲ್ಲೆ, ರಾಜ್ಯ, ದೇಶಕ್ಕಲ್ಲ ಇಡೀ ಪ್ರಪಂಚಕ್ಕೆ 2023ನೇ ವರ್ಷವನ್ನು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿ ಆಚರಣೆ ಮಾಡಲಾಗುತ್ತಿದೆ. ಈ ಹಿನ್ನಲೆಯಲ್ಲಿ ತಾಲ್ಲೂಕಿನಲ್ಲಿ ಸಿರಿಧಾನ್ಯ ಜಾಥಾ, ಶಾಲಾ ಮಕ್ಕಳಿಗೆ ಸಿರಿಧಾನ್ಯ ರಸಪ್ರಶ್ನೆ ಕಾರ್ಯಕ್ರಮ, ಕಿಸಾನ್‌ಗೋಷ್ಠಿ, ಕ್ಷೇತ್ರೋತ್ಸವ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಆಲೂರಿನ ಶ್ರೀ ಆಂಜನೇಯ ಸ್ವಾಮಿ ಪ್ರೌಢಶಾಲೆ ಮುಖ್ಯೋಪಾಧ್ಯಾಯಿನಿ ಲಲಿತಾಬಾಯಿ, ದಾವಣಗೆರೆ ನೇಗಿಲಸಿರಿ ರೈತ ಉತ್ಪಾದಕ ಕಂಪನಿ ಸಿಇಓ ರಾಘವೇಂದ್ರ, ಪ್ರಗತಿಪರ ರೈತರಾದ ಧ್ರುವಕುಮಾರ್ ಮಾತನಾಡಿದರು.

ಸಿರಿಧಾನ್ಯ ರಸಪ್ರಶ್ನೆ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಸಂಜನಾ ಎಸ್.ಬಿ., (ಪ್ರಥಮ), ರಾಕೇಶ್ ಕೆ.ಎಸ್., (ದ್ವಿತೀಯ) ಮತ್ತು ಪವಿತ್ರ ಹೆಚ್.ಯು., (ತೃತೀಯ) ಅವರನ್ನು ಕೃಷಿ ಇಲಾಖೆ ವತಿಯಿಂದ ಸನ್ಮಾನಿಸಲಾಯಿತು.

ನೇಗಿಲಸಿರಿ ರೈತ ಉತ್ಪಾದಕ ಕಂಪನಿ ಅಧ್ಯಕ್ಷ ಸಿದ್ದಯ್ಯ ಟಿ.ಎಂ., ಗ್ರಾಮ ಪಂಚಾಯಿತಿ ಸದಸ್ಯರಾದ ಡಿ. ಬಸವರಾಜ, ಶಂಕರಪ್ಪ, ಮಂಜಣ್ಣ,, ಕೃಷಿ ಅಧಿಕಾರಿ ಶ್ರೀನಿವಾಸ ಆರ್, ಸಹಾಯಕ ಕೃಷಿ ಅಧಿಕಾರಿ ಸುರೇಶ್, ಆತ್ಮ ಸಿಬ್ಬಂದಿಗಳಾದ ವೆಂಕಟೇಶ್, ರೇಷ್ಮ, ಅನುವುಗಾರರಾದ ಸಿದ್ದಲಿಂಗಪ್ಪ, ಜಲಾನಯನ ಸಹಾಯಕ ಗಣೇಶ್, ಆಲೂರು ಮತ್ತು ಮಲ್ಲಾಪುರ ಗ್ರಾಮಗಳ ರೈತರು ಉಪಸ್ಥಿತರಿದ್ದರು.

# 'ಅಂಬಿಗರ ಚೌಡಯ್ಯನವರ ವಚನ ಸಾಹಿತ್ಯ ಸಾಂಸ್ಕೃತಿಕೋತ್ಸವ'ದ ಯಶಸ್ಸಿಗೆ ಕರೆ

ದಾವಣಗೆರೆ, ಜ. 8- ಭಾರತ ದೇಶ ಸಾಂಸ್ಕೃತಿಕ ನಾಡು, ಅಧ್ಯಾತ್ಮಿಕತೆಯ ಬೀಡು. ಇಲ್ಲಿ ಬಹಳಷ್ಟು ಜಾತ್ರೆಗಳಾಗುತ್ತವೆ. ಆದರೆ, ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠ ದಲ್ಲಿ ನಡೆಯುತ್ತಿರುವ 'ವಚನ ಸಾಹಿತ್ಯ ಸಾಂಸ್ಕೃತಿಕೋತ್ಸವ' ಜಾತ್ರೆಗೂ ಬೇರೆ ಜಾತ್ರೆ ಗಳಿಗೂ ಸಾಕಷ್ಟು ವ್ಯತ್ಯಾಸವಿದೆ ಎಂದು ಹಾವೇರಿ ಜಿಲ್ಲೆ ನರಸೀಪುರದಲ್ಲಿನ ನಿಜಶರಣ ಅಂಬಿಗರ ಚೌಡಯ್ಯನವರ ಗುರು ಪೀಠದ ಪೀಠಾಧ್ಯಕ್ಷರಾದ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ತಿಳಿಸಿದರು.

ಇದೇ 14 ಮತ್ತು 15ರಂದು ಗುರುಪೀಠದಲ್ಲಿ ನಡೆಯಲಿರುವ ಅಂಬಿಗರ ಚೌಡಯ್ಯ ನವರ ವಚನ ಸಾಹಿತ್ಯ ಸಾಂಸ್ಕೃತಿಕೋತ್ಸವದ ಅಂಗವಾಗಿ ದಾವಣಗೆರೆಯಲ್ಲಿ ಜಿಲ್ಲಾ ಗಂಗಾ ಮತಸ್ಥರ (ಬೆಸ್ತರ) ಸಂಘದಲ್ಲಿ ನಡೆದ ಪೂರ್ವ ಭಾವಿ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಸಮಾಜ ಬಾಂಧವರು ನಮ್ಮ ಜಾತ್ರೆಯಲ್ಲಿ ಭಾಗವಹಿಸಿದರೆ ನ್ಯಾಯ ಸಿಗುತ್ತದೆ. ಜಾತ್ರೆ ನಮಗೆ ಸಂಸ್ಕಾರ ಕಲಿಸುತ್ತದೆ, ನಮ್ಮ ಶಕ್ತಿ ಪ್ರದರ್ಶನ ಮಾಡಬಹುದು.

ರಾಜಕೀಯ ಶಕ್ತಿ ಬರಲಿದೆ, ಹೋರಾಟದ ಕಿಚ್ಚು ಹೆಚ್ಚಲಿದೆ. ದುಂದುವೆಚ್ಚದ ಜಾತ್ರೆಯಲ್ಲ, ಬದಲಾಗಿ ವೈಜ್ಞಾನಿಕ ಕಾರಣಗಳಿಂದ ಆರಂಭಿಸಿರುವ ಜಾತ್ರೆ ಇದು ಎಂದು ಹೇಳಿದರು.

ಪವಿತ್ರ ತುಂಗಭದ್ರಾ ನದಿ ದಡದಲ್ಲಿ ಅಂಬಿಗರ ಚೌಡಯ್ಯನವರು ಐಕ್ಯವಾದ ಸ್ಥಳದಲ್ಲಿ ನಡೆಯುವ ಈ ಜಾತ್ರೆ, ನಮ್ಮ ಕುಲದ ಸಂಸ್ಕೃತಿ ಎತ್ತಿ ತೋರಿಸುತ್ತದೆ. 39 ಪರ್ಯಾಯ ಪದಗಳಿಂದ ಕರೆಯಲ್ಪಡುವ ನಮ್ಮ



ಸಮಾಜದವರನ್ನು ಒಂದೆಡೆ ಸೇರಿಸುವ ಈ ಜಾತ್ರೆ ಬೇರೆ ಜಾತ್ರೆಗಳಿಗಿಂತ ವಿಭಿನ್ನವಾಗಿದೆ ಎಂದು ಶ್ರೀಗಳು ವಿಶ್ಲೇಷಿಸಿದರು.

ಗುರುಪೀಠ ಇನ್ನೂ ಬೆಳೆಯುವ ಕೂಸಿದ್ದಂತೆ, ಆರ್ಥಿಕವಾಗಿ ಸಬಲಗೊಳ್ಳಬೇಕಿದೆ. ಇದಕ್ಕಾಗಿ ತಾವು ರಾಜ್ಯದಲ್ಲಿ ನಾಲ್ಕು ಬಾರಿ ಪ್ರವಾಸ ಮಾಡಿದ್ದು, ಜನಾಂಗಕ್ಕೆ ರಾಜಕೀಯ ಶಕ್ತಿ ಬರಬೇಕಿದೆ. ಯಾರೊಬ್ಬರೂ ಮಠದ ಬಗ್ಗೆ ಅಪಪ್ರಚಾರ ಮಾಡಬಾರದು ಎಂದು ಹೇಳಿದರು.

ಸಮಾಜವನ್ನು ಎಸ್ಟಿಗೆ ಸೇರಿಸುವ ವಿಚಾರವಾಗಿ ರಾಜಕಾರಣಿಗಳು ನೀಡಿದ್ದ ಭರವಸೆಗಳು ಹಾಗೆಯೇ ಉಳಿದುಕೊಂಡಿವೆ. ನಮ್ಮ ಸಮಾಜಕ್ಕಿರುವ ತಾಳ್ಮೆ, ಸಹನೆ ಬೇರಾವ ಸಮಾಜಕ್ಕೂ ಇಲ್ಲ ಎನಿಸುತ್ತದೆ. ಇನ್ನು ಮುಂದೆಯಾದರೂ ಸಮಾಜ ಬಾಂಧವರು ಸಂಘಟಿತರಾಗಬೇಕು ಎಂದ ಸ್ವಾಮೀಜಿ, ಮಠದಲ್ಲಿ ನಡೆಯುವ ಜಾತ್ರೆಯನ್ನು ಯಶಸ್ವಿಗೊಳಿಸಬೇಕೆಂದು ಜನಾಂಗದವರಲ್ಲಿ ಮನವಿ ಮಾಡಿಕೊಂಡರು.

ಸಮಾಜದ ಜಿಲ್ಲಾ ಅಧ್ಯಕ್ಷ ಬಿ.ಕೆ. ಮಂಜುನಾಥ, ಉಪಾಧ್ಯಕ್ಷ ಟಿ.ಮಂಜುನಾಥ, ಕಾರ್ಯದರ್ಶಿ, ಜೆ.ಉಮೇಶ್, ಮುಖಂಡರಾದ ಮಾಗಾನಹಳ್ಳಿ ಹಾಲಪ್ಪ, ಕಲ್ಲೇಶಪ್ಪ, ಲಿಂಗರಾಜ್, ಬಾತಿ ಅಂಜಿನಪ್ಪ ಮತ್ತಿತರರು ಮಾತನಾಡಿದರು. ಇದೇ ಸಂದರ್ಭದಲ್ಲಿ ವಚನ ಸಾಹಿತ್ಯ ಸಾಂಸ್ಕೃತಿಕೋತ್ಸವದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು. ಸಮಾಜದ ಮುಖಂಡ ಯೋಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಸಾವಿತ್ರಿಬಾಯಿ ಫುಲೆ ಇಂದಿಗೂ ಎಂದೆಂದಿಗೂ ಶ್ರೇಷ್ಠರು

## ಸಾವಿತ್ರಿಬಾಯಿ ಫುಲೆಯವರ ಜನ್ಮದಿನಾಚರಣೆಯಲ್ಲಿ ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ



ದಾವಣಗೆರೆ, ಜ.8 - ಸಮಾಜವನ್ನು ಗಟ್ಟಿತನದಿಂದ ನಿಂತು ಕಟ್ಟಿದ ಸಾವಿತ್ರಿಬಾಯಿ ಫುಲೆ ಅವರು ಇಂದಿಗೂ ಎಂದೆಂದಿಗೂ ಶ್ರೇಷ್ಠರು ಎಂದು ಶಾಲಾ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಜಿ.ಆರ್.ತಿಪ್ಪೇಶಪ್ಪ ಸ್ಮರಿಸಿದರು.

ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಡಾ. ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ ಕನ್ನಡ ವಿಭಾಗ ಮತ್ತು ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾ ಘಟಕದ ವತಿಯಿಂದ ಮೊನ್ನೆ ಹಮ್ಮಿಕೊಂಡಿದ್ದ ಅಕ್ಷರದವ್ವ ಮಾತೆ ಸಾವಿತ್ರಿಬಾಯಿ ಫುಲೆಯವರ ಜನ್ಮದಿನಾಚರಣೆ, ಉಪನ್ಯಾಸ ಮತ್ತು ಏಕವ್ಯಕ್ತಿ ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಂದಿನ ಕಾಲದಲ್ಲೇ ಮಹಿಳೆಯರಿಗೆ ಶಿಕ್ಷಣ ಪಡೆದು ಶಿಕ್ಷಕಿ ಆಗುವ ಅವಕಾಶ ಕಲ್ಪಿಸಿಕೊಡದೇ ಬಹಳ ಸಂಕುಚಿತ ಮನೋಭಾವದಿಂದ ನಡೆಸಿಕೊಳ್ಳಲಾಗುತ್ತಿತ್ತು. ಸಂಬಂಧಿಸಿದ ಇಲಾಖೆಯಾಗಲೀ, ಸರ್ಕಾರವಾಗಲೀ ಪ್ರಾತಿನಿಧ್ಯ ನೀಡಿರಲಿಲ್ಲ. ಅಂತಹ ಸಂದರ್ಭದಲ್ಲಿ ನಮ್ಮ ದೇಶದ ಮೊಟ್ಟ ಮೊದಲ ಶಿಕ್ಷಕಿ ಅವರಾದ ಸಾವಿತ್ರಿಬಾಯಿ ಫುಲೆ ಅವರು ಮಹಿಳೆಯರ ಶಿಕ್ಷಣಕ್ಕಾಗಿ ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸಿದ್ದರು ಎಂದು ಹೇಳಿದರು.

ಅಂದಿನ ಸಾಮಾಜಿಕ ಸ್ಥಿತಿಯಲ್ಲಿ ಅಸ್ಪೃಶ್ಯತೆ ಎಂಬ ಜಾಡು ಬೇರೂರಿತ್ತು. ಈ ಸಂದರ್ಭದಲ್ಲಿ ದಲಿತರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಬಾವಿಗಳಲ್ಲಿ ನೀರು ಪಡೆಯಲು ಬಿಡುತ್ತಿರಲಿಲ್ಲ. ಅಂಥವರಿಗೆ ಮನೆಯಲ್ಲೇ ಬಾವಿ ತೆರೆದು ಮುಕ್ತ ಅವಕಾಶ ನೀಡಿದ್ದರು. ಅಂದು ಜಾರಿಯಲ್ಲಿದ್ದ ಬಾಲ್ಯ ವಿವಾಹ ಪದ್ಧತಿಯನ್ನು ವಿರೋಧಿಸಿದ್ದ ಅವರು, ಚಿಕ್ಕ ವಯಸ್ಸಿನಲ್ಲೇ ವಿಧವೆ ಆದವರಿಗೆ ರಕ್ಷಣೆ ನೀಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಹಾಗಾಗಿ ಅವರು ಸಾಮಾಜಿಕ ಕಾರ್ಯಗಳಿಂದ ಇಂದಿಗೂ ಎಂದೆಂದಿಗೂ ಶ್ರೇಷ್ಠರಾಗಿರುತ್ತಾರೆ ಎಂದು ಹೇಳಿದರು.

ದಾವಣಗೆರೆ ದಕ್ಷಿಣ ವಲಯದ ಬಿಇಓ ಬಿ.ಎಂ. ದಾರುಕೇಶ್ ಮಾತನಾಡಿ, ದೇಶಕ್ಕಾಗಿ ಸಾವಿತ್ರಿಬಾಯಿ ಫುಲೆ ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಆದರೆ, ದೇಶದ ಭವಿಷ್ಯವಾಗಿರುವ ಇಂದಿನ ಯುವಜನತೆ ಜವಾಬ್ದಾರಿ ಇಲ್ಲದೆ ವರ್ತಿಸುತ್ತಿದ್ದಾರೆ. ಕೆಲವರು ಅನಾವಶ್ಯಕವಾಗಿ ತಮ್ಮ ಅಮೂಲ್ಯ ಬದುಕು ನಾಶಮಾಡಿಕೊಳ್ಳುತ್ತಿದ್ದಾರೆ. ತಮ್ಮ ಭವಿಷ್ಯದ ಬಗ್ಗೆ ಸ್ಪಷ್ಟ ಮಾರ್ಗದರ್ಶನವಿಲ್ಲದೇ ಆಶಾಭಾವನೆ ಕಳೆದುಕೊಂಡು ಆತಂಕದಲ್ಲಿದ್ದಾರೆ. ತಮ್ಮ ಜವಾಬ್ದಾರಿಗಳನ್ನು ಅರಿತು ಸಾವಿತ್ರಿಬಾಯಿ ಫುಲೆ ಅವರ ತತ್ವಾದರ್ಶಗಳನ್ನು ಕನಿಷ್ಠ ಶೇ. 5 ರಷ್ಟು ಪಾಲಿಸಿ ಛಲ, ಸ್ವಾಭಿಮಾನದಿಂದ ಬದುಕು ಕಟ್ಟಿಕೊಂಡು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಲು ಮುಂದಾಗಬೇಕು ಎಂದರು.

ಶೈಕ್ಷಣಿಕ ಸಲಹೆಗಾರ ಮತ್ತು ತರಬೇತುದಾರ ಜಗನಾಥ್ ನಾಡಿಗೇರ್ ಉಪನ್ಯಾಸ ನೀಡಿ, ಸಾವಿತ್ರಿಬಾಯಿ ಫುಲೆ ಅವರು ಪ್ರವಾಹದ ವಿರುದ್ಧ ಈಜದೆ ಪ್ರವಾಹದ ದಿಕ್ಕನ್ನೇ ಬದಲಿಸಿದ್ದರು. ಅವರ ಆದರ್ಶಗಳನ್ನು ಹೇಳುವುದು ಸುಲಭ ಆದರೆ ಅದನ್ನು ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸುವುದು ಕಷ್ಟ. ಸಾವಿತ್ರಿಬಾಯಿ ಫುಲೆ ಅವರ ಬದುಕನ್ನು ಸಮಾಜ ಸೇವೆಗಾಗಿ ಮುಡುಪಾಗಿಟ್ಟಿದ್ದರು. ಅವರ ಜೀವನ ಚರಿತ್ರೆ ಇಂದಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರೇರಣೆ ಆಗಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಬಿ. ಬೋರಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾಧ್ಯಕ್ಷರಾದ ಕಲ್ಪನಾ ರವೀಂದ್ರನಾಥ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉತ್ತರ ವಲಯ ಬಿಇಓ ಟಿ. ಅಂಬಣ್ಣ, ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ಜೆ. ಅನಿತಾಕುಮಾರಿ, ಪತ್ರಕರ್ತೆ ಹೆಚ್. ಅನಿತಾ, ಸಂಘದ ಗೌರವಾಧ್ಯಕ್ಷೆ ಕೆ.ಜಿ. ಸೌಭಾಗ್ಯ, ಹೆಚ್.ಎಂ. ಮಂಗಳಾ, ಸಿ. ಪದ್ಮ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಸಹಾಯಕ ಪ್ರಾಧ್ಯಾಪಕ ಡಾ. ಹೆಚ್.ಆರ್. ತಿಪ್ಪೇಸ್ವಾಮಿ ನಿರೂಪಣೆ ಮಾಡಿದರು. ಸಹಾಯಕ ಪ್ರಾಧ್ಯಾಪಕಿ ಪ್ರೊ. ಪಿ. ರಶ್ಮಿ ವಂದಿಸಿದರು.

ಕಾರ್ಯಕ್ರಮದ ನಂತರ ಸಾಗರದ ಕೆ.ವಿ. ಸುಬ್ಬಣ್ಣ ರಂಗ ಸಮೂಹ ಮತ್ತು ನಾಡ ಚಾವಡಿಯ ಎ.ಎಸ್. ಶೈಲಜಾ ಪ್ರಕಾಶ್ ಅವರಿಂದ ಸಾವಿತ್ರಿಬಾಯಿ ಫುಲೆ ಅವರ ಜೀವನ ಚರಿತ್ರೆಯ ಕುರಿತು ಏಕ ವ್ಯಕ್ತಿ ನಾಟಕ ಪ್ರದರ್ಶಿಸಲಾಯಿತು.

### ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ - 2023

# ಸಿರಿಧಾನ್ಯ ರಸಪ್ರಶ್ನೆ ಕಾರ್ಯಕ್ರಮ



ದಾವಣಗೆರೆ, ಜ. 8- ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ-2023ರ ಅಂಗವಾಗಿ ಈಚೆಗೆ ತಾಲ್ಲೂಕಿನ ಆಲೂರು ಗ್ರಾಮದಲ್ಲಿ ಕೃಷಿ ಇಲಾಖೆಯಿಂದ 'ಸಿರಿಧಾನ್ಯ ಜಾಥಾ' ಮತ್ತು ಶ್ರೀ ಆಂಜನೇಯ ಸ್ವಾಮಿ ಪ್ರೌಢಶಾಲೆ ಮಕ್ಕಳಿಗೆ 'ಸಿರಿಧಾನ್ಯ ರಸಪ್ರಶ್ನೆ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಆಲೂರು ಗ್ರಾಮದ ಪ್ರಮುಖ ಬೀದಿಗಳಲ್ಲಿ ಕೃಷಿ ಇಲಾಖೆ ಅಧಿಕಾರಿಗಳು, ರೈತರು, ಶಿಕ್ಷಕರು, ಹಾಗೂ ಪೌಢಶಾಲೆಯ ವಿದ್ಯಾರ್ಥಿಗಳು 'ನವಣೆ ತಿಂದವರು ಬುದ್ಧಿವಂತರಾಗುವರು, ಬರಗು ತಿಂದರೆ ಜಡ್ಡು ಬೀಳಲ್ಲ, ರಾಗಿ ತಿಂದವರು ನಿರೋಗಿ, ಜೋಳ ತಿಂದವನು ಜಟ್ಟಿಯಾದ, ಅಕ್ಕಿ ತಿಂದವನು ಹಕ್ಕಿಯಾದ, ಬಿತ್ತುವ ಬೀಜವೇ ತಿನ್ನುವ ಅನ್ನ, ಬೇಕು ಅಂದ್ರೆ ಒಳ್ಳೆಯ ನಿದ್ದೆ - ನುಂಗ್ಬೇಕಣ್ಣ ರಾಗಿ ಮುದ್ದೆ, ಸಿರಿಧಾನ್ಯ ಸೇವಿಸಿ ಅನಾರೋಗ್ಯ ದೂರವಿರಿಸಿ' ಮುಂತಾದ ಸಿರಿಧಾನ್ಯ ವಾಕ್ಯಗಳ ಘೋಷಣೆ ಕೂಗುತ್ತಾ ಸಂಚರಿಸಿದರು.

ಜಾಥಾದಲ್ಲಿ ದಾವಣಗೆರೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕ ಡಿ.ಎಂ. ಶ್ರೀಧರಮೂರ್ತಿ ಮಾತನಾಡಿ, 2023ನೇ ವರ್ಷವನ್ನು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಘೋಷಣೆ ಮಾಡಲಾಗಿದ್ದು, ರೈತರು ಮತ್ತು ಸಾರ್ವಜನಿಕರಲ್ಲಿ ಸಿರಿಧಾನ್ಯ ಬೆಳೆಗಳ ಪ್ರಾಮುಖ್ಯತೆ ತಿಳಿಸುವ ಉದ್ದೇಶದಿಂದ ಈ ಜಾಥಾ ಮಾಡಲಾಗಿದ್ದು, ಅತಿ ಕಡಿಮೆ ಖರ್ಚಿನಲ್ಲಿ ಸಿರಿಧಾನ್ಯ ಬೆಳೆಗಳನ್ನು ಬೆಳೆಯಬಹುದಾಗಿದ್ದು, ಇವುಗಳನ್ನು ಆಹಾರವಾಗಿ ಸೇವಿಸುವುದರಿಂದ ನಮ್ಮ ಆರೋಗ್ಯ ಚೆನ್ನಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಕರ್ನಾಟಕ ಸರ್ಕಾರದಿಂದ ಸಿರಿಧಾನ್ಯ ಬೆಳೆದ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.10000/-ಗಳನ್ನು ನೇರವಾಗಿ ರೈತರ ಖಾತೆಗೆ ರೈತ ಸಿರಿ ಯೋಜನೆಯಡಿ ಜಮೆ ಮಾಡಲಾಗುತ್ತದೆ ಎಂದು ತಿಳಿಸುತ್ತಾ, ಮುಂದಿನ ದಿನಗಳಲ್ಲಿ ಕೃಷಿ ಇಲಾಖೆಯಿಂದ ಸಿರಿಧಾನ್ಯ ಬೆಳೆದ ರೈತರ ಹೊಲದಲ್ಲಿ ಸಿರಿಧಾನ್ಯ ಕ್ಷೇತ್ರೋತ್ಸವ ಮಾಡುವ ಉದ್ದೇಶವಿದ್ದು, ಇದರ ಸದುಪಯೋಗ ಪಡೆಯಬೇಕೆಂದು ಶ್ರೀಧರ ಮೂರ್ತಿ ತಿಳಿಸಿದರು.

ಉಪ ಕೃಷಿ ನಿರ್ದೇಶಕ ಆರ್. ತಿಪ್ಪೇಸ್ವಾಮಿ ಶಾಲೆಯ ಮಕ್ಕಳಿಗೆ ಸಿರಿಧಾನ್ಯ ಆಹಾರ ಮತ್ತು ಅವುಗಳ ಮಹತ್ವ ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಆಂಜನೇಯ ಪ್ರೌಢಶಾಲೆಯ ಮಕ್ಕಳು, ಮುಖ್ಯೋಪಾಧ್ಯಾಯರಾದ ಶ್ರೀಮತಿ ಲಲಿತಾಬಾಯಿ ಹಾಗೂ ಶಿಕ್ಷಕರು ಭಾಗವಹಿಸಿದ್ದರು.

ಆನಗೋಡು ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಆರ್. ಶ್ರೀನಿವಾಸ, ಎ.ವಿ. ರವಿಕುಮಾರ್, ಸಹಾಯಕ ಕೃಷಿ ಅಧಿಕಾರಿ ಎಂ.ಎನ್. ಸುರೇಶ್, ಆತ್ಮ ಸಿಬ್ಬಂದಿಗಳಾದ ವೆಂಕಟೇಶ್ ಮತ್ತು ಶ್ರೀಮತಿ ರೇಷ್ಮಾ ಹಾಗೂ ಗಣೇಶ್ ಹಾಜರಿದ್ದರು.

# ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ನಿಲ್ಲಿಸಿ



## ಹೊಸಹಳ್ಳಿ ಗ್ರಾಮಸ್ಥರಿಂದ ತಾಪಂ ಇಓ, ಎಸಿಗೆ ಮನವಿ

ಹೊನ್ನಾಳಿ, ಜ. 8- ತಾಲ್ಲೂಕಿನ ಹೊಸಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಬಾಗವಾಡಿ ಗ್ರಾಮದಲ್ಲಿ ಗ್ರಾ.ಪಂ. ವತಿಯಿಂದ ಜನವಸತಿ ಪ್ರದೇಶದಲ್ಲಿ ನಿರ್ಮಿಸುತ್ತಿರುವ ಕಸ ಮತ್ತು ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ಮಾಡುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕೆಂದು ಗ್ರಾಮಸ್ಥರು ತಾಲ್ಲೂಕು ಪಂಚಾಯ್ತಿ ಇಓ ರಾಮಭೋವಿ ಹಾಗೂ ಹೊನ್ನಾಳಿ ಉಪವಿಭಾಗಾಧಿಕಾರಿ ಹುಲ್ಮನಿ ತಿಮ್ಮಣ್ಣ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿದ ನಂತರ ಗ್ರಾಮದ ಮುಖಂಡ ಹಾಗೂ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ದೇವರಾಜ ಮಾತನಾಡಿ, ಗ್ರಾ. ಪಂ. ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಘಟಕ ಸ್ಥಾಪಿಸುತ್ತಿರುವುದು ಗ್ರಾಮದಲ್ಲಿನ ಘನತ್ಯಾಜ್ಯ ಕಸವನ್ನು ಗ್ರಾಮದಲ್ಲಿ ಮುಕ್ತಗೊಳಿಸಲು ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ. ಆದರೆ ಗ್ರಾ.ಪಂ.ಸದಸ್ಯರು ಮತ್ತು ಸಂಬಂಧಿಸಿದ ಅಧಿಕಾರಿಗಳು ಗ್ರಾಮದ ಮಧ್ಯಭಾಗದಲ್ಲಿ ಘಟಕ ನಿರ್ಮಿಸಿ, ಅದನ್ನು ಸಂರಕ್ಷಿಸುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಹೊಸಹಳ್ಳಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಹೊಸಹಳ್ಳಿಯೇ ದೊಡ್ಡ ಗ್ರಾಮವಾಗಿದ್ದು, ಆ ಗ್ರಾಮದ ಹೊರ ವಲಯದಲ್ಲಿಯೇ ಘಟಕ ನಿರ್ಮಿಸಬಹುದಿತ್ತು. ಅದನ್ನು ಬಿಟ್ಟು ಬಾಗವಾಡಿ ಗ್ರಾಮದಲ್ಲಿ ನಿರ್ಮಿಸುತ್ತಿರುವುದು ಎಷ್ಟು ಸರಿ. ಈ ಘಟಕದ ಸುತ್ತಮುತ್ತ ಜನವಸತಿ ಪ್ರದೇಶ, ಶಾಲಾ ಜಾಗ, ಸ್ಮಶಾನ ಇರುವುದರಿಂದ ಸಮಸ್ಯೆಯಾಗುತ್ತಿದೆ. ಜೊತೆಗೆ ಘಟಕ ಕಾರ್ಯ ಪ್ರಾರಂಭವಾದರೆ ಇದರಿಂದ ಬರುವ ದುರ್ವಾಸನೆ ಗ್ರಾಮಸ್ಥರಿಗೆ ತೊಂದರೆಯಾಗುವ ಜೊತೆಗೆ ಇಡೀ ಗ್ರಾಮವೇ ಸಾಂಕ್ರಾಮಿಕ ರೋಗಕ್ಕೆ ತುತ್ತಾಗುತ್ತದೆ. ಆದ್ದರಿಂದ ಕೂಡಲೇ ಇದನ್ನು ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿದರು.

ಘನತ್ಯಾಜ್ಯ ಘಟಕವನ್ನು ನಿರ್ಮಿಸಲು ಗ್ರಾ.ಪಂ.ನಿಂದ ಬಾಗವಾಡಿ ಗ್ರಾಮದಲ್ಲಿ ಗ್ರಾಮ ಸಭೆ ನಡೆಸದೆ ಗ್ರಾಮಸ್ಥರ ಒಪ್ಪಿಗೆ ಪಡೆಯದೇ ಗ್ರಾಮಸ್ಥರು ವಿರೋಧಿಸುತ್ತಿದ್ದರೂ ಸಹ ಗ್ರಾಪಂ ಸದಸ್ಯೆ ನಿರ್ಮಲ ಅವರ ಕುಟುಂಬದವರು ಈ ಕಾಮಗಾರಿಯನ್ನು ನಡೆಸುತ್ತಿದ್ದಾರೆ. ಸರ್ಕಾರದ ಸುತ್ತೋಲೆ ಪ್ರಕಾರ ಗ್ರಾ.ಪಂ. ಸದಸ್ಯರು ಯಾವುದೇ ಕಾಮಗಾರಿಯನ್ನು ಮಾಡುವಂತಿಲ್ಲ ಎಂದರು.

ಈ ಕುರಿತು ಶಾಸಕ ರೇಣುಕಾಚಾರ್ಯ ಪಂಚಾಯ್ತಿ ಇಓ ಹಾಗೂ ಪಿಡಿಓ ಹಾಗು ಅಧಿಕಾರಿಗಳಿಗೆ 2022ರ ಜೂನ್ ತಿಂಗಳಲ್ಲಿ ಘನತ್ಯಾಜ್ಯ ಘಟಕ ಸ್ಥಾಪಿಸುವುದನ್ನು ವಿರೋಧಿಸಿ ನೂರಾರು ಗ್ರಾಮಸ್ಥರ ಸಹಿಯೊಂದಿಗೆ ಅರ್ಜಿ ಸಲ್ಲಿಸಲಾಗಿತ್ತು. ಇಷ್ಟೆಲ್ಲಾ ವಿರೋಧವಿದ್ದರೂ ಗ್ರಾಪಂ ಆಡಳಿತ ಮಂಡಳಿ ಸಂಬಂಧಿಸಿದ ಅಧಿಕಾರಿಗಳು ಈ ಕಾಮಗಾರಿಯನ್ನು ಸ್ಥಗಿತಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಗ್ರಾಮಸ್ಥರೊಂದಿಗೆ ತಾಲ್ಲೂಕು ಕೇಂದ್ರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು.

ತಾಪಂ ಇಓ ರಾಮಭೋವಿ ಮಾತನಾಡಿ, ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸುತ್ತಿರುವುದರಿಂದ ತೊಂದರೆಯಾಗುವುದಿಲ್ಲ. ಘನ ತ್ಯಾಜ್ಯ ಎಂದರೆ ಪ್ಲಾಸ್ಟಿಕ್ ಮತ್ತೊಂದು ಇತರೆ ವಸ್ತುಗಳನ್ನು ಸಂಗ್ರಹಿಸುತ್ತೇವೆ. ಇದರಿಂದ ಯಾವುದೇ ದುರ್ವಾಸನೆ ಬರುವುದಿಲ್ಲ. ಘಟಕದ ಸುತ್ತ-ಮುತ್ತ ಪಾರ್ಕ್ ನಿರ್ಮಾಣ, ಪರಿಸರ ನಿರ್ಮಿಸುವುದರಿಂದ ಯಾವುದೇ ತೊಂದರೆಯಾಗುವುದಿಲ್ಲ. ಗ್ರಾಮಸ್ಥರು ಮಾಹಿತಿ ಕೊರತೆಯಿಂದ ಇಂತಹ ಹೇಳಿಕೆ ನೀಡಿದ್ದು, ನಾವು ಸ್ಥಳ ಪರಿಶೀಲನೆ ನಡೆಸಿ ಗ್ರಾಮಸ್ಥರಿಗೆ ಮನವರಿಕೆ ಮಾಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕೃಷ್ಣಮೂರ್ತಿ, ಪ್ರದೀಪ್, ಮನು, ಆನಂದ, ಮಂಜುನಾಥ್, ಮಾಲತೇಶ್, ರವಿ, ಬಸವರಾಜಪ್ಪ ಉಪಸ್ಥಿತರಿದ್ದರು.

# ಜಿಗಳಿ : ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ



ಮಲೇಬೆನ್ನೂರು, ಜ.8- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ನಂದಿಗಾವಿ ಶ್ರೀನಿವಾಸ್ ಯುವ ಬ್ರಿಗೇಡ್ ವತಿಯಿಂದ ನಂದಿಗಾವಿ ಶ್ರೀನಿವಾಸ್ ಅವರ 44ನೇ ವರ್ಷದ ಜನ್ಮದಿನದ ಸವಿನೆನಪಿಗಾಗಿ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಸಿಹಿ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ ಅವರು, ನಂದಿಗಾವಿ ಶ್ರೀನಿವಾಸ್ ಅವರು ತಮ್ಮ 44ನೇ ಜನ್ಮದಿನದ ಅಂಗವಾಗಿ 44 ಶಾಲೆಗಳಲ್ಲಿ ಸಸಿ ನೆಡುವ ಕಾರ್ಯಕ್ರಮದ ಜೊತೆಗೆ 44 ಶಾಲೆಗಳಿಗೆ ಪೀಠೋಪಕರಣ ಹಾಗೂ ನೋಟ್‌ಬುಕ್ ವಿತರಣೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಎಂ.ಆರ್.ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ದೇವೇಂದ್ರಪ್ಪ, ಗ್ರಾಮದ ಮುಖಂಡ ಗೌಡ್ರ ಬಸವರಾಜಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ.ಪಿ. ಹನುಮಗೌಡ, ಬಿ.ಸೋಮಶೇಖರಚಾರಿ, ಬೆಣ್ಣೇರ ನಂದ್ಯೆಪ್ಪ, ಪತ್ರಕರ್ತ ಪ್ರಕಾಶ್, ಎಸ್‌ಡಿಎಂಸಿ ಸದಸ್ಯರಾದ ಗಂಗಾಧರಚಾರಿ, ಪ್ರಭಾಕರ್, ನಂದಿಗಾವಿ ಶ್ರೀನಿವಾಸ್, ಯುವ ಬ್ರಿಗೇಡ್‌ನ ಹರಳಹಳ್ಳಿ ಮಂಜು, ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಸುಧಾ, ಶಿಕ್ಷಕರಾದ ನಾಗೇಶ್, ಗುಡ್ಡಪ್ಪ, ಶ್ರೀನಿವಾಸ್ ರೆಡ್ಡಿ, ಮಲ್ಲಿಕಾರ್ಜುನ್, ಲಿಂಗರಾಜ್, ಲೋಕೇಶ್, ಕುಸುಮಾ, ದೀಪಾ, ವೀಣಾ ಮತ್ತಿತರರು ಈ ವೇಳೆ ಹಾಜರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಜ್ಞಾನಯೋಗಿ, ಮಹಾಸಂತ ಶ್ರೀ ಸಿದ್ದೇಶ್ವರ ಶ್ರೀಗಳಿಗೆ ಮೌನಾಚರಣೆ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು.

# ನಗರದಲ್ಲಿ ಇಂದು, ನಾಳೆ ಆಧುನಿಕ ಹೈನುಗಾರಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇಂದು ಮತ್ತು ನಾಳೆ ಆಧುನಿಕ ಹೈನುಗಾರಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 08192-233787.

# ಅನ್ವೇಷಣೆಗಳಲ್ಲಿ ತೊಡಗಿಸಿಕೊಳ್ಳಿ

(1ನೇ ಪುಟದಿಂದ) ಅಳವಡಿಸಿಕೊಂಡು ಪ್ರಯೋಗಗಳನ್ನು ಮಾಡುವುದಾಗಿದೆ. ವಿದ್ಯಾರ್ಥಿಗಳು ನಮ್ಮ ಸುತ್ತಲಿನ ಪರಿಸರವನ್ನು ಸೂಕ್ಷ್ಮವಾಗಿ ಗಮನಿಸಿ ಅಲ್ಲಿರುವ ಸಮಸ್ಯೆಯನ್ನು ಬಗೆಹರಿಸುವಂತಹ ಅನ್ವೇಷಣೆ ಮಾಡಬೇಕು. ವಿದ್ಯಾರ್ಥಿಗಳು ಇಂತಹ ವಿಜ್ಞಾನ ಸ್ಪರ್ಧೆಯಲ್ಲಿ ಗೆಲ್ಲುವುದು ಮುಖ್ಯವಲ್ಲ, ಭಾಗವಹಿಸುವುದು ಮುಖ್ಯವಾಗಿದೆ ಎಂದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಗೌರವಾಧ್ಯಕ್ಷ ಡಾ. ಜೆ.ಬಿ. ರಾಜ್ ಮಾತನಾಡಿ, ವಿದ್ಯಾರ್ಥಿಗಳು ಇಂತಹ ವಿಜ್ಞಾನದ ಸ್ಪರ್ಧೆಗಳಲ್ಲಿ ಬಹುಮಾನ ಪಡೆಯುವುದು ಮುಖ್ಯವಲ್ಲ. ಇಲ್ಲಿ ಮಂಡನೆ ಆಗುವ ವಿಷಯ ಸಮಾಜದಲ್ಲಿ ಉಪಯೋಗವಾಗುವಂತೆ ಇರಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಜಿಲ್ಲಾ ಸಮಿತಿ ಖಜಾಂಚಿ ಅಂಗಡಿ ಸಂಗಮೇಶ್, ಮಕ್ಕಳಲ್ಲಿ ವೈಜ್ಞಾನಿಕ ವಿಚಾರಗಳ ಬಗ್ಗೆ ಆಸಕ್ತಿ ಮೂಡಿಸುವುದಕ್ಕಾಗಿ ಈ ಸಮ್ಮೇಳನವನ್ನು 1993 ರಿಂದಲೂ ನಗರದಲ್ಲಿ ಮಾಡಲಾಗುತ್ತಿದೆ. ಕಳೆದ 30 ವರ್ಷಗಳಲ್ಲಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟಕ್ಕೆ ಹಾಗೂ ಅಂತರ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿ ಜಿಲ್ಲೆಗೆ ಹೆಸರು ತಂದಿದ್ದಾರೆ ಎಂದು ಹೇಳಿದರು.

ಸಮ್ಮೇಳನದಲ್ಲಿ 28 ಶಾಲೆಗಳಿಂದ ಆಗಮಿಸಿದ್ದು, 13 ಗ್ರಾಮೀಣ 15 ನಗರ ಪ್ರದೇಶದ ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜಿಲ್ಲಾ ಮಟ್ಟದ ಸಮಾವೇಶದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ತಂಡಗಳ ಪೈಕಿ 10 ತಂಡಗಳು ರಾಜ್ಯಮಟ್ಟಕ್ಕೆ ಆಯ್ಕೆಗೊಂಡವು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸಹ ಕಾರ್ಯದರ್ಶಿ ಡಾ. ಎಂ.ಆರ್. ಜಗದೀಶ್, ಜಿಲ್ಲಾ ಸಂಯೋಜಕ ಕೆ. ಸಿದ್ದೇಶ್ ಸೇರಿದಂತೆ ಇತರರು ಇದ್ದರು. ಪರಿಷತ್ತಿನ ಕಾರ್ಯದರ್ಶಿ ಎಂ. ಗುರುಸಿದ್ಧ ಸ್ವಾಮಿ ಸ್ವಾಗತಿಸಿದರು.

# ಆತ್ಮಸ್ಥೈರ್ಯ ಇದ್ದರೆ ಸದೃಢ ವ್ಯಕ್ತಿಗಳಾಗಬಹುದು

## ವಿಶ್ವಚೇತನ ವಿದ್ಯಾನಿಕೇತನ ಪಿಯು ಕಾಲೇಜಿನ ವಾರ್ಷಿಕೋತ್ಸವದಲ್ಲಿ ವಿಜಯಲಕ್ಷ್ಮಿ



ದಾವಣಗೆರೆ,ಜ.8- ನಗರದ ವಿಶ್ವಚೇತನ ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜಿನ ವಾರ್ಷಿಕೋತ್ಸವವು ಶ್ರೀಮತಿ ಸುಧಾ ವಿರೇಂದ್ರ ಪಾಟೀಲ್ ಸಮುದಾಯ ಭವನದಲ್ಲಿ ಜರುಗಿತು.

ಮುಖ್ಯ ಅತಿಥಿಗಳಾಗಿ ಶಿಕ್ಷಣ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಎಂ. ಶಿವರಾಜ್ ಆಗಮಿಸಿ ಮಾತನಾಡಿ, ವಿಶ್ವಚೇತನ ಪದವಿ ಪೂರ್ವ ಕಾಲೇಜು ನಾಡಿಗೆ ಉತ್ತಮ ಪ್ರತಿಭೆಗಳನ್ನು ನೀಡುತ್ತಾ ಬಂದಿದೆ ಹಾಗೂ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದೆ. ಈ ಸಂಸ್ಥೆ ಇನ್ನು ಹೆಮ್ಮರವಾಗಿ ಬೆಳೆಯಲಿ ಎಂದು ಹಾರೈಸಿದರು.

ಸಂಸ್ಥೆಯ ಸಂಸ್ಥಾಪಕರಾದ ವಿಜಯಲಕ್ಷ್ಮಿ ವೀರಮಾಚನೇನಿ ಅವರು ಮಾತನಾಡುತ್ತಾ, ಡಾಕ್ಟರ್ ಮತ್ತು ಇಂಜಿನಿಯರ್ ಆಗಲು ಕೋರ್ಸ್‌ಗಳಿವೆ. ಆದರೆ ಬುದ್ಧ, ಬಸವ ಆಗಲು ಯಾವ ಕೋರ್ಸ್‌ಗಳಿಲ್ಲ. ನಮ್ಮಲ್ಲಿರುವ ಶ್ರದ್ಧೆ, ಆಸಕ್ತಿ ಮತ್ತು ಆತ್ಮಸ್ಥೈರ್ಯ ಇದ್ದರೆ ಸಾಕು ಸಮಾಜದಲ್ಲಿ ಸದೃಢ ವ್ಯಕ್ತಿಗಳಾಗುತ್ತಾರೆ ಎಂದು ಹೇಳಿದರು.

ನಿವೃತ್ತ ರಸಾಯನ ಶಾಸ್ತ್ರದ ಪ್ರೊಫೆಸರ್ ಡಾ|| ಎಸ್.ಬಿ. ಬಾಲಾಜಿರಾವ್ ಮಾತನಾಡುತ್ತಾ ಓದುವ ಸಮಯವನ್ನು ಸರಿಯಾಗಿ ಆಯ್ಕೆ ಮಾಡಿಕೊಳ್ಳ ಬೇಕು ಹಾಗೂ ಪೋಷಕರು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಕಿವಿಮಾತನ್ನು ಹೇಳಿದರು.

ವ್ಯಕ್ತಿತ್ವ ಅಭಿವೃದ್ಧಿ ತರಬೇತುದಾರ ಆದರ್ಶ್ ಗೋಖಲೆ, ವಿದ್ಯಾಭ್ಯಾಸ ಎಂಬುದು ಒಂದು ತಪಸ್ಸಿನಂತೆ. ಯಾರು ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡುತ್ತಾರೋ ಅಂತವರಿಗೆ ಪ್ರತಿಫಲ ತಾನಾಗಿಯೇ ದೊರೆಯುತ್ತದೆ ಎಂದು ಹೇಳಿದರು.

ಶಾಲೆಯ ಅಧ್ಯಕ್ಷ ರಾಘವೇಂದ್ರ ಪ್ರಸಾದ್, ಚೇತನ ಸಂಸ್ಥೆಯ ನಿರ್ದೇಶಕ ವಿ.ವಿ. ಕಿರಣ್, ಪ್ರೋಲಿಫೀಕ್ಸ್ ಸಾಫ್ಟ್‌ವೇರ್ ಕಂಪನಿಯ ಮಾನೇಜಿಂಗ್ ಡೈರೆಕ್ಟರ್ ರತ್ನಾಜಿರಾವ್, ವಿದ್ಯಾ ಚೇತನ ಕಾಲೇಜು ಪ್ರಾಂಶುಪಾಲ ಜಿ. ಪವನ್ ಕುಮಾರ್ ಮತ್ತು ವಿಶ್ವಚೇತನ ಕಾಲೇಜಿನ ಪ್ರಾಂಶುಪಾಲ ಜಿ. ವಿನೋದ್ ಕಾರ್ಯಕ್ರಮ ಉದ್ಘಾಟಿಸಿದರು.

ಜಿ. ವಿನೋದ್ ಕಾಲೇಜು ವಾರ್ಷಿಕ ವರದಿ ಓದಿದರು. ಪ್ರತಿಭಾವಂತ ವಿದ್ಯಾರ್ಥಿಗಳಾದ 2021ರಲ್ಲಿ ನೀಟ್ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ ಉತ್ಪಲ ಚೌಧರಿ ಮತ್ತು ವಿಸ್ಮಯ ಹಾಗೂ 2022ರಲ್ಲಿ ನೀಟ್ ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಂತಹ, ಮುರುಕಿ ಶ್ರೀ ಬಾರುಣಿ, ಕಾವ್ಯ ಎಂ.ಜಿ, ಮತ್ತು ಇನ್ನೂ ಅನೇಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

# ಸಾಮಾಜಿಕ ಕಾರ್ಯಕರ್ತನ ಹತ್ಯೆ

(1ನೇ ಪುಟದಿಂದ) ಹೆಣ್ಣುಮಗಳಿದ್ದು ವ್ಯವಸಾಯ ಮಾಡುತ್ತಾ ಜೀವನ ಸಾಗಿಸುತ್ತಿದ್ದೆ. ನನ್ನ ಮಗ ರಾಮಕೃಷ್ಣ ಕಳೆದ ಎರಡು ವರ್ಷಗಳಿಂದ ಸಂಘಟನೆಯ ಮಾಹಿತಿ ಹಕ್ಕು ಕಾರ್ಯ ಕರ್ತನಾಗಿ ಬಡವರಿಗೆ, ದಲಿತರಿಗೆ, ಸರ್ಕಾರದ ಸೌಲಭ್ಯ ಕಲ್ಪಿಸುವ ಹಿನ್ನೆಲೆಯಲ್ಲಿ ಹೋರಾಟ ನಡೆಸುತ್ತಿದ್ದನು.

ಕ್ಯಾಸೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಗರಣಗಳನ್ನು ಪತ್ತೆ ಹಚ್ಚಿ ನ್ಯಾಯ ಕೊಡಿಸಲು ಮುಂದಾಗಿದ್ದ. ಇದಕ್ಕೆ ದ್ವೇಷದಿಂದ ಪಿಡಿಓ ಎ.ಟಿ. ನಾಗರಾಜ್ ಅವರ ಕುಟುಂಬದ ಕುಮ್ಮಕ್ಕಿನಿಂದ 8 ಜನ ತಂಡ ನನ್ನ ಮಗ ನನ್ನು ಡಾಬಾಕ್ಕೆ ಕರೆದುಕೊಂಡು ಹೋಗಿ ಮದ್ಯಪಾನ ಮಾಡಿಸಿ ಕಲ್ಲಿನಿಂದ ಬಲವಾಗಿ ಹೊಡೆದು ಕೊಲೆ ಮಾಡಿದ್ದಾರೆ ಎಂದು ದೂರು ನೀಡಿದ್ದಾರೆ.

**ಸ್ಥಳಕ್ಕೆ ಡಿವೈಎಸ್ ಪಿ ಭೇಟಿ:** ಘಟನಾ ಸ್ಥಳಕ್ಕೆ ಡಿವೈಎಸ್ ಪಿ ಕನ್ನಿಕಾ ಸಿಕ್ರಿವಾಲ್ ಹಾಗೂ ತಂಡ ಭೇಟಿ ನೀಡಿ ಮಹಜರ್ ಮಾಡಲಾಗಿದೆ. ಜಗಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

**ಇಬ್ಬರ ಬಂಧನ:** ಈ ಕೊಲೆಗೆ ಸಂಬಂಧಿಸಿದಂತೆ ಅರ್ಜುನ್, ಪ್ರಶಾಂತ ಎಂಬುವರನ್ನು ಬಂಧಿಸಲಾಗಿದೆ. ತನಿಖೆ ಮುಂದುವರೆದಿದೆ ಎಂದು ಎಸ್ಪಿ ಸಿ.ಬಿ.ರಿಷ್ಯಂತ್ ಮಾಹಿತಿ ನೀಡಿದ್ದಾರೆ.

**ಶಾಸಕ ಎಸ್.ವಿ.ರಾಮಚಂದ್ರ ಪ್ರಕ್ರಿಯೆ:** ನನ್ನ ಆಡಳಿತಾವಧಿಯಲ್ಲಿ ಈ ರೀತಿ ದ್ವೇಷದಿಂದ ಕೊಲೆಗೈದ ಪ್ರಕರಣ ಪ್ರಥಮವಾಗಿದೆ. ಶಾಂತಿ ಕಾಪಾಡಿದ ನನಗೆ ಬೇಸರ ತಂದಿದೆ.ಕೂಡಲೇ ಯಾರೇ ಆಗಿರಲಿ ಆರೋಪಿಗಳನ್ನು ಪತ್ತೆ ಹಚ್ಚಿ ಕಾನೂನು ಶಿಕ್ಷೆಗೊಳಪಡಿಸಬೇಕು ಎಂದು ತಿಳಿಸಿದ್ದಾರೆ.

# ಕುಸ್ತಿ ಪಂದ್ಯಾವಳಿ : ಎಂಎಸ್‌ಬಿ ಕಾಲೇಜಿನ ವಿದ್ಯಾರ್ಥಿ ದ್ವಿತೀಯ



ದಾವಣಗೆರೆ, ಜ. 7- ನಗರದ ಜಿಲ್ಲಾ ಕುಸ್ತಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ದಾವಣಗೆರೆ ವಿಶ್ವವಿದ್ಯಾಲಯ ಮಟ್ಟದ ಅಂತರ ಕಾಲೇಜು ಪುರುಷ ಹಾಗೂ ಮಹಿಳಾ ಜೂಡೋ ಕುಸ್ತಿ ಸ್ಪರ್ಧೆಯ ಲ್ಲಿ ಪುರುಷರ ವಿಭಾಗದಲ್ಲಿ ಸತೀಶ್ ಎಂಎಸ್‌ಬಿ ಕಾಲೇಜಿನ ವಿದ್ಯಾರ್ಥಿ ಸತೀಶ್ ದ್ವಿತೀಯ ಸ್ಥಾನ ಪಡೆದಿದ್ದಾರೆ.

# ನ್ಯಾಯ ಪೀಠಕ್ಕೆ ಇಂದು ಬಿಡುವು

(1ನೇ ಪುಟದಿಂದ) ಮಹಾಸ್ವಾಮೀಜಿ ಅವರು ಭಾಗವಹಿಸುತ್ತಿರುವುದರಿಂದ ಜ.9ರ ಸೋಮ ವಾರದ ಸದ್ಧರ್ಮ ನ್ಯಾಯಪೀಠದ ಕಾರ್ಯ ಕಲಾಪಗಳು ನಡೆಯುವುದಿಲ್ಲ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.


**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಶಾಖೆಯಲ್ಲಿ ರಿಕವರಿ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ
ಶಿವಸಂಗಮ ಚಿಟ್ಸ್ ಪ್ರೈ.ಲಿ., ಶಿವಸಂಗಮ ಫೈನಾನ್ಸ್ (ರಿ.)
ಸ್ಥಳ : ಡಾ|| ಬಿ.ಆರ್. ಶಿವಶಂಕರ್ ನಾಗರತ್ನಮ್ಮ ಸಂಕೀರ್ಣ, 4ನೇ ಮೇನ್, ಪಿ.ಜೆ. ಬಡಾವಣೆ, ರಾಂ & ಕೋ ಸರ್ಕಲ್ ಹತ್ತಿರ, ದಾವಣಗೆರೆ.
ಶಾಖೆಗೆ ಸಂಪರ್ಕಿಸಿ : ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ
8197220933, 7353329440

**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ ಆಂಜನೇಯ ಬಡಾವಣೆಯಲ್ಲಿ LIC ಕಾಲೋನಿಯಲ್ಲಿ 40x60 West, 30x50 corner, 30x40 West, 30x40 South, 30x50 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡ ಕ್ರಾಸ್ ಸೈಟುಗಳು ಮಾರಾಟಕ್ಕಿವೆ**
ಬಾಡ ಕ್ರಾಸ್ (ಪೊಲೀಸ್ ಕ್ವಾಟ್ರಸ್)ನಲ್ಲಿ ದಕ್ಷಿಣ 30x40, ಪಕ್ಕ ಪೂರ್ವ-ದಕ್ಷಿಣ ಕಾರ್ನರ್ 30x38, ಶಿವ-ಪಾರ್ವತಿ ಬಡಾವಣೆ ಪೂರ್ವ 40x84 ಅಕ್ಕ-ಪಕ್ಕ, ಪಶ್ಚಿಮ 30x50.
ಐಗೂರು ವಿಜಯಕುಮಾರ್
99457 02495

**ಸೈಟು ಮಾರಾಟಕ್ಕೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 40x60ರ ಪಶ್ಚಿಮ ಡಬಲ್ ರೋಡ್‌ಗೆ, ದಾವಣಗೆರೆಯಿಂದ ಮೊದಲನೇಯ ಟ್ಯಾಂಕ್ ಹತ್ತಿರ
94480 42155
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಬೈಪಾಸ್ ರೋಡ್‌ಗೆ ಹತ್ತಿರವಿರುವ ಶಿವ-ಪಾರ್ವತಿ ಡಾಲರ್ಸ್ ಕಾಲೋನಿ ಮತ್ತು ಸರ್ಕಾರಿ ನೌಕರರ ಬಡಾವಣೆಯಲ್ಲಿ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ.
97425 12125

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x62 ಪೂರ್ವ, ಜೆ.ಹೆಚ್ ಪಾಟೀಲ್ ಬಡಾವಣೆಯಲ್ಲಿ 40x60 ಉತ್ತರ. ದ ಟೀಮ್ ಅಕಾಡೆಮಿ ಕಾಲೇಜ್ ಸುತ್ತ-ಮುತ್ತ ಹೊಸ ಬನಶಂಕರಿ ಬಡಾವಣೆಯಲ್ಲಿ 30x47 ಪೂರ್ವ, 30x50 ಪಶ್ಚಿಮ ನೂತನ ಕಾಲೇಜ್ ಹಿಂಭಾಗ LIC ಕಾಲೋನಿಯಲ್ಲಿ 30x40 ಪಶ್ಚಿಮ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರದವರಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ ರೋಡ್‌ಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40, 30x40 East ಅಕ್ಕ-ಪಕ್ಕ. 30x40, 30x40 West ಅಕ್ಕ-ಪಕ್ಕ. Rate : 1850 ರಿಂದ 1950/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕರ್ನಾಟಕ ಗೃಹಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 West, 40x60 West, 40x60 East, 50x80 North, 30x50 North
Rate : 2200 ರಿಂದ 2500 ರವರೆಗೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**KHB ಸೈಟುಗಳು ಮಾರಾಟಕ್ಕೆ**
ಕರ್ನಾಟಕ ಹೌಸಿಂಗ್ ಬೋರ್ಡ್ (ತುಂಗಭದ್ರಾ ಬಡಾವಣೆ) ದಾವಣಗೆರೆಯಲ್ಲಿ 30X40 ಅಳತೆಯ ದಕ್ಷಿಣ ದಿಕ್ಕಿನ ಸೈಟುಗಳು ಫಲಾನುಭವಿಗಳಿಂದ ನೇರ ಮಾರಾಟ
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
63605 67975

**ಮಳಿಗೆ - ಗೋಡೌನ್ ಬಾಡಿಗೆಗಿದೆ**
ವಿದ್ಯಾರ್ಥಿ ಭವನ ಹತ್ತಿರ
91418 75151

**PART TIME WORK ಮನೆಯಲ್ಲೇ ಉದ್ಯೋಗ**
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ/ Job ತಿಂಗಳಿಗೆ ಸಂಬಳ 12000 ದಿಂದ 18000ದವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ.)
ಸಂಪರ್ಕಿಸಿ :
91487 33213

**ಬೇಕಾಗಿದ್ದಾರೆ**
Accountant ಬೇಕಾಗಿದ್ದಾರೆ ಅನುಭವ ಇರುವವರಿಗೆ ಆದ್ಯತೆ ಕೊಡಲಾಗುವುದು ಸುಮಾರು 20 ಸಾವಿರಗಳವರೆಗೆ ಸಂಬಳ ಕೊಡುತ್ತೇವೆ.
G. MAHANTESHA
98456 85224

**ಬಾಡಿಗೆಗೆ ಇದೆ**
ದಾವಣಗೆರೆ ಜೆ.ಹೆಚ್ ಪಟೇಲ್ ಬಡಾವಣೆ 'ಬಿ ಬ್ಲಾಕ್' 8ನೇ ಮೇನ್ ಒಂದನೇ ಕ್ರಾಸ್ ರಸ್ತೆ (ಪೋದಾರ್ ಇಂಟರ್ ನ್ಯಾಷನಲ್ ಸ್ಕೂಲ್ ಎದುರುಗಡೆ ಇರುವ ಪಾರ್ಕ್ ಪಕ್ಕದ ರಸ್ತೆಯಲ್ಲಿ) 20x30 ಅಳತೆಯ ನೂತನ ಕಟ್ಟಿದ ಮನೆ ಮೊದಲನೇ ಮಹಡಿ ಬಾಡಿಗೆ ಇರುತ್ತದೆ. ಆಸಕ್ತಿ ಇರುವವರು ವಿಚಾರಿಸಿ.
98442 94446, 80500 29144

**ಮನೆ ಬಾಡಿಗೆಗೆ**
ನಿಜಲಿಂಗಪ್ಪ ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿರುವ 3 ಬೆಡ್ ರೂಂವುಳ್ಳ ಡ್ಯುಪ್ಲೆಕ್ಸ್ ಮನೆ ಬಾಡಿಗೆಗೆ ಇದೆ.
ವಿಳಾಸ: # 631, ನಿಜಲಿಂಗಪ್ಪ ಬಡಾವಣೆ 2ನೇ ಮೇನ್ , 9th ಕ್ರಾಸ್, ಅಮೃತಾನಂದಮಯಿ ಶಾಲೆ ಹತ್ತಿರ, ದಾವಣಗೆರೆ.
90606 00090, 74115 87570

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕಾರ್ಯನಿರ್ವಹಿಸಲು ಸೇಲ್ಸ್ ಗರ್ಲ್ಸ್ (Commerce, B Com pass or fail) ಅಕೌಂಟೆಂಟ್ ಟ್ಯಾಲಿ ಬಲ್ಲವರು
ಸಂಪರ್ಕಿಸಿ : ಗುಪ್ತ ಗೋಲ್ಡ್ ಪ್ಯಾಲೇಸ್, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
80957 43423

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಶಿವಕುಮಾರ ಸ್ವಾಮಿ ಬಡಾವಣೆ, ಶಶಿ ಫ್ಯಾಕ್ಟರಿ ಎದುರುಗಡೆಯ ಲೇಔಟ್‌ನಲ್ಲಿ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಬೇಕಾಗಿದ್ದಾರೆ**
ಇಂಗ್ಲಿಷ್ ಓದಬಲ್ಲ SSLC ಪಾಸಾದ/ ಫೇಲಾದ ಹುಡುಗ ಕೆಲಸಕ್ಕೆ ಬೇಕಾಗಿದ್ದಾರೆ.
ರಾಜ ಹೋಮಿಯೋಪತಿ ಮೆಡಿಕಲ್ ಸೆಂಟರ್
ಎವಿಕೆ ಕಾಲೇಜ್ ರಸ್ತೆ, ವಾಸನ್ ಐ ಕೇರ್ ಪಕ್ಕ, ಟೈಟನ್ ಐ ಪ್ಲಸ್ ಎದುರು, ಪಿ.ಜೆ ಬಡಾವಣೆ, ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
1st ಫ್ಲೋರ್, 2 ಬೆಡ್ ರೂಂ ಎಸ್.ಎಸ್. ಲೇಔಟ್, B ಬ್ಲಾಕ್, ನವೋದಯ ( Edu Asia) school ಹತ್ತಿರ, ದಾವಣಗೆರೆ
90196 81452

**House for Lease**
2BHK East 1st Floor at Nijalingappa layout.
Broker Veeranna
M : 96201 66126

**ಹರಿಹರದ KHBಯಲ್ಲಿ ಮನೆ ಮಾರಾಟಕ್ಕೆ ಇದೆ**
40×60 ಹೊಸ ಮನೆ, ನೆಲಮಹಡಿ 3BHK ಒಂದು ಮನೆ, ಮೊದಲನೇ ಮಹಡಿ, 1 BHK ಎರಡು ಮನೆ, ಹರಿಹರ ಹೊಸ ಕೋರ್ಟ್ ಹಿಂಭಾಗ, 40 ಅಡಿ ರಸ್ತೆ,
98440 15114
83100 73553

**ಮನೆ ಬಾಡಿಗೆಗೆ/ಭೋಗ್ಯಕ್ಕೆ**
ಕೆ.ಬಿ.ಬಡಾವಣೆ 2ನೇ ಮೇನ್, 2ನೇ ಕ್ರಾಸ್ ನಾಯ್ಡು ಹೋಟೆಲ್ ಹಾಗೂ ಗುಳ್ಳಮ್ಮ ಪಾರ್ಕ್ ಹತ್ತಿರ ಗ್ರೌಂಡ್‌ಫ್ಲೋರ್‌ನಲ್ಲಿ ಡೋರ್ ನಂ. 438, 3 ಬೆಡ್ ರೂಂ ಇರುವ, ಮುನ್ಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ, ಭೋಗ್ಯಕ್ಕಿದೆ. ಆಫೀಸ್‌ಗಳಿಗೆ, ಪಿ.ಜಿ. ಸೆಂಟರ್‌ಗೆ, ಗೋಡೌನ್‌ಗಳಿಗೆ ಯೋಗ್ಯವಾಗಿದ್ದು ಆಸಕ್ತ ಸಂಪರ್ಕಿಸಿ.
98441 88770

**ಮನೆಯಲ್ಲಿ ಓದಿ, ಮನೆಯಲ್ಲಿಯೇ ಪರೀಕ್ಷೆ**
BA, BCOM, MA, MCOM, MBA (IT, HOSPITAL MANAGEMENT, HR, FINANCE, MARKETING)
ನೇರ ಪರೀಕ್ಷೆಗಳು
NTC, SSLC, PUC
ಶ್ರೀ ಗಂಗೋತ್ರಿ ಕಾಲೇಜ್
ಲಾಯರ್ ರೋಡ್ ದಾವಣಗೆರೆ.
ಮೊ: 86602 35013

**ಬೇಕಾಗಿದ್ದಾರೆ**
SSLC/PUC ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಹಾಗೂ ಅನುಭವವುಳ್ಳ ಬಿಲ್ಲಿಂಗ್ ಕ್ಲರ್ಕ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ.
ಭೇಟಿ ಮಾಡುವ ಸಮಯ ಸಂಜೆ:6:30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂ.ಸಿ.ಸಿ 'ಬಿ' ಬ್ಲಾಕ್, 11ನೇ ಮೇನ್ ಡೋರ್ ನಂ. 3243-2Aನಲ್ಲಿರುವ ಗ್ರೌಂಡ್ ಫ್ಲೋರ್ 3 BHK, 1ನೇ ಫ್ಲೋರ್, 2 BHK ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
98451 00811

**ಮನೆ ಬಾಡಿಗೆಗೆ ಇದೆ**
ಪೂರ್ವ ಮುಖದ ಮೊದಲ ಮಹಡಿಯ ಸಿಂಗಲ್ ಬೆಡ್ ರೂಮ್ ಮನೆ ಬಾಡಿಗೆಗೆ.
ಸಸ್ಯಹಾರಿಗಳಿಗೆ ಮಾತ್ರ
ಫೋ. : 93534 19866

**TALLY OPERATOR ಬೇಕಾಗಿದ್ದಾರೆ**
ಸಂಪರ್ಕಿಸಿ
ಶ್ರೀ ಮಂಗಳ ಆಯಿಲ್ ಟ್ರೇಡರ್ಸ್
72596 35931

**ಬೇಕಾಗಿದ್ದಾರೆ**
ದಾವಣಗೆರೆಯ ಕನ್ನಡ ನ್ಯೂಸ್ ಚಾನೆಲ್‌ಗೆ ಆ್ಯಂಕರ್ (ನಿರೂಪಕರು) ಹಾಗೂ ಕಂಪ್ಯೂಟರ್ ಜ್ಞಾನವುಳ್ಳ ವಿಡಿಯೋ ಎಡಿಟರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ತಕ್ಷಣ ಬೇಕಾಗಿದ್ದಾರೆ.
ಭೇಟಿ ಸಮಯ : ಮಧ್ಯಾಹ್ನ 2 ರಿಂದ ಸಂಜೆ 5ರವರೆಗೆ
ಆವಿಷ್ಕಾರ ನ್ಯೂಸ್ 17 ಕನ್ನಡ
70198 92911

**ಬಾಡಿಗೆಗೆ ಇದೆ**
ಆಫೀಸ್‌ಗೆ/ವಾಣಿಜ್ಯ ಸ್ನೇಹಿ ಕಾಂಪ್ಲೆಕ್ಸ್ ಮೊದಲನೇ ಮಹಡಿ KSRTC ಬಸ್‌ಸ್ಟ್ಯಾಂಡ್ ಪಕ್ಕದಲ್ಲಿ ಗಣೇಶ್ ಲೇಔಟ್ ನಿಟುವಳ್ಳಿ ರಸ್ತೆ.
99642 61560

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ
ನುರಿತ ಅನುಭವವುಳ್ಳ ಆಯಾ ಬೇಕಾಗಿದ್ದಾರೆ.
ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋಡೇಟಾದೊಂದಿಗೆ ಸಂಪರ್ಕಿಸಿ :
ಮೊ.: 98450 35710

**Sri Sanjeevani Institute Of Nursing Science**
Admissions open
B.Sc NURSING
B. Sc MLT (PUC science pass)
M.Sc MLT (B.Sc MLT Pass)
97430 73102, 94489 48214
63627 84565

**ಮಾರಾಟಕ್ಕಿದೆ**
ಎಲ್ಲಾ ವಸ್ತುಗಳು ಇರುವ ಬೇಕರಿ (ಫುಲ್ ಫರ್ನಿಷ್ಡ್ ಬೇಕರಿ ಮಾರಾಟಕ್ಕಿದೆ)
ಎಂ.ಸಿ.ಸಿ. ಬಿ ಬ್ಲಾಕ್, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ದಾವಣಗೆರೆ.
ಆಸಕ್ತಿಯುಳ್ಳವರು ಸಂಪರ್ಕಿಸಿ :
99452 98381, 98808 08159

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಅನುಭವ ಹಾಗೂ ಅನುಭವ ಇಲ್ಲದವರಿಗೂ ಅವಕಾಶವಿದ್ದು, ಆಕರ್ಷಕ ವೇತನ ನೀಡಲಾಗುವುದು.
ಆಸಕ್ತರು ಸಂಪರ್ಕಿಸಿ : ಶ್ರೀ ವಾಸವಿ ಮೆಡಿಕಲ್ ಎಂಪೋರಿಯಮ್, ಪಿ.ಜೆ.ಬಡಾವಣೆ,ದಾವಣಗೆರೆ.
94488 31396

**IIT Foundation Maths**
From 5th STD
Bruit Abacus and Vedic Maths
Nijalingappa Badavane
M: 97390 66956

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವ ಇರುವ ಹುಡುಗರು ಬೇಕಾಗಿದ್ದಾರೆ.
98458 63708, 86603 26067

**ಸೈಟುಗಳು ಮಾರಾಟಕ್ಕಿವೆ**
ಚಿಕ್ಕನಹಳ್ಳಿ ಹೊಸ ಬಡಾವಣೆ, ಖಾದಿ ಬಂಡಾರದ ಹತ್ತಿರ 30×70 North Facing, (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) ಸಂಪರ್ಕಿಸಿ
63601 51212
80951 55777

**ಬೇಕಾಗಿದ್ದಾರೆ**
ಸೇಲ್ಸ್ ಎಕ್ಸಿಕ್ಯೂಟಿವ್ (ಬಾಯ್ಸ್, ಗರ್ಲ್ಸ್) ಮತ್ತು Tally ಅನುಭವವುಳ್ಳವರು ಬೇಕಾಗಿದ್ದಾರೆ.
ಸಂಪರ್ಕಿಸಿರಿ :
ನಯನ ಮೋಟಾರ್ಸ್, ದಾವಣಗೆರೆ.
ಫೋ. : 97312 90327

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೊ. ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ.
ನುರಿತ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್, ಡೆಲಿವರಿ ಬಾಯ್ಸ್, ಅಕೌಂಟ್ ಎಕ್ಸಿಕ್ಯೂಟಿವ್ ಆಫೀಸ್ ಬಾಯ್ಸ್ (ಕ್ಲೀನಿಂಗ್‌ಗಾಗಿ)
89045 80036/39/34
08192 463415

**ಕಮರ್ಷಿಯಲ್ ಕಾಂಪ್ಲೆಕ್ಸ್ ಬಾಡಿಗೆಗಿದೆ**
ಚೇತನ್ ಹೋಟೆಲ್ ರಸ್ತೆ ದಾವಣಗೆರೆಯಲ್ಲಿ ಲಿಫ್ಟ್ ಸೌಕರ್ಯ ಇರುವ ಗ್ರೌಂಡ್ ಫ್ಲೋರ್ 1450 ಅಡಿ, ಫಸ್ಟ್ ಫ್ಲೋರ್ 1750 ಅಡಿ, ಸೆಕಂಡ್ ಫ್ಲೋರ್ 1750 ಬಾಡಿಗೆಗೆ ಲಭ್ಯವಿದೆ.
ಸಂಪರ್ಕಿಸಿ.
94480 56468

**ತಕ್ಷಣ ಬೇಕಾಗಿದ್ದಾರೆ**
ಪೂಜಾ ಹಾರ್ಡ್‌ವೇರ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷರು, ವಿದ್ಯಾಭ್ಯಾಸ, ಪಿಯುಸಿ, ಡಿಗ್ರಿ ಆದವರು ಬೇಕಾಗಿದ್ದಾರೆ. ಅರುಣ ಟಾಕೀಸ್ ಹತ್ತಿರ, ಪಿ.ಬಿ. ರೋಡ್, ದಾವಣಗೆರೆ.
ಫೋ. : 94498 14968

**ಬೇಕಾಗಿದ್ದಾರೆ**
ಊಟ ಬಡಿಸುವವರು, ಕ್ಲೀನಿಂಗ್ ಮಾಡುವವರು. ರೊಟ್ಟಿ, ಹೋಳಿಗೆ ಮಾಡುವವರು. ಸಂಪರ್ಕಿಸಿ.
ಮನೆ ಅಡುಗೆ ಹಳ್ಳಿ ಊಟ
ವಿದ್ಯಾನಗರ
63635 43487

**ಬೇಕಾಗಿದ್ದಾರೆ**
ಸೇಲ್ಸ್ / ಮಾರ್ಕೆಟಿಂಗ್ - 4
ಡೆಲಿವರಿ ಬಾಯ್ಸ್ - 3
ಅನುಭವವುಳ್ಳವರಿಗೆ ಆದ್ಯತೆ
ಸಂಪರ್ಕಿಸಿ. ವಿಶ್ವಾಸ್ ಸೈಂಟಿಫಿಕ್ ಕಂ. ಹದಡಿ ರಸ್ತೆ, ದಾವಣಗೆರೆ.
99000 96349

**Wanted**
Boys required for sales executive job at Food Mart Supermarket.
Quli : PUC, Any degree
M 98864 63531

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**DVG-WORLD TOURS**
India & International Tour Packages available with Best offer
Ph. : 99006 66122

**WANTED**
Banking Sector tele caller (Female Only)
Qualification : Any Degree.
No. 2257/5 2nd Floor, MCC 'A' Block Beside Toagataveera Kalyana Mantapa
81237 63199
Interview time : 11AM

**ವಯೋವೃದ್ಧರ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧ ದಂಪತಿಗಳು ವಯೋವೃದ್ಧರುಗಳನ್ನು ನಮ್ಮಲ್ಲಿ ಇರಿಸಿಕೊಂಡು ಊಟ, ವಸತಿಯೊಂದಿಗೆ ನೋಡಿಕೊಳ್ಳಲಾಗುವುದು. ಸ್ಪೆಷಲ್ ರೂಂಗಳಿರುತ್ತವೆ.
89711 92936, 97410 64663

**ಬೇಕಾಗಿದ್ದಾರೆ**
ನೂತನ ACE TRACTOR SHOWROOM ಗಾಗಿ ITI ಆಗಿರುವ ಸೇಲ್ಸ್ ಮನ್‌ಗಳು ಬೇಕಾಗಿದ್ದಾರೆ.
U & T Enterprises
91085 12030, 82777 47785

**OFFICE SPACE FOR RENT**
Finance, Mini Bank, Co-op. Bank, ETC with wash room facility
N.R. Road, Davangere.
94483 69523

**ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಡೈಪರ್ ಚೇಂಜ್, ಸ್ನಾನ ಮಾಡಿಸುವುದು ಈ ಸೇವೆಗಳನ್ನು ನೀಡಿ ಊಟ ವಸತಿಯೊಂದಿಗೆ ನಮ್ಮಲ್ಲಿ ಇರಿಸಿಕೊಂಡು ನೋಡಿಕೊಳ್ಳಲಾಗುವುದು.
89711 92936, 97410 64663

**91.6 GOLD ANTIC**
& Special Temple Jewellery ಗೆ ಒಮ್ಮೆ ಭೇಟಿ ಕೊಡಿ.
JEWEL PALACE
Car Parking Available Chowkipet Cross, AM Galli, Davanagere.
89700 11711

# ಕಾರ್ಪೊರೇಟ್, ಖಾಸಗಿ, ಸರ್ವಾಧಿಕಾರಿ ನೀತಿಯಿಂದ ಬದುಕು ಹಾಳು: ಎಸ್.ಆರ್.ಹಿರೇಮಠ




ದಾವಣಗೆರೆ, ಜ. 8 – ಆರ್ಥಿಕತೆಯ ಕಾರ್ಪೊರೇಟೀಕರಣ, ಶಿಕ್ಷಣದ ಖಾಸಗೀ ಕರಣ ಹಾಗೂ ರಾಜಕೀಯ ಸರ್ವಾಧಿಕಾರಿ ನೀತಿಗಳ ಮೂಲಕ ರಾಜ್ಯ ಸರ್ಕಾರ ಜನರ ಬದುಕನ್ನು ಹಾಳುಗೆಡವುತ್ತಿದೆ. ಇಂತಹ ಸರ್ಕಾರಕ್ಕೆ ಅಧಿಕಾರದಲ್ಲಿರುವ ನೈತಿಕ ಹಕ್ಕಿಲ್ಲ ಎಂದು ಜನಾಂದೋಲನಗಳ ಮಹಾಮೈತ್ರಿಯ ಸಂಚಾಲಕ ಎಸ್. ಆರ್. ಹಿರೇಮಠ್ ಹೇಳಿದರು.

ಜನಾಂದೋಲನಗಳ ಮಹಾಮೈತ್ರಿ, ಸಿಟಿಜನ್ ಫಾರ್ ಡೆಮಾಕ್ರಸಿ ಹಾಗೂ ಜನತಂತ್ರ ಪ್ರಯೋಗ ಶಾಲೆಗಳ ಸಂಯು ಕ್ತಾಶ್ರಯದಲ್ಲಿ ಆಯೋಜಿಸಲಾಗಿ ರುವ 'ಆಜಾದಿ ಸೇ ಸ್ವರಾಜ್' ಅಭಿಯಾನದ ಅಂಗವಾಗಿ ಕುಸನೂರಿನಿಂದ ದಾವಣಗೆರೆಗೆ ಬಂದ ಸಾಮೂಹಿಕ ಭೂಮಿ ಸಂರಕ್ಷಣಾ ಜಾಥಾದ ನೇತೃತ್ವ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಮೂರು ಕರಾಳ ಕೃಷಿ ಕಾಯ್ದೆಗಳು ರದ್ದಾಗಬೇಕು. 2013ರ ಭೂಸ್ವಾಧೀನ ಕಾಯ್ದೆಗೆ ಬದ್ಧವಾಗಿರಬೇಕು, ಕಾರ್ಮಿಕ ವಿರೋಧಿ ಲೇಬರ್ ಕೋಡ್ ರದ್ದುಗೊಳಿಸಿ ಹಿಂದಿದ್ದ ಕಾರ್ಮಿಕ ಕಾಯ್ದೆಗಳನ್ನು ಮರು ಸ್ಥಾಪಿಸಬೇಕು ಎಂಬುದೂ ಸೇರಿದಂತೆ ಹನ್ನೊಂದು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸತ್ಯಾಗ್ರಹ ಯಾತ್ರೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಸರ್ಕಾರದ ಜನ ವಿರೋಧಿ ನೀತಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಕೂಡಲಸಂಗಮದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ವರೆಗೆ ಜನವರಿ 2ರಿಂದ 11ರವರೆಗೆ ಪ್ರಧಾನ ಜಾಥಾ ನಡೆಸಲಾಗುತ್ತಿದೆ ಎಂದವರು ಹೇಳಿದರು.

ಮಂಗಳೂರಿನಿಂದ ಬೆಂಗಳೂರಿನ ವರೆಗೆ ಭಾವೈಕ್ಯತಾ ಜಾಥಾ ಹಾಗೂ ಕೋಲಾರದಿಂದ ಬೆಂಗಳೂರಿಗೆ ಸಂವಿಧಾನ ರಕ್ಷಣೆ ಜಾಥಾ ನಡೆಸಲಾಗುತ್ತಿದೆ.

**ಭೂಮಿ ಸಂರಕ್ಷಣಾ ಜಾಥಾ**

ಭೂಮಿ ಸಂರಕ್ಷಣೆಗಾಗಿ ಹಾವೇರಿಯ ಕುಸನೂರಿನಿಂದ ದಾವಣ ಗೆರೆಗೆ ಜಾಥಾ ನಡೆಸಲಾಗಿದೆ ಎಂದವರು ತಿಳಿಸಿದರು. ಆ ಜಾಥಾಗಳು ಬೆಂಗಳೂರಿ ನಲ್ಲಿ ಸಮಾಗಮಗೊಂಡು ಜ.11ರ ಬುಧವಾರ ಬೆಳಿಗ್ಗೆ 1 0ರಿಂದ ಫ್ರೀಡಂ ಪಾರ್ಕ್‌ನಲ್ಲಿ ಸತ್ಯಾಗ್ರಹ ಸಮಾವೇಶ ನಡೆಸಲಾಗುವುದು ಎಂದು ಹಿರೇಮಠ ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಶಿವನಕೆರೆ ಬಸವಲಿಂಗಪ್ಪ, ಬಲ್ಲೂರು ರವಿಕುಮಾರ್, ಅನೀಸ್ ಪಾಷ, ಐರಣಿ ಚಂದ್ರು, ನರೇಗ ರಂಗನಾಥ, ಪ್ರೊ. ಬಸವರಾಜ, ನುಲೇನೂರು ಶಂಕರಣ್ಣ ಮತ್ತಿತರರು ಉಪಸ್ಥಿತರಿದ್ದರು.

## ಸರ್ಕಾರ 3 ಕರಾಳ ಶಾಸನ ಹಿಂಪಡೆಯಲಿ

ದಾವಣಗೆರೆ, ಜ. 8 – ದೆಹಲಿಯಲ್ಲಿ ರೈತರು ನಡೆಸಿದ ಸುದೀರ್ಘ ಹೋರಾಟ ದಿಂದಾಗಿ ಕೇಂದ್ರ ಸರ್ಕಾರ ತಾನು ಜಾರಿಗೆ ತಂದಿದ್ದ ಮೂರು ಕರಾಳ ಶಾಸನಗಳನ್ನು ವಾಪಸ್ ಪಡೆಯಿತು.

ಆದರೆ, ರಾಜ್ಯ ಸರ್ಕಾರ ಮಾತ್ರ ತನ್ನ ಮೂರು ಕರಾಳ ಶಾಸನಗಳನ್ನು ಇನ್ನೂ ವಾಪಸ್ ಪಡೆದಿಲ್ಲ ಎಂದು ಜನಾಂದೋಲನಗಳ ಮಹಾಮೈತ್ರಿ ಸಂಚಾಲಕ ಎಸ್.ಆರ್. ಹಿರೇಮಠ ಆಕ್ರೋಶ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2020ರಲ್ಲಿ ರಾಜ್ಯದಲ್ಲಿ ಜಾರಿಗೆ ತರಲಾದ ಎ.ಪಿ.ಎಂ.ಸಿ. ತಿದ್ದುಪಡಿ ಕಾಯ್ದೆ, ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ಹಾಗೂ ಜಾನುವಾರು ಹತ್ಯಾ ನಿಷೇಧ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ದರು. ಎ.ಪಿ.ಎಂ.ಸಿ. ತಿದ್ದುಪಡಿ ಕಾಯ್ದೆಯಿಂದ ಎ.ಪಿ.ಎಂ.ಸಿ.ಗಳು ಮುಚ್ಚಿ ಹೋಗುತ್ತವೆ. ಭೂ ಸುಧಾರಣಾ ತಿದ್ದುಪಡಿ ಕಾಯ್ದೆಯಿಂದ 'ಉಳುವವನಿಗೆ ಭೂಮಿ' ನೀತಿ ಬದಲಾಗಿ 'ಉಳ್ಳವರಿಗೆ ಭೂಮಿ' ಎಂಬಂತಾಗುತ್ತಿದೆ. ಜನ ವಿರೋಧಿ ಹಾಗೂ ಕಾರ್ಪೊರೇಟ್ ಪರವಾಗಿರುವ ಈ ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು ಎಂದವರು ಆಗ್ರಹಿಸಿದರು.

ಜನಪರವಾಗಿ ಕೆಲಸ ಮಾಡದ ಸರ್ಕಾರಗಳನ್ನು ಅಧಿಕಾರದಿಂದ ಕೆಳಗಿಳಿಸಬೇಕಿದೆ. ಒಂದು ವೇಳೆ ಮುಂದಿನ ಸರ್ಕಾರಗಳೂ ಜನಪರವಾಗಿರದೇ ಇದ್ದರೆ ಸತ್ಯಾಗ್ರಹ ನಡೆಸಲು ಮುಂದಾಗಬೇಕು. ಜನರ ಹೋರಾಟದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ ಎಂದು ಹಿರೇಮಠ ಹೇಳಿದರು.

ಕೃಷಿ ಉತ್ಪನ್ನಗಳ ಬೆಂಬಲ ಬೆಲೆಗೆ ಕಾಯ್ದೆಯ ರಕ್ಷಣೆ ನೀಡಬೇಕು. ಕನಿಷ್ಠ ಬೆಂಬಲ ಬೆಲೆಯಲ್ಲೇ ಉತ್ಪನ್ನಗಳ ಖರೀದಿಗಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದವರು ಒತ್ತಾಯಿಸಿದರು.

ಉದ್ಯೋಗ ಖಾತ್ರಿಯಡಿ ನೀಡಲಾಗುವ ಕೂಲಿ ಕೆಲಸದ ದಿನಗಳನ್ನು 200ಕ್ಕೆ ಹೆಚ್ಚಿಸಬೇಕು ಹಾಗೂ ಕೂಲಿಯನ್ನು 600 ರೂ.ಗಳಿಗೆ ಹೆಚ್ಚಿಸಬೇಕು. ಈ ಕುರಿತು ಚರ್ಚಿಸಲು ರೈತ ಪ್ರತಿನಿಧಿಗಳನ್ನು ಆಹ್ವಾನಿಸಬೇಕು ಎಂದು ಹಿರೇಮಠ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಶಿವನಕೆರೆ ಬಸವಲಿಂಗಪ್ಪ, ಬಲ್ಲೂರು ರವಿಕುಮಾರ್, ಅನೀಸ್ ಪಾಷ, ಐರಣಿ ಚಂದ್ರು, ನರೇಗ ರಂಗನಾಥ, ಪ್ರೊ. ಬಸವರಾಜ, ನುಲೇನೂರು ಶಂಕರಣ್ಣ ಮತ್ತಿತರರು ಉಪಸ್ಥಿತರಿದ್ದರು.

ಯಾತ್ರೆ ದಾವಣಗೆರೆಗೆ ಆಗಮಿಸಿದ ವೇಳೆ, ನಗರದ ಅಂಬೇಡ್ಕರ್ ವೃತ್ತದಿಂದ ಜಯದೇವ ವೃತ್ತದವರೆಗೆ ಮೆರವಣಿಗೆ ನಡೆಸಿ, ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

# ಆರೋಗ್ಯದ ಬಗ್ಗೆ ಯಾರೂ ಸಹ ನಿರ್ಲಕ್ಷ್ಯ ವಹಿಸಬೇಡಿ

**ಡಾ. ಸೌಮ್ಯ ಡಿ. ರಾವ್**



ದಾವಣಗೆರೆ, ಜ.8- ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ನಿರ್ಲಕ್ಷ್ಯ ವಹಿಸುವುದು ಸರಿಯಲ್ಲ. ಸಣ್ಣಪುಟ್ಟ ಸಮಸ್ಯೆ ಇದ್ದರೂ ಆಸ್ಪತ್ರೆಗೆ ಹೋಗಿ ಸೂಕ್ತ ಚಿಕಿತ್ಸೆ ಪಡೆದು ಆರೋಗ್ಯದಿಂದಿರಿ ಎಂದು ಎಮರ್ಜೆನ್ಸಿ ಫಿಸಿಷಿಯನ್, ಡಯಾಬಿಟೀಸ್ ಹಾಗೂ ಥೈರಾಯಿಡ್ ತಜ್ಞೆ ಡಾ. ಸೌಮ್ಯ ಡಿ. ರಾವ್ ಸಲಹೆ ನೀಡಿದರು.

ನ್ಯಾಷನಲ್ ಮೆಡಿಕೋಸ್ ಆರ್ಗನೈಸೇಷನ್ ಹಾಗೂ ಡಿಸಿಎಂ ಟೌನ್ ಶಿಪ್ ನಾಗರಿಕರ ಸಂಘದ ಆಶ್ರಯದಲ್ಲಿ ನಗರದ ಡಿಸಿಎಂ ಟೌನ್ ಶಿಪ್‌ನ ರಾಜನಹಳ್ಳಿ ಹನುಮಂತಪ್ಪ ಉದ್ಯಾನವ ನದಲ್ಲಿ ಮಹಾನಗರ ಪಾಲಿಕೆಯ ಮಾಜಿ ಮೇಯರ್ ಹಾಗೂ ಹಾಲಿ ಸದಸ್ಯರಾದ ಎಸ್. ಟಿ. ವೀರೇಶ್ ಅವರ ನೇತೃತ್ವದಲ್ಲಿ ಭಾನುವಾರ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಆಹಾರ ಪದ್ಧತಿ ತುಂಬಾನೇ ಮುಖ್ಯ. ಮನೆಯಲ್ಲಿ ಒಬ್ಬರಿಗೆ ಸಕ್ಕರೆ ಕಾಯಿಲೆ ಇರುವುದು ಗೊತ್ತಿರುತ್ತದೆ. ಬೇರೆಯವರು ಪರೀಕ್ಷೆ ಮಾಡಿಸಿಕೊಳ್ಳುವ ಬದಲು ಉದಾಸೀನತೆ ತೋರುವುದು ಒಳ್ಳೆಯದಲ್ಲ ಎಂದು ಹೇಳಿದರು.

ಪಾಲಿಕೆಯ ಮಾಜಿ ಮೇಯರ್ ಹಾಗೂ ಸದಸ್ಯ ಎಸ್. ಟಿ. ವೀರೇಶ್ ಮಾತನಾಡಿ, ಆರೋಗ್ಯದಲ್ಲಿ ಏರುಪೇರಾಗುವ ಮುನ್ನವೇ ವೈದ್ಯರ ಸೂಕ್ತ ಸಲಹೆ, ಚಿಕಿತ್ಸೆ ಪಡೆದುಕೊಂಡರೆ ಮುಂದೆ ಎದುರಾಗುವ ಆಪತ್ತನ್ನು ಮೊದಲೇ ಸರಿಪಡಿಸಿಕೊಳ್ಳಬಹುದು. ದೊಡ್ಡದಾಗುವ ಮುನ್ನವೇ ಸೂಕ್ತ ಚಿಕಿತ್ಸೆ ಪಡೆದರೆ ಕಾಯಿಲೆಯನ್ನು ಆರಂಭದಲ್ಲಿ ನಿಯಂತ್ರಣಕ್ಕೆ ತರಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸರ್ಕಾರವು ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಇದರ ಸದುಪಯೋಗ ಲಭ್ಯವಾಗಬೇಕು ಎಂಬ ಉದ್ದೇಶದಿಂದ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ನಡೆಸಲಾಗುತ್ತಿದೆ. ಜನರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಕ್ತದಾನ ಮಾಡುವ ಮೂಲಕ ಅತ್ಯುತ್ತಮ ಕಾರ್ಯ ನಡೆಯುತ್ತಿದೆ. ಜನರು ಆರೋಗ್ಯವಂತ ರಾಗಿರಬೇಕು. ಆರೋಗ್ಯಯುತ ಜೀವನ ನಡೆಸು ವಂತಾಗಬೇಕು. ಆಯುಷ್ಮಾನ್ ಕಾರ್ಡ್, ಆಯುಷ್ಮಾನ್ ಭಾರತ್ ಹೆಲ್ತ್ ಅಕೌಂಟ್ ಕಾರ್ಡ್ ಗಳನ್ನು ಸಹ ಮಾಡಿಕೊಡಲಾಗಿದೆ. ಇದರಿಂದ ಉಪಯೋಗ ಆಗುತ್ತದೆ ಎಂದು ಹೇಳಿದರು.

ತಜ್ಞ ವೈದ್ಯರಿಂದ ಉಚಿತ ಜನರಲ್ ಆರೋಗ್ಯ ಪರೀಕ್ಷೆ, ರಕ್ತದೊತ್ತಡ ತಪಾಸಣೆ, ಉಚಿತ ಬ್ಲಡ್ ಶುಗರ್ ಮತ್ತು ಕೊಲೆಸ್ಟ್ರಾಲ್ ಟೆಸ್ಟ್, ಉಚಿತ ನೇತ್ರ ತಪಾಸಣೆ, ಕಣ್ಣಿನ ಪೊರೆ ಸೇರಿದಂತೆ ಇತರೆ ತೊಂದರೆಗಳ ಬಗ್ಗೆಯೂ ಚಿಕಿತ್ಸೆ ನೀಡಲಾಯಿತು. ಕೋವಿಡ್ ಬೂಸ್ಟರ್ ಲಸಿಕೆ ನೀಡಲಾಯಿತು ಎಂದು ಅವರು ಮಾಹಿತಿ ನೀಡಿದರು.

ಗಿಡಕ್ಕೆ ನೀರು ಹಾಕುವ ಮೂಲಕ ಮಹಾನಗರ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ್ ಶಿಬಿರ ಉದ್ಘಾಟಿಸಿದರು. ಶಿಬಿರದಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಜನರು ಉಪಯೋಗ ಪಡೆದುಕೊಂಡರು. ಎಸ್ ಎಸ್ ಐ ಎಂ ಎಸ್ ನ ಸಹಾಯಕ ಪ್ರಾಧ್ಯಾಪಕ ಡಾ. ಮನು, ಎಸ್ ಎಸ್ ಐ ಎಂ ಎಸ್ ನ ಸಹಾಯಕ ಪ್ರಾಧ್ಯಾಪಕ ಡಾ. ಪ್ರದೀಪ್, ಹಿರಿಯ ವೈದ್ಯಾಧಿಕಾರಿಗಳಾದ ಡಾ. ವೆಂಕಟೇಶ್, ವೈದ್ಯಾಧಿಕಾರಿ ಡಾ. ಸಿ. ಎಸ್. ಕಾರ್ತಿಕ್ ಪಾಲ್ಗೊಂಡು ಆರೋಗ್ಯ ತಪಾಸಣೆ ನಡೆಸಿದರು.

## ಪವರ್ ಲಿಫ್ಟಿಂಗ್ : ವಿ.ರಕ್ಷಿತ್ ರಾಷ್ಟ್ರಮಟ್ಟಕ್ಕೆ



ದಾವಣಗೆರೆ, ಜ. 8 - ದಿನಾಂಕ 15 ರಿಂದ 20 ರವರೆಗೆ ಮಹಾರಾಷ್ಟ್ರದ ಔರಂಗಬಾದ್‌ನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ 2022-23ರ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ನಗರದ ಶ್ರೀ ಕನ್ನಿಕಾಪರಮೇಶ್ವರಿ ಕೋ ಆಪರೇಟೀವ್ ಬ್ಯಾಂಕಿನ ಉದ್ಯೋಗಿ ಹಾಗೂ ಶ್ರೀ ಬೀರೇಶ್ವರ ವ್ಯಾಯಾಮ ಶಾಲೆಯ ಕ್ರೀಡಾಪಟು ವಿ. ರಕ್ಷಿತ್ ಸ್ಪರ್ಧಿಸಲು ತೆರಳಲಿದ್ದಾರೆ. ಇವರು ರಾಷ್ಟ್ರೀಯ ಪವರ್‌ಲಿಫ್ಟರ್ ಮತ್ತು ಕೋಚರ್ ಆದ ಪಿ. ವಿಶ್ವನಾಥ್ ಪತ್ರರಾಗಿದ್ದಾರೆ.

ಇವರಿಗೆ ಶ್ರೀ ಕನ್ನಿಕಾಪರಮೇಶ್ವರಿ ಕೋ. ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಆರ್.ಜಿ ಶ್ರೀನಿವಾಸ ಮೂರ್ತಿ ಮತ್ತು ಆರ್.ಎಲ್ ಪ್ರಭಾಕರ್, ಶಶಿ ಸೋಪ್ ಸಂಸ್ಥೆಯ ಮಾಲೀಕರಾದ ಡಾ.ರವಿ ಇಳಂಗೋ, ಮಾಜಿ ಮೇಯರ್ ಬಿ.ಜೆ. ಅಜಯ್ ಕುಮಾರ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್, ನಗರಸಭಾ ಮಾಜಿ ಅಧ್ಯಕ್ಷರು ಹಾಗೂ ಎಲ್.ಬಿ.ಕೆ ಟ್ರಸ್ಟ್‌ನ ಅಧ್ಯಕ್ಷ ಬಿ . ವೀ ರ ಣ್ಣ , ಅಂತರರಾಷ್ಟ್ರೀಯ ಕ್ರೀಡಾಪಟುಗಳೂ ಆದ ಮಹಾನಗರ ಪಾಲಿಕೆ ಸದಸ್ಯ ಜೆ.ಎನ್ ಶ್ರೀನಿವಾಸ್, ಅಂತರ ರಾಷ್ಟ್ರೀಯ ಕ್ರೀಡಾಪಟು, ಪೋಲಿಸ್ ಅಧಿಕಾರಿ ಹೆಚ್.ದಾದಾಪೀರ್, ಪಾಲಿಕೆ ಸದಸ್ಯ ಬಿ.ಹೆಚ್. ವಿನಾಯಕ ಪೈಲ್ವಾನ್ ಹಾಗೂ ಹಿರಿಯ, ಕಿರಿಯ ಕ್ರೀಡಾ ಪಟುಗಳು ಇವರ ಆಯ್ಕೆಗೆ ಸಂತಸ ವ್ಯಕ್ತಪಡಿಸಿದ್ದಾರೆ.

## ಮಾ.ಸ.ಬ. ಕಾಲೇಜಿಗೆ ಇಂದು ನ್ಯಾಕ್ ಸಮಿತಿ ಭೇಟಿ

ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಸಂಸ್ಥೆ (ನ್ಯಾಕ್)ಯ ತಂಡ ನಗರದ ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಕಾಲೇಜಿಗೆ ಇಂದು ಭೇಟಿ ನೀಡಿ ಮೌಲ್ಯಮಾಪನ ಮಾಡಲಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಜಿ.ಸಿ. ನೀಲಾಂಬಿಕೆ ತಿಳಿಸಿದ್ದಾರೆ.

ತಮಿಳುನಾಡಿನ ಅಲಗಪ್ಪ ವಿವಿಯ ವಿಶ್ರಾಂತ ಕುಲಪತಿಗಳಾದ ಪ್ರೊ. ಎನ್. ರಾಜೇಂದ್ರನ್, ಗುರುನಾನಕ್ ದೇವ್ ವಿವಿ ವಿಶ್ರಾಂತ ಪ್ರಾಧ್ಯಾಪಕ ಪಂಜಾಬಿನ ಪ್ರೊ. ಪರಮಜೀತ್ ಸಿಂಗ್, ಗುಜರಾತಿನ ಎಂ.ಪಿ. ಶಾ ಕಾಮರ್ಸ್ ಕಾಲೇಜಿನ ಪ್ರಾಂಶುಪಾಲರಾದ ಡಾ. ದಿಲೀಪ್ ಕುಮಾರ್ ವಜನಿ ಅವರುಗಳು ತಂಡದಲ್ಲಿದ್ದಾರೆ.

# ಪರಿಸರ ಸ್ನೇಹಿ ಜೀವನ ಶೈಲಿ ರೂಢಿಸಿಕೊಳ್ಳುವುದು ಅವಶ್ಯ



**ತರಳಬಾಳು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಡಾ.ಹೆಚ್.ವಿ.ವಾಮದೇವಪ್ಪ**

ದಾವಣಗೆರೆ, ಜ. 8- ಪರಿಸರ ಸ್ನೇಹಿ ಜೀವನ ಶೈಲಿ ರೂಢಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಪ್ರಸ್ತುತ ದಿನಮಾನಗಳಲ್ಲಿ ಪರಿಸರಕ್ಕೆ ಹಾನಿಯಾಗುವ ಆಚರಣೆ ಗಳನ್ನೇ ಹೆಚ್ಚಾಗಿ ಪಾಲಿಸುವುದರಿಂದ ಜೀವ ಪರಿಸರದ ಕೊಂಡಿ ಕಳಚಿದಂತಾಗಿದೆ ಎಂದು ತರಳಬಾಳು ವಿದ್ಯಾ ಸಂಸ್ಥೆಯ ಆಡಳಿತಾಧಿಕಾರಿ, ಕರಾವಿಪ ಉಪಾಧ್ಯಕ್ಷ ಡಾ. ಹೆಚ್.ವಿ.ವಾಮದೇವಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಸಭಾಂಗ ಣದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ದಾವಣಗೆರೆ ಜಿಲ್ಲಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದ ಸಮಾರೋಪ ಸಮಾರಂ ಭದಲ್ಲಿ ಅವರು ಸಮಾರೋಪ ನುಡಿಗಳನ್ನಾಡಿದರು.

ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವ, ವೈಜ್ಞಾನಿಕ ಆಲೋಚನೆಗಳನ್ನು ರೂಢಿಸಿಕೊಳ್ಳಬೇಕು. ಸಂಶೋಧನೆ, ಅನ್ವೇಷಣೆಯತ್ತ ಹೆಚ್ಚು ಒಲವು ತೋರಬೇಕಾಗಿದೆ. ಪ್ರತಿ ಮಗುವಿನಲ್ಲೂ ಸಂಶೋಧಕ ಇರುತ್ತಾನೆ ಎಂದರು.

ಹೊಸ ಶಿಕ್ಷಣ ನೀತಿಯಲ್ಲಿ ವಿಮರ್ಶಾತ್ಮಕ ಚಿಂತನೆ ಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಕೌಶಲ್ಯಗಳನ್ನು ಬೆಳೆ ಸುವ ಅಗತ್ಯ ಕೂಡ ಇದೆ. ಮಕ್ಕಳು ಮೂಢನಂಬಿಕೆಗಳ ಆಚರಣೆ ತಪ್ಪು ಎಂದು ಪೋಷಕರಿಗೆ ಮನನ ಮಾಡಿ ಕೊಡಬೇಕು. ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳು ವುದು ಕೂಡ ಅಷ್ಟೇ ಮುಖ್ಯ ಎಂದು ಹೇಳಿದರು.

ಶೈಕ್ಷಣಿಕ ಸವಾಲುಗಳನ್ನು ಎದುರಿಸಲು ಮತ್ತು ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಬಹುಭಾಷಾ ಸಾಮರ್ಥ್ಯವನ್ನು ಅಳವಡಿಸಿಕೊಳ್ಳುವ ಅಗತ್ಯತೆ ಇದೆ. ನಮ್ಮ ದೇಶದಲ್ಲಿ ಇರುವಷ್ಟು ಭಾಷೆಗಳನ್ನು ವಿಶ್ವದ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ ಎಂದರು.

ಕಂಪ್ಯೂಟರ್ ಯುಗವನ್ನು ಹಿಂದಿಕ್ಕಿ ಇದೀಗ ಜ್ಞಾನಯುಗದಲ್ಲಿದ್ದೇವೆ. ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಮಕ್ಕಳು ಜ್ಞಾನವನ್ನು ಬೆಳೆಸಿಕೊಳ್ಳುವ ಅಗತ್ಯವಿದೆ. ಪ್ರಶ್ನೆಗಳಿಗೆ ಉತ್ತರವನ್ನು ಸಹ ಕಂಡುಕೊಳ್ಳಬೇಕಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ರಾಜ್ಯ ಸಮಿತಿ ಖಜಾಂಚಿ ಹೆಚ್.ಎಸ್.ಟಿ. ಸ್ವಾಮಿ ಮಾತನಾಡಿ, ಕಳೆದ 30 ವರ್ಷಗಳಿಂದ ವಿಜ್ಞಾನ ಪರಿಷತ್ತು ರಾಜ್ಯದ ಉದ್ದಗಲಕ್ಕೂ ವೈಜ್ಞಾನಿಕ ಚಿಂತನೆಗಳು, ವೈಜ್ಞಾನಿಕ ಮನೋಭಾವಗಳನ್ನು ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದು, ಪ್ರಮುಖವಾಗಿ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶಗಳನ್ನು ಆಯೋಜನೆ ಮಾಡುತ್ತಾ ಬಂದಿದೆ ಎಂದರು.

ಮಕ್ಕಳಲ್ಲಿ ವಿಜ್ಞಾನದ ಆಸಕ್ತಿ ಮೂಡಿಸುವ ಮತ್ತು ಕುತೂಹಲವನ್ನು ಕೆರಳಿಸುವ ಕೆಲಸವನ್ನು ಪರಿಷತ್ ಮಾಡುತ್ತಿದೆ. ರಾಜ್ಯದ 30 ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶಗಳನ್ನು ನಡೆಸುತ್ತಿದ್ದು, ಇದೇ ತಿಂಗಳು 16, 17 ಮತ್ತು 18 ಮೂರು ದಿನಗಳ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ ಗುಲ್ಬರ್ಗಾದಲ್ಲಿ ನಡೆಯಲಿದ್ದು, ದಾವಣಗೆರೆ ಜಿಲ್ಲೆಯ ಮಕ್ಕಳು ಉತ್ತಮ ಪ್ರದರ್ಶನ ತೋರುವ ಮೂಲಕ ಗುಜರಾತ್ ನ ಅಹಮದಾಬಾದ್ ನಲ್ಲಿ ನಡೆಯುವ ರಾಷ್ಟ್ರಮಟ್ಟದ ಸಮಾವೇಶಕ್ಕೂ ಆಯ್ಕೆಯಾಗಿ ಜಿಲ್ಲೆಗೆ ಕೀರ್ತಿ ತರಲೆಂದು ಆಶಿಸಿದರು.

ಏಜು ಏಶಿಯಾ ಎಂ.ಎನ್.ಎಸ್ ಕಾನ್ವೆಂಟ್ ಶಾಲೆಯ ಪ್ರಾಂಶುಪಾಲರಾದ ಎನ್.ಎಸ್. ವಾಣಿ, ರಾಘವೇಂದ್ರ ಶಾಲೆಯ ಪ್ರಾಚಾರ್ಯ ಡಾ. ಅನಿಲ್ ಹಾಗೂ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಧಾನಾಚಾರ್ಯರಾದ ಪಿ.ಆರ್. ಮಂಜುನಾಥ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಲ್‌ಎಂಕೆ ಸೆರಾಮಿಕ್ಸ್ ಅಂಡ್ ಟೈಲ್ಸ್ ಎಂಪೋರಿಯಂನ ಮಾಲೀಕರಾದ ವಾಗೀಶಯ್ಯ, ಕರ್ನಾಟಕ ವಿಜ್ಞಾನ ಪರಿಷತ್ ಜಿಲ್ಲಾ ಖಜಾಂಚಿ ಅಂಗಡಿ ಸಂಗಮೇಶ್ವರ್, ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಾರ್ಯದರ್ಶಿ ಹೆಚ್. ಜಯ್ಯಣ್ಣ, ಪುಷ್ಪಕುಮಾರ್, ಕರಾವಿಪ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ, ಜಿಲ್ಲಾ ಸಂಯೋಜಕ ಕೆ. ಸಿದ್ದೇಶ್ ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸೇಂಟ್ ಜಾನ್ಸ್ ಶಾಲೆಯ ಜಿ.ಸಿ. ಯಶಸ್ವಿ, ಎಂ. ಕೀರ್ತನ ಅವರುಗಳಿಗೆ ಬಾಲವಿಜ್ಞಾನಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ನಗರ ಉಪ ವಿಭಾಗ-2, ಘಟಕ-4ರ ವ್ಯಾಪ್ತಿ ಯಲ್ಲಿ ಸಾರ್ವಜನಿಕರಿಗೆ ಕುಡಿ ಯುವ ನೀರು ಒದಗಿಸುವ ಉದ್ದೇ ಶದಿಂದ ಕೊಳವೆ ಬಾವಿ ಕೊರೆದು ಮೋಟಾರನ್ನು ಲಿಫ್ಟ್ ಮಾಡುವ ಸಮಯದಲ್ಲಿ ಸುರಕ್ಷತೆ ಹಿತದೃಷ್ಟಿಯಿಂದ ಮಾರ್ಗ ಮುಕ್ತತೆ ನೀಡಬೇ ಕಾಗಿರುವುದರಿಂದ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗ ಲಿದೆ. ದಾವಣಗೆರೆ ನಗರ ವ್ಯಾಪ್ತಿಯ ಚಲವಾದಿ ಕೇರಿ, ಎಮ್.ಬಿ ಕೇರಿ, ಹೊಂಡದ ಸರ್ಕಲ್, ಜಾಲಿನಗರ, ಶಿವಾಜಿ ನಗರ, ತ್ಯಾಪೇರಗಲ್ಲಿ ದೇವಸ್ಥಾನ ಸುತ್ತ-ಮುತ್ತ, ಕಾಡಪ್ಪನ ಕಣ ಹಾಗೂ ಸುತ್ತ-ಮುತ್ತ, ವಾರ್ಡ್ ಸಂಖ್ಯೆ-18 ರ ಮಟನ್ ಮಾರ್ಕೆಟ್ ಹತ್ತಿರ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಯಾಗಲಿದೆ.

## ವಿದ್ಯುತ್ ಅವಘಡ : ಹೊರಗುತ್ತಿಗೆ ಕಾರ್ಮಿಕ ಸಾವು

ಹರಪನಹಳ್ಳಿ, ಜ.8- ಪಟ್ಟಣದ ಟೀಚರ್ಸ್ ಕಾಲೋನಿಯ ಹತ್ತಿರ ಇರುವ ಪೆಟ್ರೋಲ್ ಬಂಕ್ ಹತ್ತಿರವಿರುವ ಖಾಲಿ ನಿವೇಶನಗಳ ಬಳಿ ವಿದ್ಯುತ್ ಕಂಬದಲ್ಲಿ ಕಾರ್ಯನಿರ್ವಹಿಸುತ್ತಿ ರುವಾಗ ಅವಘಡ ಉಂಟಾಗಿ ಕಾರ್ಮಿಕ ಜಿ. ಪರಶುರಾಮಪ್ಪ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಭಾನುವಾರ ಸಂಜೆ ನಡೆದಿದೆ.

ತಾಲ್ಲೂಕಿನ ಕುಮಾರನಹಳ್ಳಿ ಗ್ರಾಮದ ಜಿ. ಪರಶುರಾಮಪ್ಪ ತಂದೆ ಕೆಂಚಪ್ಪ (38) ಮೃತ ದುರ್ದೈವಿಯಾಗಿರುತ್ತಾರೆ. ಈತನಿಗೆ ಪತ್ನಿ, ಮೂರು ಜನ ಮಕ್ಕಳು ಇದ್ದಾರೆ.

ಮೃತ ಕೆಂಚಪ್ಪ ಕಳೆದ 12 ವರ್ಷಗಳಿಂದ ಕೆಇಬಿ ಯಲ್ಲಿ ಹೊರಗುತ್ತಿಗೆ ಉದ್ಯೋಗಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಇಂದು ಸಹ ವಿದ್ಯುತ್ ಕಂಬದಲ್ಲಿ ಕೆಲಸ ವನ್ನು ನಿರ್ವಹಿಸುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಈ ಘಟನೆ ಆಕಸ್ಮಾತ್ತಾಗಿ ನಡೆದಿದೆ ಎಂದು ಹೇಳಲಾಗುತ್ತದೆ. ಈ ಕುರಿತು ಹರಪನಹಳ್ಳಿ ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ.

# ಕ್ರಿಯಾಶೀಲತೆಗೆ ವಾಲಿಬಾಲ್ ಕ್ರೀಡೆ ಸಹಕಾರಿ



**ಡಿವೈಎಸ್ಪಿ ನಾಗೇಶ್ ಐತಾಳ್**

ದಾವಣಗೆರೆ, ಜ. 8- ಕ್ರೀಡೆ ಗಳು ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಸಹಕಾರಿಯಾಗಲಿವೆ. ವಾಲಿಬಾಲ್, ಬಾಸ್ಕೆಟ್ ಬಾಲ್ ಮುಂತಾದ ಕ್ರೀಡೆಗಳು ಕ್ರಿಯಾಶೀಲ ರನ್ನಾಗಿಸಿ, ಉತ್ಸಾಹದಿಂದ ಇರು ವಂತೆ ಮಾಡುತ್ತವೆ ಎಂದು ಆಂತರಿಕ ಭದ್ರತಾ ಘಟಕದ ಡಿವೈಎಸ್ಪಿ ನಾಗೇಶ್ ಐತಾಳ್ ಹೇಳಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ವಾಲಿಬಾಲ್ ಅಸೋಸಿಯೇಷನ್ ವತಿ ಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ವಾಲಿ ಬಾಲ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾ ಡಿದರು.

ಯಾವುದೇ ಕ್ರೀಡೆಗಳಿರಲಿ ಕ್ರೀಡಾ ಮನೋ ಭಾವನೆಯಿಂದ ಸ್ವೀಕರಿಸಬೇಕು. ಅತ್ಯಂತ ಉತ್ಸಾಹ ದಿಂದ ಪಾಲ್ಗೊಳ್ಳಬೇಕಾದ ಅಗತ್ಯ ಇದೆ. ಕ್ರೀಡಾಪಟು ಗಳು ಕ್ರೀಡಾ ನಿಯಮ, ತೀರ್ಪುಗಾರರ ತೀರ್ಪನ್ನು ಪಾಲಿಸುವ ಜೊತೆಗೆ ಉತ್ತಮ ನಾಗರಿಕರಾಗಿ ಬಾಳಬೇಕಾಗಿದೆ ಎಂದು ಹಿತ ನುಡಿದರು.

ಡಿಸಿಆರ್‌ಬಿ ಡಿವೈಎಸ್ಪಿ ಬಿ.ಎಸ್. ಬಸವರಾಜ್ ಮಾತನಾಡಿ, ಮನುಷ್ಯನ ಶಿಸ್ತುಬದ್ಧ, ಕ್ರಿಯಾಶೀಲ ಜೀವನ ನಡೆಸುವಲ್ಲಿ ಕ್ರೀಡಾ ಚಟುವಟಿಕೆಗಳು ಪ್ರಮುಖ ಪಾತ್ರ ವಹಿಸಲಿವೆ ಎಂದರು.

ಕ್ರೀಡಾಪಟುಗಳು ಆಯೋಜಕರ ನಿಬಂಧನೆ ಗಳು ಮತ್ತು ಕ್ರೀಡಾ ನಿಯಮಗ ಳನ್ನು ಚಾಚೂ ತಪ್ಪದೇ ಪಾಲಿಸ ಬೇಕು. ಉಲ್ಲಂಘನೆ ಮಾಡಿದ ತಂಡಗಳಿಗೆ ಕನಿಷ್ಠ ಎರಡು ವರ್ಷ ಆಟವಾಡದಂತೆ ನಿಷೇಧಿಸಿದರೆ ತಕ್ಕ ಪಾಠ ಕಲಿಯುತ್ತಾರೆ ಎಂದು ಹೇಳಿದರು. ಆಯೋಜಕರೂ ಸಹ ಯಾವುದೇ ಒತ್ತಡಗಳಿಗೆ ಮಣಿ ಯದೇ ನಿಷ್ಪಕ್ಷಪಾತವಾಗಿ ತೀರ್ಪು ಕೊಡಿಸಬೇಕು. ಉತ್ತಮ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡಬೇಕೆಂಬ ಸಲಹೆ ನೀಡಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ನಟರಾಜ್, ಗುರುರಾಜ್, ಸಂದೀಪ್, ಸುಮಂತ್, ರಾಕೇಶ್, ಕೆ.ಸಿ. ಗಂಗಾಧರ್, ಹರೀಶ್, ಪ್ರದೀಪ್, ಬಿ.ಎ. ರಾಜಶೇಖರ್ ಉಪಸ್ಥಿತರಿದ್ದರು.


## ದೈವಜ್ಞ ಸಮಾಜ ಸಂಘ (ರಿ.), ರೇಣುಕಾ ಬಡಾವಣೆ, ದಾವಣಗೆರೆ.

### ಚುನಾವಣಾ ವೇಳಾಪಟ್ಟಿ

ದೈವಜ್ಞ ಸಮಾಜ ಸಂಘ, ರೇಣುಕಾ ಬಡಾವಣೆ, ದಾವಣಗೆರೆ ಇದರ ನಿರ್ದೇಶಕರ ಸಮಿತಿಯನ್ನು ಚುನಾವಣೆ ದಿನಾಂಕದಿಂದ ಮುಂದಿನ 03 (ಮೂರು) ವರ್ಷಗಳ ಅವಧಿಗೆ ನಿರ್ದೇಶಕರನ್ನು ಆಯ್ಕೆ ಮಾಡಲು ದಿನಾಂಕ:29-01-2023 ರ ಭಾನುವಾರದಂದು ನಡೆಯಲಿರುವ ಆಡಳಿತ ಮಂಡಳಿ ಸದಸ್ಯರ ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಗಿನಂತೆ ಪ್ರಕಟಿಸಲಾಗಿದೆ.

**ಚುನಾಯಿಸಬೇಕಾದ ಆಡಳಿತ ಮಂಡಳಿಯ ನಿರ್ದೇಶಕರ ಸಂಖ್ಯೆ : 15 (ಹದಿನೈದು)**

**ಚುನಾವಣಾ ಪ್ರಕ್ರಿಯೆಯ ದಿನಾಂಕವಾರು ವಿವರ**

| ಕ್ರ.ಸಂ. | ವಿವರ | ಕ್ರಮಗಳು |
|---|---|---|
| 1 | ಸದಸ್ಯರು ಉಮೇದುವಾರಿಕೆ ಅರ್ಜಿ ಸಲ್ಲಿಸಲು ಪ್ರಾರಂಭ ಮತ್ತು ಕೊನೆ ದಿನಾಂಕ | **ದಿನಾಂಕ:13-01-2023 ರಿಂದ 21-01-2023 ರ ವರೆಗೆ** ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ರವರೆಗೆ ಸಂಸ್ಥೆಯ ಚುನಾವಣಾಧಿಕಾರಿಗಳಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ ಸಲ್ಲಿಸುವುದು. |
| 2 | ಉಮೇದುವಾರಿಕೆ ಅರ್ಜಿ ಮತ್ತು ನಾಮಪತ್ರ ಅರ್ಜಿಗಳನ್ನು ಪರಿಶೀಲನೆ ಮಾಡುವ ದಿನಾಂಕ ಮತ್ತು ವೇಳೆ | **ದಿನಾಂಕ:22-01-2023 ರ** ಬೆಳಿಗ್ಗೆ 11.00 ಗಂಟೆಯಿಂದ ಸಂಸ್ಥೆಯ ಕಛೇರಿಯಲ್ಲಿ ಚುನಾವಣಾಧಿಕಾರಿಗಳಿಂದ, ನಂತರದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ |
| 3 | ಉಮೇದುವಾರಿಕೆ ಅರ್ಜಿ ಮತ್ತು ನಾಮಪತ್ರ ಅರ್ಜಿಗಳನ್ನು ವಾಪಾಸ್ ಪಡೆಯುವ ದಿನಾಂಕ | **ದಿನಾಂಕ:23-01-2023ರ** ಮಧ್ಯಾಹ್ನ 3.00 ಗಂಟೆಯೊಳಗಾಗಿ ಚುನಾವಣಾಧಿಕಾರಿಗಳಿಗೆ ಅಥವಾ ಅವರಿಂದ ಅಧಿಕಾರ ಪಡೆದವರ ಕೈಯಲ್ಲಿ ಲಿಖಿತ ಮೂಲಕ ಖುದ್ದಾಗಿ ಸಲ್ಲಿಸುವುದು. ನಂತರ ಅಂತಿಮವಾಗಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಹೆಸರು ಪ್ರಕಟಣೆ |
| 4 | ಸ್ಪರ್ಧೆಗೆ ಅರ್ಹರಾದ ಉಮೇದುವಾರರ ಅಂತಿಮ ಪಟ್ಟಿಯನ್ನು ಪ್ರಕಟಿಸುವುದು ಹಾಗೂ ನಂತರ ಚುನಾವಣಾ ಚಿಹ್ನೆಗಳನ್ನು ನೀಡುವ ದಿನಾಂಕ | **ದಿನಾಂಕ:24-01-2023ರಂದು** ಮಧ್ಯಾಹ್ನ 4.00 ಗಂಟೆಯ ನಂತರ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಚುನಾವಣಾ ಚಿಹ್ನೆಯೊಂದಿಗೆ ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಲಾಗುವುದು. |
| 5 | ಮತದಾನ ನಡೆಯುವ ದಿನಾಂಕ, ಸ್ಥಳ ಮತ್ತು ವೇಳೆ | **ದಿನಾಂಕ:29-01-2023ನೇ ಭಾನುವಾರದಂದು** ಸಂಸ್ಥೆಯ **ದೈವಜ್ಞ ಕಲ್ಯಾಣ ಮಂಟಪ** ಆವರಣದಲ್ಲಿ **ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 4.00 ಗಂಟೆಯವರೆಗೆ** ಚುನಾವಣಾಧಿಕಾರಿಗಳು ಮತ್ತು ನಿಯೋಜಿಸಿದ ಚುನಾವಣಾ ಸಿಬ್ಬಂದಿ ವರ್ಗದವರ ಸಮಕ್ಷಮ |
| 6 | ಮತಗಳ ಎಣಿಕೆ | **ದಿನಾಂಕ:29-01-2023ನೇ ಭಾನುವಾರದಂದು** ಮತದಾನ ಮುಗಿದ ನಂತರ |
| 7 | ಚುನಾವಣಾ ಫಲಿತಾಂಶ ಪ್ರಕಟಣೆ | **ದಿನಾಂಕ:29-01-2023ನೇ ಭಾನುವಾರದಂದು** ಮತಗಳ ಎಣಿಕೆ ಮುಗಿದ ನಂತರ ಚುನಾವಣಾಧಿಕಾರಿಗಳಿಂದ ಮತ್ತು ಫಲಿತಾಂಶ ಪಟ್ಟಿಯನ್ನು ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸುವುದು. |

**ಸೂಚನೆ :** ಆಜೀವ ಸದಸ್ಯರು ಮತದಾನ ಮಾಡಲು ಗುರುತಿನ ಚೀಟಿ (ಐಡಿ ಕಾರ್ಡ್) ಕಡ್ಡಾಯವಿರುವುದರಿಂದ ದಯವಿಟ್ಟು ಎಲ್ಲರೂ ಆಫೀಸಿಗೆ ಬಂದು ಗುರುತಿನ ಚೀಟಿ ತೆಗೆದುಕೊಂಡು ಹೋಗಬೇಕಾಗಿ ವಿನಂತಿ ಹಾಗೂ ಹೊಸದಾಗಿ ಸದಸ್ಯರಾದವರು ಬಿಲ್ ತರಬೇಕಾಗಿ ವಿನಂತಿ.

ಸಹಿ/- **ಹೆಚ್. ಎಸ್. ಸತೀಶ್ ಕುಮಾರ್**
ಚುನಾವಣಾಧಿಕಾರಿ, ದೈವಜ್ಞ ಸಮಾಜ ಸಂಘ ರೇಣುಕಾ ಬಡಾವಣೆ ದಾವಣಗೆರೆ .
ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು ದಾವಣಗೆರೆ ಉಪವಿಭಾಗ ದಾವಣಗೆರೆ.

# ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಪ್ರೋತ್ಸಾಹಿಸಿ

## ಸೋಮೇಶ್ವರೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಿಲ್ಲಾಧಿಕಾರಿ



ದಾವಣಗೆರೆ, ಜ. 7- ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಪ್ರೋತ್ಸಾಹ, ಸೂಕ್ತ ಮಾರ್ಗದರ್ಶನ ನೀಡಿ ಅವರನ್ನು ಬೆಳೆಸುವುದರ ಮೂಲಕ ಸಮಾಜದ ಆಸ್ತಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು ಹಾಗೂ ಪೋಷಕರು ಕೆಲಸ ಮಾಡಬೇಕು ಎಂದು ದಾವಣಗೆರೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹೇಳಿದರು.

ಅವರು ದಾವಣಗೆರೆ ತಾಲ್ಲೂಕು ಗೋಣಿವಾಡದ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯದ ಶಾಲಾ ವಾರ್ಷಿಕೋತ್ಸವ "ಸೋಮೇಶ್ವರೋತ್ಸವ-2023" ಸಮಾರಂಭ ಉದ್ಘಾಟಿಸಿ ಮಾತನಾಡುತ್ತಿದ್ದರು.

ಇಂದಿನ ದಿನಮಾನಗಳಲ್ಲಿ ಬಹುತೇಕ ಪೋಷಕರು ತಮ್ಮ ಮಗು ಇಂಜಿನಿಯರ್ ಆಗಲಿ, ಹೆಚ್ಚು ಹಣ ಗಳಿಸಲಿ ಎಂಬ ಅಭಿಲಾಷೆಯನ್ನು ಹೊಂದಿರುತ್ತಾರೆ. ಆದರೆ ಮಗುವಿನ ಅಭಿರುಚಿ, ಸಾಮರ್ಥ್ಯದ ಬಗ್ಗೆ ಚಿಂತಿಸುವುದಿಲ್ಲ. ಪೂರ್ವ ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ಶಿಕ್ಷಕರು ಮಾತ್ರ ಮಗುವಿನಲ್ಲಿರುವ ಸುಪ್ತ ಪ್ರತಿಭೆಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾರೆ. ಆದ್ದರಿಂದ ಶಿಕ್ಷಕರು ಮತ್ತು ಪೋಷಕರು ಪರಸ್ಪರ ಸಮಾಲೋಚನೆ ಮಾಡಿ ಮಗುವಿನ ಅಭಿರುಚಿಗೆ ತಕ್ಕನಾಗಿ ಬೆಳೆಸಿ ದೇಶದ, ವಿಶ್ವದ ಆಸ್ತಿಯನ್ನಾಗಿ ಮಾಡಬೇಕು. ಈ ನಿಟ್ಟಿನಲ್ಲಿ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯವು ಮಕ್ಕಳಿಗೆ ಶಿಕ್ಷಣದ ಜೊತೆಗೆ ಅವರಲ್ಲಿರುವ ಪ್ರತಿಭೆಗೆ ಪೂರಕವಾಗಿ ಶಿಕ್ಷಣ ನೀಡುವಂತಹ ಕೆಲಸ ಮಾಡುತ್ತಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಶ್ಲಾಘಿಸಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಬೆಳಗಾವಿ ಜಿಲ್ಲೆ ಹುಕ್ಕೇರಿ ಹಿರೇಮಠದ ಶ್ರೀ ಷ.ಬ್ರ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ವಿದ್ಯಾರ್ಥಿಗಳು ವಿದ್ಯೆಯ ಜೊತೆಗೆ ವಿನಯವಂತಿಕೆ, ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬೆಳೆಯಬೇಕು. ವಚನಗಳನ್ನು ಹೇಳುವುದು, ಅವುಗಳ ಅರ್ಥವನ್ನು ಉಪದೇಶಿಸುವುದಕ್ಕಿಂತ, ಅವುಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ಜೀವನ ಸುಂದರವಾಗುತ್ತದೆ ಹಾಗೂ ಸ್ವಸ್ಥ ಸಮಾಜ ನಿರ್ಮಾಣವಾಗುತ್ತದೆ. ಎಷ್ಟೇ ಉನ್ನತ ಶಿಕ್ಷಣ ಪಡೆದರೂ ಕನ್ನಡತನ, ಸಾತ್ವಿಕತೆಯನ್ನು ಬಿಡಬೇಡಿ ಎಂದು ಮಹಾಸ್ವಾಮಿಗಳು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ 2021-22 ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡ 98.72 ಅಂಕ ಪಡೆದು ಸಾಧನೆಗೈದ ವಿದ್ಯಾರ್ಥಿನಿ ಜಿ.ಬಿ.ಜೀವಿತಾ ಅವರಿಗೆ ರೂ.25000 ಬಹುಮಾನದ ಜೊತೆಗೆ 'ಸೋಮೇಶ್ವರ ಸಾಧನ ಸಿರಿ' ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಹಾಗೆಯೇ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನೂ ಗೌರವಿಸಿ, ಅಭಿನಂದಿಸಲಾಯಿತು.

ಮೈಸೂರಿನ ಖ್ಯಾತ ವಾಗ್ಮಿಗಳಾದ ಪ್ರೊ. ಎಂ.ಕೃಷ್ಣೇ ಗೌಡ್ರು ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರ ಪಾತ್ರದ ಕುರಿತು ಉಪನ್ಯಾಸ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಸೋಮೇಶ್ವರ ವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಹೆಚ್.ಆರ್. ಅಶೋಕ ರೆಡ್ಡಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರಕಾರದ ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಎ. ಹೆಚ್. ಶಿವಯೋಗಿ ಸ್ವಾಮಿ, ದಾವಣಗೆರೆ ಮಹಾನಗರ ಪಾಲಿಕೆಯ ಮಾಜಿ ಮೇಯರ್ ಬಿ.ಜಿ. ಅಜಯಕುಮಾರ್, ದಾವಣಗೆರೆ-ಹರಿಹರ ಅರ್ಬನ್ ಕೊ-ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಕಂಚಿಕೇರಿ ಮಹೇಶ್ ಉಪಸ್ಥಿತರಿದ್ದರು. ವಿದ್ಯಾಲಯದ ಸಂಸ್ಥಾಪಕ ಕೆ.ಎಂ. ಸುರೇಶ್, ಪ್ರಾಚಾರ್ಯೆ ವೀಣಾ ಸುರೇಶ್ ವೇದಿಕೆಯಲ್ಲಿದ್ದರು. 3 ನೇ ತರಗತಿಯ ವಿದ್ಯಾರ್ಥಿನಿ ಮಂಜೂಷಾ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವೇದಿಕೆ ಕಾರ್ಯಕ್ರಮದ ತರುವಾಯ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸಮಾರಂಭದಲ್ಲಿ ಕೆಎಸ್‌ಎಸ್ ಕಾಲೇಜಿನ ಹೆಚ್.ಕೆ. ಬಸವರಾಜ್, ಸರ್. ಎಮ್‌ವಿ ಕಾಲೇಜಿನ ಶ್ರೀಧರ್, ಮಹಾನಗರ ಪಾಲಿಕೆ ಸದಸ್ಯ ಕೆ.ಎಂ.ವೀರೇಶ್, ದಾವಣಗೆರೆಯ ಶ್ರೀ ಸೋಮೇಶ್ವರ ವಿದ್ಯಾಲಯದ ಪ್ರಾಚಾರ್ಯೆ ಪ್ರಭಾವತಿ, ಕೆನರಾ ಬ್ಯಾಂಕ್ ವಿಶ್ರಾಂತ ಪ್ರಬಂಧಕ ಕಾಶೀನಾಥ್ ಹಾಗೂ ಶಾಲಾ ಪೋಷಕ ವರ್ಗ ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ಇಂದಿನಿಂದ 'ಶರಣರು ಕಂಡ ಶಿವ' ಪ್ರವಚನ ಮಾಲೆ

ಮಲೇಬೆನ್ನೂರು : ಭಾರತ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಮತ್ತು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮಲೇಬೆನ್ನೂರು ಶಾಖೆಯ 25 ನೇ ವರ್ಷದ ಬೆಳ್ಳಿ ಮಹೋತ್ಸವದ ಅಂಗವಾಗಿ 'ಶರಣರು ಕಂಡ ಶಿವ' ಪ್ರವಚನ ಮಾಲೆ ಇಂದಿನಿಂದ ದಿನಾಂಕ 18 ರವರೆಗೆ ಪ್ರತಿದಿನ ಸಂಜೆ 6.30 ರಿಂದ 7.30 ರವರೆಗೆ ಮಲೇಬೆನ್ನೂರಿನ ನೀರಾವರಿ ಇಲಾಖೆ ಆವರಣದಲ್ಲಿ ನಡೆಯಲಿದೆ. ಪ್ರವಚನಕಾರರಾದ ಡಾ. ಬಿ.ಕೆ. ಬಸವರಾಜ ರಾಜಋಷಿಗಳು ಪ್ರವಚನ ನಡೆಸಿಕೊಡುವರು.

ಪ್ರವಚನ ಮಾಲೆಯ ಉದ್ಘಾಟನಾ ಸಮಾರಂಭ ಇಂದು ಸಂಜೆ 5 ಗಂಟೆಗೆ ನಡೆಯಲಿದ್ದು, ಈಶ್ವರೀಯ ವಿಶ್ವವಿದ್ಯಾಲಯ ಹುಬ್ಬಳ್ಳಿಯ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ಸಾನ್ನಿಧ್ಯ ವಹಿಸುವರು. ಅಧ್ಯಕ್ಷತೆಯನ್ನು ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜಿ ವಹಿಸುವರು. ಕಾರ್ಯಕ್ರಮವನ್ನು ದಾವಣಗೆರೆಯ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಎಸ್. ರಾಮಪ್ಪ, ಬಿ.ಪಿ. ಹರೀಶ್, ಹೆಚ್.ಎಸ್. ಶಿವಶಂಕರ್, ಆರ್. ರವಿ, ಎ. ಸುರೇಶ್, ಚಂದ್ರಕಾತ್ ಹರಿಹರ, ಡಾ. ಲಕ್ಷ್ಮಿ ದೇವಿ, ಬಿ. ಪಂಚಪ್ಪ, ಬಿ. ಚಿದಾನಂದಪ್ಪ, ರವಿಕುಮಾರ್, ಡಾ. ಹನುಮಂತಪ್ಪ, ರಾಮಲಿಂಗಪ್ಪ, ಅಮಿತ್ ಶಿವಮಾಲಿ, ರಾಹುಲ್ ಅಶೋಕ ಮುದ್ದೆಪ್ಪ ಗೋಲ್, ಎಸ್.ಜಿ. ಶಿವಕುಮಾರ್, ವಸಂತ ದೇವಾಡಿಗ ಆಗಮಿಸುವರು.

## ಮಂಜು ಮುಸುಕಿದ ಕಾರಣದಿಂದ 480 ರೈಲುಗಳ ಮೇಲೆ ಪರಿಣಾಮ

ನವದೆಹಲಿ, ಜ. 8 – ಮಂಜು ಮುಸುಕಿದ ವಾತಾವರ ಣದ ಕಾರಣದಿಂದ 480 ರೈಲುಗಳ ಸಂಚಾರದ ಮೇಲೆ ಪರಿಣಾಮವಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ. 335 ರೈಲುಗಳು ವಿಳಂಬವಾಗಿವೆ, 88 ರೈಲುಗಳು ರದ್ದಾಗಿವೆ, 31 ರೈಲುಗಳ ಮಾರ್ಗದ ಬದಲಿಸಲಾಗಿದೆ ಎಂದು ಸಚಿವಾಲಯ ಹೇಳಿದೆ.


ವಾಣಿಜ್ಯೋದ್ದೇಶಕ್ಕೆ ಕಾರ್ನರ್ ಕಾಂಪ್ಲೆಕ್ಸ್ ಬಾಡಿಗೆಗೆ ದೊರೆಯುತ್ತದೆ

ನೆಲ ಮಾಳಿಗೆ 2200 sqft, 1ನೇ ಮಹಡಿ, 2500 sqft, ಎರಡನೆ ಮಹಡಿ 2500 sqft, ಪಾರ್ಕಿಂಗ್ ಸೌಲಭ್ಯವಿದೆ.

ಬ್ಯಾಂಕ್, ಹಾಸ್ಪಿಟಲ್, ಆಫೀಸ್, ಕಾಲೇಜ್ ಸೂಪರ್ ಮಾರ್ಕೆಟ್‌ಗೆ ಸೂಕ್ತವಾಗಿವೆ.

ಡಿಸಿಎಂ ಲೇಔಟ್, 1ನೇ ಮೇನ್ ರೋಡ್, ದಾವಣಗೆರೆ.

ಫೋ. : 99806 67471, 94488 12769, 98807 78262



ಹತ್ತನೇ ವರ್ಷದ ಪುಣ್ಯಸ್ಮರಣೆ



ನಿಧನ : 09.01.2013

ದಿ. ಗಾಯತ್ರಿ ಬಸವರಾಜ್

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ನೀವು ನಮ್ಮಿಂದ ದೂರವಾದರೂ ನೀವು ಹಾಕಿಕೊಟ್ಟ
ಮಾರ್ಗದರ್ಶನ ಕುಟುಂಬ ವರ್ಗಕ್ಕೆ ಆದರ್ಶವಾಗಿದೆ.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ.
ನೀವು ತೋರಿಸಿಕೊಟ್ಟ ಸನ್ಮಾರ್ಗದಲ್ಲೇ ಸದಾ ಮುನ್ನಡೆಯುತ್ತಿರುವ,
ದುಃಖತಪ್ತ ಕುಟುಂಬ ವರ್ಗ

ಪತಿ : ಐ. ಬಸವರಾಜಪ್ಪ,
ವರ್ತಕರು ಹಾಗೂ ಮಾಜಿ ಅಧ್ಯಕ್ಷರು, ಕನಕ ಕೋ-ಆಪರೇಟಿವ್ ಬ್ಯಾಂಕ್, ದಾವಣಗೆರೆ.
ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ದಾವಣಗೆರೆ.


## ನಗರದಲ್ಲಿ ಇಂದು ಜಿಲ್ಲಾ ಖಾಸಗಿ ಶಾಲೆ ಆಡಳಿತ ಮಂಡಳಿಗಳ ಒಕ್ಕೂಟದ ಸಭೆ

ದಾವಣಗೆರೆ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ವಾರ್ಷಿಕ ಮಹಾಸಭೆಯು ಇಂದು ಬೆಳಿಗ್ಗೆ 10.30 ಕ್ಕೆ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ ಹಿರೇಮಠದಲ್ಲಿ ನಡೆಯಲಿದೆ ಎಂದು ಅಧ್ಯಕ್ಷ ಟಿ.ಎಂ. ಉಮಾಪತಯ್ಯ ತಿಳಿಸಿದ್ದಾರೆ.

ಮಹಾಸಭೆಯ ನಂತರ ಪ್ರಸ್ತುತ ಶೈಕ್ಷಣಿಕ ವಿದ್ಯಮಾನಗಳ ಕುರಿತು ಟೀಚ್‌ಮೆಂಟ್ ಇ ಆರ್ ಪಿ ಸಲ್ಯೂಷನ್ಸ್ ಬೆಂಗಳೂರು ಟೀಚ್‌ಮೆಂಟ್ ಆಪ್ ಕುರಿತು ಪ್ರಾತ್ಯಕ್ಷಿಕೆ, ಅಂಕಿತ್ ಎಂಟರ್‌ಪ್ರೈಸಸ್ ಹುಬ್ಬಳ್ಳಿ -ಗೋವಾ ಇವರ ವತಿಯಿಂದ ಕೋಡಿಂಗ್ ಕ್ಲಾಸ್ ಬಗ್ಗೆ ಮಾಹಿತಿ ಮತ್ತು ಅಜಯ್ ಎಂಟರ್‌ಪ್ರೈಸಸ್ ಹುಬ್ಬಳ್ಳಿ ಪಠ್ಯಪುಸ್ತಕ ವಿತರಕರು ಇವರು ಎನ್‌ಇಪಿ ಕುರಿತಾಗಿ ಮಾಹಿತಿಯನ್ನು ನೀಡಲಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ಸಿ. ರಾಮಮೂರ್ತಿ ತಿಳಿಸಿದ್ದಾರೆ.

## ಪಾಕ್ ಗಡಿಯಲ್ಲಿ ಸುರಂಗ ಪತ್ತೆಗೆ ಡ್ರೋನ್ ರಡಾರ್‌ಗಳ ಬಳಕೆ

ನವದೆಹಲಿ, ಜ. 8 – ಜಮ್ಮು ವಲಯದ ಭಾರತ – ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿಯಲ್ಲಿ ಸುರಂಗ ತೋಡಿ ನುಸುಳುವಿಕೆ ನಡೆಸುವುದನ್ನು ತಪ್ಪಿಸಲು ಡ್ರೋನ್ ರಡಾರ್‌ಗಳನ್ನು ಬಳಸಲು ಗಡಿ ಭದ್ರತಾ ಪಡೆಯಾದ ಬಿ.ಎಸ್.ಎಫ್. ಮುಂದಾಗಿದೆ.

ದೇಶೀಯವಾಗಿ ರೂಪಿಸಲಾದ ಈ ಉಪಕರಣವನ್ನು ಬಳಸಿ ಸುರಂಗ ಪತ್ತೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸುರಂಗಗಳ ಮೂಲಕ ನುಸುಳುವಿಕೆ, ಶಸ್ತ್ರಾಸ್ತ್ರ ಸಾಗಣೆ ಹಾಗೂ ಮಾದಕ ಸಾಗಣೆ ನಡೆಸುವ ಸಂಚು ರೂಪಿಸಲಾಗುತ್ತಿತ್ತು. ಕಳೆದ 3 ವರ್ಷಗಳಲ್ಲಿ ಗಡಿಯಲ್ಲಿ 5 ಸುರಂಗಗಳನ್ನು ಬಿ.ಎಸ್.ಎಫ್. ಪತ್ತೆ ಮಾಡಿದೆ. ಈ ಹಿನ್ನೆಲೆಯಲ್ಲಿ ಭೂಗತ ಸುರಂಗಗಳ ಪತ್ತೆಗೆ ಆಧುನಿಕ ತಂತ್ರಜ್ಞಾನ ಬಳಕೆ ಮಾಡಲಾಗುತ್ತಿದೆ.

ಭಾರತದ ಕಂಪನಿಯೊಂದು ಡ್ರೋನ್ ರಡಾರ್ ರೂಪಿಸಿದೆ. ರಡಾರ್‌ಗಳನ್ನು ಡ್ರೋನ್‌ಗಳ ಮೇಲೆ ಅಳವಡಿಸಿ ಅವುಗಳ ಮೂಲಕ ಬಲವಾದ ತರಂಗಗಳನ್ನು ಹರಿ ಬಿಡಲಾಗುತ್ತದೆ. ಇದರಿಂದ ಸುರಂಗಗಳ ಪತ್ತೆ ಸಾಧ್ಯವಾಗಲಿದೆ. ಆದರೆ, ಡ್ರೋನ್‌ಗಳ ಹಾರಾಡುವಾಗ ಸಾಕಷ್ಟು ದೂಳು ಸೃಷ್ಟಿಸುತ್ತವೆ. ಇದರಿಂದಾಗಿ ರಡಾರ್‌ಗಳಿಗೆ ಅಡಚಣೆಯಾಗುತ್ತದೆ. ಹೀಗಾಗಿ ಈ ತಂತ್ರಜ್ಞಾನ ಎಷ್ಟು ಸಶಕ್ತ ಎಂಬುದರ ಬಗ್ಗೆ ಇನ್ನೂ ಅಧ್ಯಯನ ನಡೆಸಲಾಗುತ್ತಿದೆ.

## ಬಿಜೆಪಿ ಗಂಗೆಯಂತೆ, ವಿರೋಧಿಗಳು ಇಲ್ಲಿ ಮುಳುಗಿ ಪಾಪ ತೊಳೆಯಿರಿ : ತ್ರಿಪುರ ಸಿಎಂ

ಅಗರ್ತಲ, ಜ. 8 – ಬಿಜೆಪಿ ಗಂಗಾ ನದಿ ಇದ್ದಂತೆ. ವಿರೋಧ ಪಕ್ಷಗಳ ನಾಯಕರು ಇದರಲ್ಲಿ ಮುಳುಗಿ ಎಲ್ಲ ಪಾಪಗಳನ್ನು ತೊಳೆದುಕೊಳ್ಳಬಹುದು ಎಂದು ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸಹ ಹೇಳಿದ್ದಾರೆ.

ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಸ್ಟಾಲಿನ್ ಹಾಗೂ ಲೆನಿನ್ ಸಿದ್ಧಾಂತಗಳಲ್ಲಿ ಈಗಲೂ ನಂಬಿಕೆ ಹೊಂದಿರುವವರು ಬಂದು ಬಿಜೆಪಿ ಸೇರಬೇಕು. ಬಿಜೆಪಿ ಗಂಗಾ ನದಿ ಇದ್ದಂತೆ. ಇಲ್ಲಿ ಮುಳುಗಿದರೆ ನಿಮ್ಮ ಎಲ್ಲ ಪಾಪಗಳು ನಿವಾರಣೆಯಾಗುತ್ತವೆ ಎಂದಿದ್ದಾರೆ.

ಬಿಜೆಪಿಯ ರೈಲು ಬೋಗಿಯಲ್ಲಿ ಇನ್ನೂ ಸೀಟುಗಳು ಖಾಲಿ ಇವೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ನಿಮ್ಮನ್ನೆಲ್ಲ ನಿಗದಿತ ತಾಣಕ್ಕೆ ಕರೆದುಕೊಂಡು ಹೋಗುತ್ತಾರೆ ಎಂದೂ ಅವರು ಹೇಳಿದ್ದಾರೆ.

## ಬಸಾಪುರದಲ್ಲಿ ಬನಶಂಕರಿ ಜಾತ್ರೆ



ದಾವಣಗೆರೆ, ಜ. 8- ತಾಲ್ಲೂಕಿನ ಬಸಾಪುರ ಗ್ರಾಮದಲ್ಲಿ ಬನದ ಹುಣ್ಣಿಮೆ ಪ್ರಯುಕ್ತ ಶ್ರೀ ಬನಶಂಕರಿ ದೇವಿಗೆ ವಿಶೇಷ ಪೂಜಾಲಂಕಾರ ಮತ್ತು ಭಕ್ತಾದಿಗಳಿಗೆ ಪ್ರಸಾದ ವಿನಿಯೋಗದ ವ್ಯವಸ್ಥೆ ಮಾಡಲಾಗಿತ್ತು. ಸಾವಿರಾರು ಭಕ್ತರು ದೇವಿಯ ದರ್ಶನ ಪಡೆದು ಪ್ರಸಾದ ಸೇವನೆ ಮಾಡುವ ಮೂಲಕ ಶ್ರೀ ಬನಶಂಕರಿ ದೇವಿಯ ಕೃಪೆಗೆ ಪಾತ್ರರಾದರು.

## ನಾಳೆ ನಿವೃತ್ತ ಪಿಂಚಣಿದಾರರ ಪ್ರತಿಭಟನೆ

ದಾವಣಗೆರೆ, ಜ. 8- ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿ ಇಪಿಎಫ್ ಪಿಂಚಣಿ ಇಲಾಖೆ ತಮ್ಮ ಅನುಕೂಲಕ್ಕೆ ತಕ್ಕಂತೆ ಮಾರಕ ಸುತ್ತೋಲೆ ಹೊರಡಿಸಿ ನಿವೃತ್ತ ಪಿಂಚಣಿದಾರರಿಗೆ ಅನ್ಯಾಯ ಮಾಡುತ್ತಿರುವುದನ್ನು ಖಂಡಿಸಿ ನಾಡಿದ್ದು ದಿನಾಂಕ 10 ರಂದು ಪಿಂಚಣಿ ಇಲಾಖೆ ಮುಂದೆ ರಾಷ್ಟ್ರೀಯ ಸಂಘರ್ಷ ಸಮಿತಿ ಶಾಂತಿಯುತ ಪ್ರತಿಭಟನೆ ನಡೆಸಲಿದೆ ಎಂದು ಎನ್‌ಎಸಿ ಸಂಘಟನೆಯ ಕೆ. ಎಂ. ಮರುಳಸಿದ್ಧಯ್ಯ ತಿಳಿಸಿದ್ದಾರೆ.

## ಶಿರಮನಹಳ್ಳಿಯಲ್ಲಿ ಇಂದು ಪ್ರವಚನ

ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವದ ಅಂಗವಾಗಿ ಇಂದು ರಾತ್ರಿ ಗ್ರಾಮದ ದೇವರುಗಳನ್ನು ಶ್ರೀ ಚೌಡೇಶ್ವರಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗುವುದು ಮತ್ತು ಪುರಾಣ ಪ್ರವಚನ ನಡೆಯುವುದು. ರಾತ್ರಿ ಶ್ರೀ ದುರ್ಗಾಂಬಿಕ ಭಜನಾ ಸಂಘದಿಂದ ಭಜನಾ ಕಾರ್ಯಕ್ರಮ ನಡೆಯುವುದು.

## ಚೀನಾ : ಲಾರಿ ಹರಿದು 19 ಸಾವು

ಬೀಜಿಂಗ್, ಜ. 8 – ಚೀನಾದ ಜಿಯಾಂಗ್‌ಶಿ ಪ್ರಾಂತ್ಯ ದಲ್ಲಿ ಶವಯಾತ್ರೆ ನಡೆಸುತ್ತಿದ್ದವರ ಮೇಲೆ ಲಾರಿಯೊಂದು ಹರಿದು 19 ಜನ ಸಾವನ್ನಪ್ಪಿದ ಘಟನೆ ನಡೆದಿದೆ. ನಚಾಂಗ್ ಕೌಂಟಿಯಲ್ಲಿ ನಡೆದ ಈ ಅಪಘಾತದಲ್ಲಿ ಇತರೆ 20 ಜನ ಗಾಯಗೊಂಡಿದ್ದಾರೆ.


ಆರನೇ ವರ್ಷದ ಪುಣ್ಯ ಸ್ಮರಣೆ



ನಿಧನ : 09.01.2017

ಹುಲ್ಲುಮನೆ ಯಲ್ಲಪ್ಪರ ಶ್ರೀಮತಿ ಹನುಮಮ್ಮ

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು
ನಿಮ್ಮ ಆದರ್ಶಗಳು ನಮಗೆ ದಾರಿದೀಪ ಸದಾ ನಿಮ್ಮ ಸ್ಮರಣೆಯಲ್ಲಿರುವ ...

ಶ್ರೀ ಹುಲ್ಲುಮನೆ ಯಲ್ಲಪ್ಪರ ಹನುಮಂತಪ್ಪ ಮತ್ತು ಮಕ್ಕಳು
ಶ್ರೀ ಹುಲ್ಲುಮನೆ ಯಲ್ಲಪ್ಪರ ರಾಮಚಂದ್ರಪ್ಪ ಮತ್ತು ಮಕ್ಕಳು
ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು
ಹುಲ್ಲುಮನೆ ವಂಶಸ್ಥರು ಹಾಗೂ ಬಂಧು-ಮಿತ್ರರು
ನಿಟುವಳ್ಳಿ, ದಾವಣಗೆರೆ, ಫೋನ್ : 97385 81459, 90089 69070



॥ ಶಿಕ್ಷಣವೇ ಶಕ್ತಿ ॥ ॥ ನಹೀ ಜ್ಞಾನೇನ ಸದೃಶಂ ॥

ದಾವಣಗೆರೆ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ (ರಿ.)

ನಂ. 221/8/9ಎ, ಯೂರೋ ಸ್ಕೂಲ್ ಕ್ಯಾಂಪಸ್, ಶಾಮನೂರು ರಸ್ತೆ, ದಾವಣಗೆರೆ – 577 004.

2022–23ನೇ ಸಾಲಿನ ವಾರ್ಷಿಕ ಮಹಾಸಭೆ ಮತ್ತು ಶೈಕ್ಷಣಿಕ ವಿಚಾರ ಸಂಕಿರಣ

ದಿನಾಂಕ : 09–01–2023ನೇ ಸೋಮವಾರ ಸಮಯ : ಬೆಳಿಗ್ಗೆ 10–30 ರಿಂದ

ಸ್ಥಳ : ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ



ಟಿ.ಎಂ. ಉಮಾಪತಯ್ಯ – ಅಧ್ಯಕ್ಷರು
ಆರ್.ಎಲ್. ಪ್ರಭಾಕರ್ – ಉಪಾಧ್ಯಕ್ಷರು
ಸಂತೋಷ್‌ಕುಮಾರ್ ಎಂ.ಎಸ್. – ಉಪಾಧ್ಯಕ್ಷರು
ಕೆ.ಸಿ. ಲಿಂಗರಾಜು – ಕಾರ್ಯಾಧ್ಯಕ್ಷರು
ಶ್ರೀರಾಮಮೂರ್ತಿ ಸಿ. – ಪ್ರಧಾನ ಕಾರ್ಯದರ್ಶಿ
ಪ್ರಸನ್ನಕುಮಾರ್ ಎ.ಎನ್. – ಸಹ ಕಾರ್ಯದರ್ಶಿ
ಕೆ.ಎಸ್. ಮಂಜುನಾಥ್ ಅಗಡಿ – ಸಹ ಕಾರ್ಯದರ್ಶಿ
ವಿಜಯ್ ರಾಜ್ – ಖಜಾಂಚಿ
ಮಂಜು ಕೆ.ಸಿ. – ಸಂಘಟನಾ ಕಾರ್ಯದರ್ಶಿ
ಮೈನುದ್ದೀನ್ ಹೆಚ್.ಜೆ. – ಸಂಘಟನಾ ಕಾರ್ಯದರ್ಶಿ
ವಿಜಯ್ ಕುಮಾರ್ – ನಿರ್ದೇಶಕರು
ಜಯಣ್ಣ ಹೆಚ್. – ನಿರ್ದೇಶಕರು
ಶಶಿಧರ್ ಟಿ. – ನಿರ್ದೇಶಕರು
ಶ್ರೀಮತಿ ಸಹನಾ ರವಿ – ನಿರ್ದೇಶಕರು
ಶ್ರೀಮತಿ ಅನಸೂಯ ಬಿ. – ನಿರ್ದೇಶಕರು
ಪೃಥ್ವಿರಾಜ್ ಟಿ.ಕೆ. – ನಿರ್ದೇಶಕರು
ಶ್ರೀಮತಿ ಅಶ್ವಿನಿ ಕೃಷ್ಣ – ನಿರ್ದೇಶಕರು
ನಾಗರಾಜ್ ಶೆಟ್ಟಿ ಡಿ.ವಿ. – ನಿರ್ದೇಶಕರು
ಅರವಿಂದ ಪಿ.ಎಸ್. – ನಿರ್ದೇಶಕರು
ಸುರೇಶ ಕೆ. – ನಿರ್ದೇಶಕರು
ರವಿ ಬಿ.ಆರ್. – ನಿರ್ದೇಶಕರು
ಪ್ರಭುಕುಮಾರ್ ಕೆ.ಎಸ್. – ಸಂಚಾಲಕರು
ಎಂ.ಎನ್. ಲೋಕೇಶ್ – ಸಂಚಾಲಕರು
ಸೈಯದ್ ಮನ್‌ಪುಶ್ – ಸಂಚಾಲಕರು

ದಾವಣಗೆರೆ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಸರ್ವರಿಗೂ ಸುಸ್ವಾಗತ

ಭೋಜನ ಕೂಟ : ಮಧ್ಯಾಹ್ನ 2 ಗಂಟೆಗೆ

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte